ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೨-೧೩ ನೇ ಸಾಲಿನ ಎಂ.ಫಿಲ್ ಪದವಿಯ ಸಂಪ್ರಬಂಧದ ಸಾರಲೇಖ

ವಿಷಯ: **ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು - ಸಮೀಕ್ಷಾ ಅಧ್ಯಯನ**

ನೊಂದಣಿ ಸಂಖ್ಯೆ. **BMSBKS/00594**

೨೦೧೨-೧೩

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೨-೧೩ ನೇ ಸಾಲಿನ ಎಂ.ಫಿಲ್ ಪದವಿಯ ಸಂಪ್ರಬಂಧದ ಸಾರಲೇಖ

ವಿಷಯ: **ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು - ಸಮೀಕ್ಷಾ ಅಧ್ಯಯನ**

ನೊಂದಣಿ ಸಂಖ್ಯೆ. **BMSBKS/00594**

೨೦೧೨-೧೩

1045

ವಿಷಯ ಸೂಚಿ

ಕೋಷ್ಠಕಗಳ ಪಟ್ಟಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸಿ. ಸ್ನಾತಕೋತ್ತರ ಸಂಶೋಧನಾ ಕೇಂದ್ರ, ಬೆಂಗಳೂರು. ಈ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2012–13ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು – ಸಮೀಕ್ಷಾ ಅಧ್ಯಯನ"** ಎಂಬ ಸಂಪ್ರಬಂಧವನ್ನು BMSBKS00594 ಇವರು ನನ್ನ ಮಾರ್ಗದರ್ಶನದಲ್ಲಿ ಮತ್ತು ಮೇಲ್ವಿಚಾರಣೆಯಲ್ಲಿ ಸಮರ್ಥವಾಗಿ ಪೂರೈಸುತ್ತಾರೆ. ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು
ದಿನಾಂಕ:

ಮಾರ್ಗದರ್ಶಕರು



ಅಧ್ಯಾಯ–1

ಪೀಠಿಕೆ

ಅಧ್ಯಾಯ 1

ಪೀಠಿಕೆ

ಸಂವಹನಕ್ಕಿರುವ ಅತ್ಯಂತ ಸರಳ ಹಾಗೂ ಆಕರ್ಷಕ ಮಾಧ್ಯಮ ಎಂದರೆ ಭಾಷೆ. ಇದು ನಿಂತ ನೀರಾಗದೆ ನಿರಂತರವಾಗಿ ಹರಿಯುವ ಪ್ರವಾಹ. ಇದರ ಕಲಿಕೆಗೆ ಅನುಕರಣೆ ಎಷ್ಟು ಅವಶ್ಯಕವೋ ಅಷ್ಟೇ ಅವಶ್ಯಕವಾದದು ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆ. ಭಾಷಾ ಕಲಿಕೆಯ ಅನುಕ್ರಮದ ಹಂತವನ್ನು ಡಾ.ಎಂ ಚಿದಾನಂದ ಮೂರ್ತಿಯವರು "ಭಾಷೆಯನ್ನು ಮೊದಲು ಅರಿಯುತ್ತೇವೆ, ನಂತರ ಒರೆಯುತ್ತೇವೆ, ಆನಂತರ ಬರೆಯುತ್ತೇವೆ" ಎಂದಿದ್ದಾರೆ. ಅಂದರೆ ಇದರಿಂದ ಭಾಷಾ ಕಲಿಕೆಗೆ ಬರವಣಿಗೆ ಎಷ್ಟು ಪ್ರಧಾನ ಪಾತ್ರವನ್ನು ವಹಿಸುತ್ತದೆ ಎಂದು ತಿಳಿಯಬಹುದು.

ಹೀಗೆ ಒಂದು ಭಾಷೆಯು ಸ್ಪಷ್ಟ ಉಚ್ಚಾರಣೆ ಮತ್ತು ಬರವಣಿಗೆಯ ಮೂಲಕ ಅದರ ಬಳಕೆ ಉತ್ತಮಗೊಳ್ಳುತ್ತದೆ. ಆದರೆ ಅಂತಹ ಬರಹಗಳಲ್ಲಿ ಅನೇಕ ಕಾಗುಣಿತ ದೋಷಗಳು ಕಂಡುಬರುತ್ತವೆ. ಅವುಗಳ ಲಿಪಿ–ಚಿಹ್ನೆಗಳನ್ನು ಸರಿಯಾಗಿ ಬಳಸಬೇಕಾಗುತ್ತದೆ. ಇವು ಅಕ್ಷರಗಳಿಂದ ಕೂಡಿರುತ್ತದೆ. ಅಕ್ಷರ ಎನ್ನುವುದು ವರ್ಣ ಲಾಲಿತ್ಯದ ಅತಿ ಕನಿಷ್ಠತಮ ಘಟಕ. ಹಾಗೆಯೇ ಇದು ಸ್ಥಾನ ಮತ್ತು ಕರಣಗಳ ಫಲಶೃತಿಯಾಗಿದೆ. ಹೀಗೆ ವರ್ಣ, ಪದ, ವಾಕ್ಯಗಳಿಂದ ಭಾಷೆಯ ಲಿಪಿ ಆರಂಭವಾಗುತ್ತದೆ. ಯಾವುದೇ ಭಾಷಾ ಲಿಪಿಯನ್ನು ಹೊಂದಿರುವ ಪ್ರಪಂಚದ ಪ್ರತಿಯೊಂದು ಭಾಷೆಯಲ್ಲಿಯೂ "ಬರವಣಿಗೆಯ ದೋಷಗಳು" ಉಂಟಾಗುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಹಾಗೆಯೇ ನಮ್ಮ ಕನ್ನಡ ಭಾಷೆಯ ಬಳಕೆಯಲ್ಲಿಯೂ ಕೂಡ ಬರವಣಿಗೆಯ ದೋಷಗಳುಂಟಾಗುವುದನ್ನು ನೋಡಬಹುದು. ಏಕೆಂದರೆ ಕನ್ನಡ ಭಾಷಾ ಬಳಕೆಯಲ್ಲಿ ಶುದ್ಧವಾಗಿ ಉಚ್ಚರಿಸುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರುವುದು ಅಪೇಕ್ಷಣೀಯ.

ಉದಾ: ಕೃಷ್ಣ ಎಂಬಲ್ಲಿ ಕ್ರಷ್ಣ ಎನ್ನವುದು, 'ಹಾಲು' ಬರೆಯುವಲ್ಲಿ 'ಆಲು' ಎಂದು ಬಳಸುವುದು. ಹಾರ್ಧಿಕ ಎಂಬಲ್ಲಿ 'ಹಾರ್ಥಿಕ' ಎಂಬುದಾಗಿ ಹಾಗೆಯೇ 'ಶುಭಾಷಯ' ವನ್ನು 'ಶುಭಾಶಯ' ಎಂಬುದಾಗಿ 'ಅಳು' ಶಬ್ದವನ್ನು 'ಹಳು' ಎಂಬುದಾಗಿ ಬಳಸುತ್ತಿದ್ದಾರೆ. ಇದರಿಂದ ಎಂಥೆಂತಹ ತಪ್ಪುಗಳು ಆಗುತ್ತವೆ ಎಂಬುದನ್ನು ನೋಡಬಹುದು.

ಜಿ.ಪಿ ರಾಜರತ್ನಂ ರವರು ಒಮ್ಮೆ ಗುರು–ಶಿಷ್ಯರ ಸಂಬಂಧವನ್ನು ಕುರಿತು "ಟ್ಯಾಂಕ್ ನಲ್ಲಿ ನೀರಿದ್ದರೆ ಮಾತ್ರ ನಲ್ಲಿಯಲ್ಲಿ ನೀರು ಬರುತ್ತದೆ. ಟ್ಯಾಂಕೇ ಖಾಲಿಯಾದರೆ?" ಇದು ಎಷ್ಟು ಸತ್ಯ. ಇಂತಹ ತಪ್ಪುಗಳಿಗೆ ಅವಕಾಶ ಕೊಡದ ರೀತಿಯಲ್ಲಿ ಮಾರ್ಗದರ್ಶನ ಕೊಡಬೇಕಾಗುತ್ತದೆ. ಏಕೆಂದರೆ ಇಂದು ಜೀವನದ ಪ್ರತಿಯೊಂದು ಸನ್ನಿವೇಶವನ್ನು ಬರವಣಿಗೆ ಆಕ್ರಮಿಸಿಕೊಂಡಿದೆ.

ಹಾಗಾಗಿ ಕನ್ನಡ ಭಾಷೆಯ ಬಳಕೆಯಲ್ಲಿ ಅನೇಕ ಲಿಪಿ–ಚಿಹ್ನೆಗಳಗೆ ಸಂಬಂಧಿಸಿದ ದೋಷಗಳು ಕಂಡುಬರುತ್ತವೆ. ಅದಕ್ಕಾಗಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಯ ೭ನೇ

ತರಗತಿ ಮಕ್ಕಳು ಮಾಡುವ ಬರವಣಿಗೆಯ ದೋಷಗಳನ್ನು ಈ ಸಂಪ್ರಬಂಧದಲ್ಲಿ ಸಮೀಕ್ಷೆಯನ್ನು ಕೈಗೊಂಡು ವಿಶ್ಲೇಷಿಸಲಾಗುವುದು

1.1 ಶಿಕ್ಷಣದ ಅರ್ಥ

'ಶಿಕ್ಷಣ' ಎಂಬ ಪದಕ್ಕೆ ವ್ಯಾಪಕವಾದ ಅರ್ಥವಿದ್ದು, ಅದಕ್ಕೆ ನಿರ್ದಿಷ್ಟವಾಗಿ ಅರ್ಥೈಸುವುದು, ಮತ್ತು ಇದೇ ಶಿಕ್ಷಣ ಎಂದು ಹೇಳುವುದು ಕಠಿಣ ಸಾದ್ಯ. ಪ್ರಸ್ತುತ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಶಿಕ್ಷಣದ ಬಗ್ಗೆ ಮಾತನಾಡುತ್ತಿರುತ್ತಾರೆ. ಇಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣದ ಅಗತ್ಯವಿದೆ. ಅಕ್ಷರಸ್ಥರು, ಅನಕ್ಷರಸ್ಥರು, ವೃತ್ತಿಪರರು ಮೊದಲಾದವರೆಲ್ಲರೂ ತಮ್ಮದೇ ಆದ ದೃಷ್ಟಿಕೋನದಿಂದ ಶಿಕ್ಷಣವನ್ನು ಅರ್ಥೈಸುತ್ತಿದ್ದಾರೆ. ಶಿಕ್ಷಕರು, ಶಿಕ್ಷಣತಜ್ಞರು ಮತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಆಸಕ್ತಿ ಇರುವವರೆಲ್ಲರಿಗೂ ಕಾಡುತ್ತಿರುವ ಒಂದೇ ಒಂದು ಪ್ರಶ್ನೆ ಎಂದರೆ 'ಶಿಕ್ಷಣ ಎಂದರೇನು?' ಇದರ ನಿಜವಾದ ಅರ್ಥ ಯಾವುದು? ಎಂಬುದು ಅತಿಮುಖ್ಯ.

ಸಾಮಾನ್ಯವಾಗಿ ಶಿಕ್ಷಣ ಎಂದರೆ ಶೈಕ್ಷಣಿಕ ಪದವಿ, ವಿದ್ಯಾರ್ಹತೆ, ಅರ್ಹತಾ ಪ್ರಮಾಣ ಪತ್ರ, ಪರೀಕ್ಷೆಗಳಲ್ಲಿ ತೇರ್ಗಡೆ ಮುಂತಾದವುಗಳನ್ನು ಸಾಧಿಸಲು ಯಾವುದು ಸಹಾಯ ಮಾಡುತ್ತದೆಯೋ ಅದೇ ಶಿಕ್ಷಣ.

- ಪಾರಂಪರಿಕವಾಗಿ ನಡೆದು ಬರುತ್ತಿರುವ ಶಾಲಾ ಕಾಲೇಜುಗಳಲ್ಲಿ ನೀಡುವ ಶಿಕ್ಷಣ, ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು
- ಶಾಲಾ ಕಾಲೇಜುಗಳಲ್ಲಿ ಕಲಿಸುವ ವಿವಿಧ ವಿಷಯಗಳಿಗೆ ಸಂಬಂದಿಸಿದ ಜ್ಞಾನಾರ್ಜನೆ.
- ಬರೆಯುವ ಮತ್ತು ಲೆಕ್ಕಿಸುವ ಸಾಮಾನ್ಯ ಜ್ಞಾನ ಬೆಳೆಸುವ ತರಬೇತಿ.
- ಜೀವನಾವಶ್ಯಕ ವಸ್ತುಗಳನ್ನು ಸಂಪಾದನೆ ಮಾಡಿ, ಜೀವನ ನಡೆಸಲು ಬೇಕಾದ ಸಾಮರ್ಥ್ಯ ಬೆಳೆಸುವ ತರಬೇತಿ.
- ವ್ಯಕ್ತಿಗಳಲ್ಲಿ ಕೆಲವು ನಿರ್ದಿಷ್ಟ ಗುಣಗಳನ್ನು ಬೆಳೆಸಿಕೊಂಡು ನಿರ್ದಿಷ್ಟ ಜೀವನ ಶೈಲಿಗೆ ಅಥವಾ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಂಡು ನಿರ್ದಿಷ್ಟ ಮನೋಭಾವನೆಗಳನ್ನು ಬೆಳೆಸಿಕೊಂಡು ಜೀವನ ನಡೆಸುವುದೇ ಶಿಕ್ಷಣ.
- ಮಗುವಿನ ಅಥವಾ ವ್ಯಕ್ತಿಯ ಅಂತರಂಗದಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಬೆಳಕಿಗೆ ತಂದು ಪ್ರಕಾಶಮಾನವಾಗಿ ಬೆಳಗುವಂತೆ ಮಾಡುವುದೇ ಶಿಕ್ಷಣ
- ರೂಪವಿಲ್ಲದ ವಸ್ತುವನ್ನು ಒಂದು ಗೊತ್ತಾದ ಸಮಾಜದ ನಡವಳಿಕೆಗಳಿಗೆ, ನಿಯಮಗಳಿಗೆ, ಮೌಲ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳುವಂತೆ ಮಾಡಿ ತನ್ನ ಬಾಳು ಭವಿಷ್ಯವನ್ನು ಬಂಗಾರವನ್ನಾಗಿ ಮಾಡುವ ಅದಿದೇವತೆ

ಮುಖ್ಯವಾದ ಸೂತ್ರ ನಿರೂಪಣೆಗಳ ಮೂಲಕವೇ ಕಲಿಕೆಯನ್ನು ಬಲಿಷ್ಟಗೊಳಿಸುವ ಒಂದು ಹಗುರವಾದ ಮಾರ್ಗವನ್ನು ನಾವು ಅನುಸರಿಸಬಹುದೆಂದು ತಿಳಿದಿರಲಾರದು. ಭಾವನೆಗಳ ರಚನೆ, ಸೌಂದರ್ಯ ಮತ್ತು ಅವುಗಳ ಶಕ್ತಿಯ ಬಗ್ಗೆ ಪರಿಚಯ ಮಾಡಿಕೊಡಲು ಶಿಕ್ಷಣವು ಸಹಕರಿಸುವುದು.

'Education' ಎಂಬ ಆಂಗ್ಲ ಪದ ಕನ್ನಡದಲ್ಲಿ 'ಶಿಕ್ಷಣ' ಎಂಬ ಪದಕ್ಕೆ ಸಮಾನವಾದುದಾಗಿದ್ದು, 'Educare' ಎಂಬ ಲ್ಯಾಟಿನ್ ಭಾಷೆಯಿಂದ ಬಂದಿದೆ. 'Educare' ಎಂದರೆ 'ಎಳೆದೆತ್ತು' ಅಥವಾ 'ಮೇಲಕ್ಕೆತ್ತು' (to bring up) ಎಂದಾಗುತ್ತದೆ.

ಹಾಗೆಯೇ ಶಿಕ್ಷಣ ಎಂಬ ಪದ ಮತ್ತೊಂದು ಲ್ಯಾಟಿನ್ ಪದವಾದ 'Education' ಎನ್ನುವ ಪದದಿಂದ ಉತ್ಪತ್ತಿಯಾಗಿದೆ. ಅಲ್ಲದೆ ಮತ್ತೊಂದು ಪದ 'Educo' ಎಂಬ ಪದವನ್ನು ಹೋಲುತ್ತದೆ. ಇಲ್ಲಿ 'E' ಎಂದರೆ 'out of' (ಹೊರಗೆ) 'duco' ಎಂದರೆ 'To lead forth' ಎಂದರೆ 'ದಾರಿ ತೋರಿಸುತ್ತಾ ಹೋಗು' ಎಂದಾಗುತ್ತದೆ.

ಅಂದರೆ "ಮಗುವಿನ ಅಥವಾ ವ್ಯಕ್ತಿಯ ಅಂತರಂಗದಲ್ಲಿ ಅಡಗಿರುವ ಸುಪ್ತಶಕ್ತಿಗಳನ್ನು ಬೆಳಕಿಗೆ ತಂದು ಅವನನ್ನು ಪ್ರಕಾಶಮಾನವಾಗಿ ಬೆಳೆಸುವಂತೆ ಮಾಡುವುದೇ ಶಿಕ್ಷಣ."

ಸಂಸ್ಕೃತದಲ್ಲಿ 'ಶಿಕ್ಷಣ' ಎಂಬ ಪದಕ್ಕೆ 'ವಿದ್ಯಾ' ಎಂಬ ಪದ ಬಳಕೆಯಲ್ಲಿದೆ. ಇದು 'ವಿದ್' ಎಂಬ ಧಾತುವಿನಿಂದ ಸೃಷ್ಟಿಯಾಗಿದೆ. 'ವಿದ್ಯಾ' ಎಂದರೆ 'ತಿಳಿ' (to know) ಎಂಬ ಅರ್ಥವಿದೆ.

ಅರೇಬಿಕ್ ಭಾಷಾ ಮೂಲದಿಂದ ಬಂದಿರುವ 'ತಾಲೀಂ' (Taleem) ಎಂಬ ಪದವೂ ಜ್ಞಾನವನ್ನು ಒದಗಿಸುವ ಮತ್ತು ಗಳಿಸುವ ಒಂದು ವಿಧಾನವನ್ನು ಸೂಚಿಸುತ್ತದೆ.

a) ಸಂಕುಚಿತ ಅರ್ಥದಲ್ಲಿ ಶಿಕ್ಷಣ

ಸಂಕುಚಿತ ಅರ್ಥದಲ್ಲಿ ಶಿಕ್ಷಣವೆಂದರೆ "ಶಾಲಾ-ಕಾಲೇಜುಗಳಲ್ಲಿ ಔಪಚಾರಿಕವಾಗಿ ಸಮಯವನ್ನು ನಿಗದಿ ಮಾಡಿ ಕೇವಲ ಪಾಠ ಪ್ರವಚನಗಳಿಗೆ ಮಾತ್ರ ಸೀಮಿತ ಮಾಡಿ ಅವುಗಳನ್ನು ಕಲಿಸುವ ಶಿಕ್ಷಣ ಕ್ರಮ"

ಸಂಕುಚಿತ ಅರ್ಥದಲ್ಲಿ ಶಿಕ್ಷಣವು ಕೇವಲ ನೀತಿ ನಿಯಮಗಳಿಗೆ ಅನುಗುಣವಾಗಿ ಶಾಲೆಯಲ್ಲಿ ನೀಡುವ ಶಿಕ್ಷಣ. ಅಂದರೆ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು, ಪದವಿ ಗಳಿಸಲು ಮತ್ತು ಪದವಿಗೆ ಸೂಕ್ತವಾದ ಪ್ರಮಾಣ ಪತ್ರ ಹೊಂದಲು ಸಹಾಯ ಮಾಡುವುದೇ ಶಿಕ್ಷಣ.

ಶಿಕ್ಷಣದ ಅರ್ಥವನ್ನು ಗಮನಿಸಿದಾಗ ವ್ಯಕ್ತಿಯ ಭವಿಷ್ಯವನ್ನು ರೂಪಿಸುವ ದೃಷ್ಟಿಯಿಂದ ಭವಿಷ್ಯ ಜೀವನಕ್ಕಾಗಿ ನೀಡುವ ತರಬೇತಿಯೇ ಶಿಕ್ಷಣ.

b) ವಿಶಾಲ ಅರ್ಥದಲ್ಲಿ ಶಿಕ್ಷಣ

ವಿಶಾಲ ಅರ್ಥದಲ್ಲಿ 'ಶಿಕ್ಷಣ' ಎಂದರೆ ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನುಂಟು ಮಾಡುವುದು. ಸರ್ವತೋಮುಖ ಎಂದರೆ ಬೌದ್ಧಿಕ, ಮಾನಸಿಕ, ಆಧ್ಯಾತ್ಮಕ ಈ ಮೂರು ಅಂಶಗಳಿಗೆ ಆಧ್ಯತೆ ನೀಡಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅವಕಾಶ ನೀಡುವುದಾಗಿದೆ.

ವಿಶಾಲಾರ್ಥದಲ್ಲಿ ಶಿಕ್ಷಣ ಎಂದರೆ ಮಗುವಿನ ಬೆಳವಣಿಗೆಗೆ ಪೂರಕವಾದ ಅನುಭವ, ಜ್ಞಾನ, ಮುಂತಾದ ಶಕ್ತಿಯನ್ನು ಬೆಳೆಸುವ ಮತ್ತು ಮಗುವನ್ನು ಭವಿಷ್ಯ ಜೀವನಕ್ಕೆ ಅಣಿಗೊಳಿಸುವ ಅಂದರೆ ಮಗುವು 'ತೊಟ್ಟಿಲಿನಿಂದ ಚಟ್ಟದವರೆಗೂ' ನಿರಂತರವಾಗಿ (ಹುಟ್ಟಿನಿಂದ ಸಾವಿನವರೆಗೂ) ಪಡೆಯುವ ಜೀವನಾವುಭವವೇ ಶಿಕ್ಷಣ ಎಂದು ಹೇಳಬಹುದು.

ಮಗುವಿನ ಅಥವಾ ವ್ಯಕ್ತಿಯ ಬಾಳನ್ನು ಹಸನು ಮಾಡುವ ಉದ್ದೇಶದಿಂದ ಪಡೆಯುವ ಶಿಕ್ಷಣ. ಮಗುವನ್ನು ಕ್ರಿಯಾತ್ಮಕವಾಗಿ ಅವಶ್ಯಕತೆಗೆ ತಕ್ಕಂತೆ ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಮಾಡುವ ಗುರಿಯಿಂದ ಕೂಡಿರುವುದೇ ಶಿಕ್ಷಣ.

c) ಶಿಕ್ಷಣದ ವ್ಯಾಖ್ಯೆಗಳು

ಶಿಕ್ಷಣದ ಅರ್ಥದ ಬಗ್ಗೆ ಭಾರತೀಯ ಶಿಕ್ಷಣತಜ್ಞರು ಹಾಗೂ ಪಾಶ್ಚಿಮಾತ್ಯ ಶಿಕ್ಷಣ ತಜ್ಞರು, ತತ್ವಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

d) ಶಿಕ್ಷಣ ಕುರಿತು ಭಾರತೀಯ ಚಿಂತಕರ ಹೇಳಿಕೆಗಳು

ಋಗ್ವೇದದಲ್ಲಿ 'ಯಾವುದು ಮಾನವನನ್ನು ಸ್ವಾವಲಂಬಿಯನ್ನಾಗಿ, ನಿಸ್ವಾರ್ಥಿಯನ್ನಾಗಿ ಮಾಡುತ್ತದೆಯೋ ಅದೇ ಶಿಕ್ಷಣ".

ಉಪನಿಷತ್ತಿನ ಪ್ರಕಾರ " ಯಾವುದರ ಪರಮ ಗುರಿಯು ಮೋಕ್ಷವಾಗಿರುತ್ತದೆಯೋ ಅದುವೇ ಶಿಕ್ಷಣ"

ಚಾಣಕ್ಯನ ಪ್ರಕಾರ "ಶಿಕ್ಷಣ ದೇಶಕ್ಕಾಗಿ ಹಾಗೂ ದೇಶಾಭಿಮಾನಕ್ಕಾಗಿ ತರಬೇತಿಯಾಗಿದೆ."

ಗುರುನಾನಕ್ "ಸಮಾಜಸೇವೆಯೇ ಶಿಕ್ಷಣ"

ರವೀಂದ್ರನಾಥ ಟ್ಯಾಗೋರ್ " ಆತ್ಮಪ್ರಕಾಶ, ಪ್ರೇಮಿಗಳೆಂಬ ಸ್ಥಿರ ಸಂಪತ್ತನ್ನು ತಂದುಕೊಟ್ಟ ಮಗುವನ್ನು ಸುಂದರ ಯೋಗ್ಯ, ಸತ್ಯವಂತನಾದ ವ್ಯಕ್ತಿಯನ್ನಾಗಿ ಮಾಡುವುದೇ ಶಿಕ್ಷಣ" ಎಂದಿದ್ದಾರೆ.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ " ಮಗುವು ಮಾನವನಾಗಿ, ನಾಗರೀಕನಾಗಿ, ಎಲ್ಲರೊಡನೆ ಸ್ನೇಹ ಗೌರವ ಘನತೆಗಳಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ".

ಗಾಂಧೀಜಿಯವರ ಪ್ರಕಾರ "ಕೇವಲ ಅ,ಆ,ಇ,ಈ ಕಲಿಸುವುದು ಶಿಕ್ಷಣವಲ್ಲ. ಶಿಕ್ಷಣವೆಂದರೆ ಸತ್ಯಶೋಧನೆಯ ವಿವೇಕ"

ಕೈಲಾಸಂ ರವರ ಪ್ರಕಾರ "ಸುತ್ತಮುತ್ತಲೂ ಇರುವ ಜನರಿಗೆ ಉಪಯೋಗವಾಗುವಂತೆ ಜೀವಿಸುವ ಕಲೆಯನ್ನು ಕಲಿಸಿ ಕೊಡುವುದೇ ಶಿಕ್ಷಣ"

ಶ್ರೀ ಪ್ರಕಾಶ ರವರ ಪ್ರಕಾರ "ಕರ್ತವ್ಯನಿರತ, ಪ್ರಾಮಾಣಿಕ, ಸತ್ಯ ಸಂಧ, ಸತ್ವಪೂರ್ಣ ಅಸಮಾನ್ಯ ಆದಂತಹ ಪ್ರಜಾಕೋಟಿಯನ್ನು ನಿರ್ಮಿಸುವುದೇ ಶಿಕ್ಷಣ"

1964–66 ರ ಭಾರತೀಯ ಶಿಕ್ಷಣ ಆಯೋಗದ ಪ್ರಕಾರ " ಭಾರತೀಯ ಸಂಪ್ರದಾಯದಂತೆ ಶಿಕ್ಷಣ ಕೇವಲ ಹೊಟ್ಟೆ ತುಂಬಿಕೊಳ್ಳುವ ಕಾರ್ಖಾನೆ ಅಲ್ಲ. ಸತ್ಯ ಹಾಗೂ ಇತರ ಗುಣಗಳನ್ನು ಅಳವಡಿಸಿಕೊಳ್ಳಲು ಮಾನವನ ಆತ್ಮಕ್ಕೆ ನೀಡುವ ತರಬೇತಿಯಾಗಿದೆ. ಇದು ಮಾನವನ ದ್ವಿತೀಯ ಜನ್ಮ."

e) ಶಿಕ್ಷಣ ಕುರಿತು ಪಾಶ್ಚಿಮಾತ್ಯ ಚಿಂತಕರ ಹೇಳಿಕೆಗಳು

ಸಾಕ್ರಟಿಸ್ ಪ್ರಕಾರ "ಮಗು ಅಥವಾ ವ್ಯಕ್ತಿಗೆ ಸತ್ಯವನ್ನು ತಿಳಿಯಪಡಿಸಿ ಅದರಂತೆ ಅದನ್ನು ವ್ಯವಹಾರದಲ್ಲಿ ತರುವಂತೆ ಮಾಡುವುದೇ ಶಿಕ್ಷಣ"

ಅರಿಸ್ಟಾಟಲ್ "ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ"

ಜಾನ್ ಡ್ಯೂಯಿ "ಪರಿಸರವನ್ನು ನಿಯಂತ್ರಿಸಿ ತನ್ನ ಶಕ್ತಿಯನ್ನು ಸಾರ್ಥಕಗೊಳಿಸುವ ಸಾಮರ್ಥ್ಯವನ್ನು ಬೆಳೆಸುವುದೇ ಶಿಕ್ಷಣ".

ಹರ್ಬರ್ಟ್ ಪ್ರಕಾರ "ಮಗುವಿನ ಶಿರ, ಹೃದಯ, ಕರಗಳ ಬೆಳವಣಿಗೆಯಾಗಿ ಮಕ್ಕಳಲ್ಲಿ ಶ್ರದ್ಧೆ, ಆಸೆ, ದಾನ, ನ್ಯಾಯ, ವಿವೇಕ, ನಿಗ್ರಹ, ಧೈರ್ಯ ಮೊದಲಾದ ಸದ್ಗುಣಗಳು ನೆಲೆಸುವಂತೆ ಮಾಡುವುದೇ ಶಿಕ್ಷಣ."

ಫ್ರೊಬೆಲ್ "ಆಂತರಿಕವಾಗಿರುವುದನ್ನು ಹೊರತಂದು ಆಂತರಿಕ ಭಾವನೆಗಳೊಡನೆ ಬಾಹ್ಯ ಜಗತ್ತಿನ ಸಂಬಂಧವನ್ನು ಉಂಟು ಮಾಡುವುದು ಹಾಗೂ ಪವಿತ್ರ ಶ್ರದ್ಧಾಪೂರ್ಣ ಜೀವನವನ್ನು ನಡೆಸುವಂತೆ ಮಾಡುವುದೇ ಶಿಕ್ಷಣ."

ಮಾಂಟೋಸರಿ "ಅನುಭವದಿಂದ ತಾನಾಗಿ ಕಲಿಯುವುದು ಅಥವಾ ಶಿಶುವಿನ ಜೀವನವು ಸ್ವಾಭಾವಿಕವಾಗಿ ಬೆಳೆಯುವಂತೆ ಮಾಡುವ ಕ್ರಿಯಾತ್ಮಕ ಸಹಾಯವೇ ಶಿಕ್ಷಣ."

f) ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವ

ಶಿಕ್ಷಣ ಹಿಂದಿನ ಕಾಲದಿಂದಲೂ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದೆ. ಕಾರಣ ಶಿಕ್ಷಣವು ಅಜ್ಞಾನದಿಂದ ಸುಜ್ಞಾನದ ಕಡೆಗೆ ಮತ್ತು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡುಯ್ಯುವುದು ಎಂದು ನಂಬಲಾಗಿದೆ.

ಮನುಷ್ಯನ ನಿತ್ಯಜೀವನದಲ್ಲಿ ಶಿಕ್ಷಣವು ಹಾಸುಹೊಕ್ಕಾಗಿದ್ದು, ಮಾರ್ಗದರ್ಶನವನ್ನು ನೀಡುತ್ತದೆ. ವಿದ್ಯೆ ಇಲ್ಲದ ಯಾವ ಮನುಷ್ಯನೂ ಪ್ರಗತಿ ಹೊಂದಲು ಸಾಧ್ಯವಿಲ್ಲ. ಹೊಂದಿದರೂ ಅದು ಶಾಶ್ವತವಲ್ಲ.

ಶಿಕ್ಷಣವೆಂಬ ಕಟ್ಟಡವನ್ನು ಜ್ಞಾನವೆಂಬ ಕಂಬಗಳಿಂದ ನಿರ್ಮಿಸಲಾಗಿದೆ. ಯಾವ ಮನುಷ್ಯನಲ್ಲಿ ವಿದ್ಯೆ ಇರುತ್ತದೆಯೋ ಅವನಲ್ಲಿ ವಿನಯವೂ ಇರುತ್ತದೆ. ಅವನು ಸುಖ ಜೀವನವನ್ನು ನಡೆಸುತ್ತಾನೆ. ಆದ್ದರಿಂದಲೇ ಸುಭಾಷಿತಕಾರರು "ವಿದ್ಯಾಹೀನಃ ಪಶುಃ" ಎಂದಿದ್ದಾರೆ.

"ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದವನ ಬರಿ ಮುಖವು ಹಾಳೂರ ರಣಹದ್ದಿನಂತಿಕ್ಕು ಸರ್ವಜ್ಞ"

ಎಂಬ ಸರ್ವಜ್ಞನ ನುಡಿಗಳು ಶಿಕ್ಷಣದ ಮಹತ್ವವನ್ನು ಸರಳವಾಗಿ ಅತಿ ಸೂಕ್ಷ್ಮವಾಗಿ ಎತ್ತಿ ತೋರಿಸುತ್ತವೆ. ಸಂಸ್ಕೃತ ಸುಭಾಷಿತ ಹೇಳುವಂತೆ " ಸ್ವದೇಶಿ ಪೂಜ್ಯತೆ ರಾಜಾ, ವಿದ್ವಾನ್ ಸರ್ವತ್ರ ಪೂಜ್ಯತೆ" ಅಂದರೆ ಶಿಕ್ಷಣ ಪಡೆದ ವ್ಯಕ್ತಿ ಎಲ್ಲಾ ಕಡೆಯೂ ಪೂಜನೀಯನೆನಿಸುತ್ತಾನೆ. ಅಲ್ಲಮ ಪ್ರಭು ಹೇಳುವಂತೆ,

ಕೃತಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
ಆಗಲಿ ಮಹಾ ಪ್ರಸಾದವೆಂದನೆಯ್ಯ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ
ಆಗಲಿ ಮಹಾ ಪ್ರಸಾದವೆಂದನೆಯ್ಯ
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾ ಪ್ರಸಾದವೆಂದನೆಯ್ಯ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದನೆಯ್ಯ
ಗುಹೇಶ್ವರಾ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರೆಗಾದೆನು

ನಿತ್ಯ ಜೀವನದಲ್ಲಿ ಮನುಷ್ಯನಿಗೆ ಇತರೆ ಅವಶ್ಯಕತೆಗಳಿದ್ದಂತೆ ಶಿಕ್ಷಣದ ಅವಶ್ಯಕತೆಯೂ ಯಾವುದೇ ಒಂದು ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕಾದರೆ ಶಿಕ್ಷಣವು ಒಂದು ಉತ್ತಮ ಸಾಧನವಾಗಿದೆ. ಶಿಕ್ಷಣವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಿಳುವಳಿಕೆಯನ್ನು ಮೂಡಿಸಲು ಸತ್ಪ್ರಜೆಗಳಿಂದ ಕೂಡಿದ ಉತ್ತಮ ಸಮಾಜದ ನಿರ್ಮಾಣಕ್ಕೆ ರಾಷ್ಟ್ರೀಯ ಅಭಿವೃದ್ಧಿಗೆ ಶಿಕ್ಷಣದ ಅವಶ್ಯಕತೆ ಇರುತ್ತದೆ. ಕಲಿಕೆ, ಗುರು, ಶಿಷ್ಯ, ಬೋಧನೆ, ಫಲಿತಗಳಲ್ಲಿ ಉನ್ನತ ಶಿಕ್ಷಣವು ಪ್ರಾಮುಖ್ಯತೆ ಪಡೆಯಬೇಕಾದರೆ ಪ್ರಾಥಮಿಕ ಶಿಕ್ಷಣ ಭದ್ರ ಬುನಾದಿಯಾಗುವುದು ಅವಶ್ಯಕವಾಗಿದೆ.

g) ಶಿಕ್ಷಣದಲ್ಲಿ ಮಾತೃಭಾಷೆಯ ಮಹತ್ವ

ಮಗು ತನ್ನ ವ್ಯಕ್ತಿತ್ವವನ್ನು ವಿಕಾಸ ಮಾಡಿಕೊಂಡು ಸಮಾಜ ಜೀವಿಯಾದಂತೆ ಅದು ತನ್ನ ಮನೆಯವರು, ನೆರೆಹೊರೆಯವರು ಮತ್ತು ಗೆಳೆಯರ ಜೊತೆ ವ್ಯವಹರಿಸುವಾಗ, ಯಶಸ್ವಿಯಾಗಿ ಸಂಪರ್ಕ ಸಾಧಿಸಲು ಕನ್ನಡ ಮಾತೃಭಾಷೆಯು ಅವಶ್ಯಕವಾಗಿ ಬೇಕು. ಮಕ್ಕಳ ಆಲೋಚನೆ ಹಾಗೂ ಸೃಜನಶೀಲ

ಕೌಶಲ ಮತ್ತು ಸಾಮರ್ಥ್ಯಗಳು ಮಾತೃಭಾಷೆಯಲ್ಲೇ ಸಹಜ ಮತ್ತು ಸ್ಪಷ್ಟವಾಗಿ ರೂಪುಗೊಳ್ಳುತ್ತವೆ. ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಣದ ಮಾಧ್ಯಮದ ನಡುವೆ ನೇರ ಸಂಬಂದವಿದೆ.

ಶಿಕ್ಷಣ ಅರ್ಥಪೂರ್ಣವಾಗಬೇಕಾದರೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಮಾತೆಯಷ್ಟೆ ಅಗತ್ಯ. ಮಗುವಿನ ವ್ಯಕ್ತಿತ್ವ ವಿಕಾಸಕ್ಕೆ ಮತ್ತು ತಾನು ಹುಟ್ಟಿ ಬೆಳೆಯುತ್ತಿರುವ ಸಮಾಜಕ್ಕೆ ತನ್ನ ಜೀವನ ಮಟ್ಟ, ಸಂಸ್ಕೃತಿಯನ್ನು ಉತ್ಕೃಷ್ಟವಾಗಿಸಿಕೊಳ್ಳಲು ಶಿಕ್ಷಣದಲ್ಲಿ ಮಾತೃಭಾಷೆಯು ಅವಶ್ಯಕವಾಗಿ ಬೇಕಾಗಿರುತ್ತದೆ.

ಶಿಕ್ಷಣದಲ್ಲಿ ಮಾತೃಭಾಷೆಯು ಅವಶ್ಯಕವಾಗಿ ಎನ್ನುವುದಕ್ಕಿಂತ ಹೆಚ್ಚಾಗಿ ಅದರ ಜೊತೆಗೆ ಶಿಕ್ಷಣದಲ್ಲಿ ಮಾತೃಭಾಷೆಯ ಒಂದು ಮಾಧ್ಯಮವಾಗಿಯೇ ಬೇಕಾಗುತ್ತದೆ. ಈ ವಿಷಯವನ್ನು ಇಲ್ಲಿ ಕನ್ನಡ ಭಾಷೆಗೆ ಅನ್ವಯಿಸಿ ನೋಡಿದಾಗ ನಮ್ಮ ಕನ್ನಡಿಗರಿಗೆ ಕನ್ನಡ ಮಾತೃಭಾಷೆಯಾಗಿರುತ್ತದೆ. ಕನ್ನಡ ತಾಯಿಯಿಂದ ಕಲಿತ ಪ್ರಥಮ ಭಾಷೆಯಾಗಿರುತ್ತದೆ. ಹೀಗಾಗಿ ಮಗುವಿನ ಕೊನೆಯವರೆಗೂ ಅದರ ಸಾಮಾಜಿಕ, ಭಾವನಾತ್ಮಕ, ಬೌದ್ಧಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಉನ್ನತಿಗೆ ಮಾತೃಭಾಷೆಯು ಅವಶ್ಯಕವಾದ ಮುಖ್ಯ ಸಾಧನವಾಗಿರುತ್ತದೆ. ಈ ಸಂದರ್ಭದಲ್ಲಿ ಶಿಕ್ಷಣದಲ್ಲಿ ಮಾತೃಭಾಷೆ ಒಂದು ಮಾಧ್ಯಮವಾಗದೇ ಪರಭಾಷಾ ಶಿಕ್ಷಣದ ಮಾಧ್ಯಮವಾದರೆ ಮಗು ತನ್ನ ಮಾನಸಿಕ ಕ್ರಿಯೆ ಹಾಗೂ ನೈಜ ಅಭಿವ್ಯಕ್ತಿಯಲ್ಲಿ ಹೊಂದಾಣಿಕೆ ತಪ್ಪಿ ಅವರಲ್ಲಿರುವ ಅಂತಃಸತ್ವ ಸಾಮರ್ಥ್ಯಗಳು ವಿಕಾಸವಾಗದೇ ಕಮರಿ ಹೋಗುತ್ತದೆ. ಹಾಗೇ ನಮ್ಮಲ್ಲಿ ಕನ್ನಡವೇ ನಮ್ಮ ಶಿಕ್ಷಣದ ಮಾಧ್ಯಮವಾಗಬೇಕು.

ಪ್ರಸ್ತುತ ಸಂದರ್ಭದಲ್ಲಿ ನಮ್ಮಲ್ಲಿ ಕನ್ನಡವೇ ನಮ್ಮ ಶಿಕ್ಷಣದ ಮಾಧ್ಯಮವಾಗಿದ್ದರೂ ಅದರ ಸ್ಥಿತಿ ಅಷ್ಟು ಉತ್ತಮವಾಗಿಲ್ಲ. ರಷ್ಯಾದಂತಹ ಶ್ರೀಮಂತ ದೇಶಗಳೇ ತಮ್ಮ ಪ್ರಾದೇಶಿಕ/ಮಾತೃಭಾಷೆಯನ್ನೇ ಶಿಕ್ಷಣದ ಮಾಧ್ಯಮವಾಗಿಸಿಕೊಂಡು ಪ್ರಗತಿ ಸಾಧಿಸುತ್ತಿದ್ದರೂ, ಕರ್ನಾಟಕ ಇಂಗ್ಲೀಷನ್ನು ಶಿಕ್ಷಣ ಮಾಧ್ಯಮವನ್ನಾಗಿಸಿಕೊಂಡು ಪ್ರಗತಿ ಸಾಧಿಸಬಯಸುತ್ತಿದೆ. ಆದರೆ ಇದು ಅಷ್ಟು ಮನೋವೈಜ್ಞಾನಿಕ ನಿಯಮವಲ್ಲ ಎಂಬುದನ್ನು ಕರ್ನಾಟಕ ಸರ್ಕಾರ ಮನಗಂಡಿಲ್ಲ. ಕನ್ನಡ ಭಾಷೆ ಎಲ್ಲಾ ನಿಟ್ಟಿನಲ್ಲಿ ಉನ್ನತವಾದ ಭಾಷೆ. ಕನ್ನಡವನ್ನು ಶಿಕ್ಷಣದ ಮಾಧ್ಯಮವಾಗಿಸಿಕೊಂಡಿದ್ದೇ ಆದಲ್ಲಿ ಅದನ್ನು ಇಂಗ್ಲೀಷ್ ಭಾಷೆಯಂತೆಯೇ ಎಲ್ಲಾ ಕ್ಷೇತ್ರಗಳಲ್ಲೂ ಅಳವಡಿಸಿಕೊಂಡು ಪ್ರಗತಿ ಸಾಧಿಸಬಹುದಾಗಿದೆ. ಆಗ ಶಿಕ್ಷಣದಲ್ಲಿ ಮಾತೃಭಾಷೆಯಾಗಿ ಕನ್ನಡದ ಸ್ಥಾನಮಾನ ಇಂಗ್ಲೀಷ್ ಭಾಷೆಗಿಂತಲೂ ಜನಪ್ರಿಯವಾಗುತ್ತದೆ. ಭಾರತ ಸಂವಿಧಾನವೂ ಸಹ ಶಿಕ್ಷಣದಲ್ಲಿ ಮಗುವಿನ ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವಾಗಿಸಿಕೊಳ್ಳಲು ೧೯೫೦ ರಲ್ಲೇ ನೀತಿಸಂಹಿತೆಯನ್ನು ೩೫೦ನೇ ಅನುಚ್ಛೇದದ ಮೂಲಕ ಹೊರಡಿಸಿ ಕರ್ನಾಟಕದಲ್ಲಿ 'ಗೋಕಾಕ್ ವರದಿ' ಯೂ ಸಹ ಇದನ್ನೇ ಎತ್ತಿ ಹಿಡಿದಿದೆ.

1.2 ಭಾಷೆಯ ಅರ್ಥ ಮತ್ತು ವ್ಯಾಖ್ಯೆಗಳು

a) ಭಾಷೆಯ ಅರ್ಥ

'ಭಾಷೆ' ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಸುಲಭವೆನಿಸಿದರೂ ಅದಕ್ಕೆ ಸ್ಪಷ್ಟವಾಗಿ ಉತ್ತರ ನೀಡುವುದು, ಪಡೆಯುವುದು ಕಷ್ಟ ಸಾಧ್ಯ. ಸಾಮಾನ್ಯವಾಗಿ ಜನರು ಆಡುವ ಮಾತು, ನುಡಿ, ಬರೆಯುವ ಬರಹ, ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವ ಧ್ವನಿ ಇವೆಲ್ಲವನ್ನು ಭಾಷೆ ಎನ್ನುತ್ತಾರೆ. ಆದರೆ ಭಾಷೆಯ ಬಗ್ಗೆ ವೈಜ್ಞಾನಿಕವಾಗಿ ನಿಖರವಾಗಿ ಹೇಳುವುದು ಕಷ್ಟ. ಈ ದಿಸೆಯಲ್ಲಿ ಅನಾದಿ ಕಾಲದಿಂದಲೂ ಭಾಷೆಯ ಬಗ್ಗೆ ವಿದ್ವಾಂಸರು ಅಧ್ಯಯನ ನಡೆಸುತ್ತಲೇ ಬಂದಿದ್ದಾರೆ.

ಪ್ರಾಣಿ ವರ್ಗಗಳಲ್ಲಿ ಮನುಷ್ಯ ಉಳಿದೆಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿದ್ದು, ತನಗಿರುವ ಬುದ್ಧಿಶಕ್ತಿಯ ಬಲದಿಂದ ತನ್ನದೇ ಆದ ಭಾಷೆಯನ್ನು ರೂಪಿಸಿಕೊಂಡು ಮುನ್ನಡೆಯಲು ಪ್ರಯತ್ನಿಸುತ್ತಾನೆ. ಭಾಷೆ ಸ್ವಾಭಾವಿಕವಾಗಿ ಮೂಡಿಬರದೆ ಅದು ಕಲಿಕೆಯಿಂದ ಬರುವಂತಹದು. ಈ ಹಿನ್ನೆಲೆಯಲ್ಲಿ ಭಾಷೆ ಮನುಷ್ಯರಿಗೆ ವ್ಯವಸ್ಥಿತವಾಗಿ
ಸಂವಹನ ಕ್ರಿಯೆಯನ್ನು ನಡೆಸಲು ಸಾಧ್ಯವಾಗಿದೆ. ಪ್ರಾಣಿಗಳಲ್ಲೂ 'ಸಂವಹನಕ್ರಿಯೆ' ಇದ್ದರೂ, ಅವುಗಳು ಅಮೂರ್ತ ಆಲೋಚನೆಗಳನ್ನು ವ್ಯವಸ್ಥಿತವಾದ, ಸಾಂಕೇತಿಕ ಧ್ವನಿ ಸಮೂಹಗಳ ರೂಪದಲ್ಲಿ ತಿಳಿಸಲಾರವು. ಮನುಷ್ಯನಿಗೆ ಮಾತ್ರ ಬಾಯಿಯ ತುಟಿ, ನಾಲಿಗೆ, ಕಂಠಗಳನ್ನು ನಿಯಂತ್ರಿಸಿ ಬಳಸಿ, ಸಂಕೇತ ಧ್ವನಿಗಳನ್ನಾಗಿ ಪರಿವರ್ತಿಸಿ ಮನಸ್ಸಿನ ಇಚ್ಚೆಯನ್ನು ತಿಳಿಸಲು ಸಾಧ್ಯವಾಗಿದೆ. ಹೀಗಾಗಿ ಭಾಷೆ ಒಂದು ನಿರ್ಧಿಷ್ಟ ಪರಿಸರದಲ್ಲಿ ಕಲಿಯುವುದರಿಂದ, ವ್ಯವಹರಿಸುವುದರಿಂದ ಬರುತ್ತದೆಯೇ ಹೊರತು ಹುಟ್ಟಿನಿಂದ ಬರುವುದಿಲ್ಲ. ಭಾಷೆಯ ವ್ಯಕ್ತಿ, ಕುಟುಂಬ, ಸಮುದಾಯ, ಸಮಾಜ, ಪ್ರದೇಶಗಳಲ್ಲಿನ ನಿರ್ಧಿಷ್ಟ ಪರಿಸರದ ಪರಸ್ಪರ ಒಪ್ಪಿಗೆಯ ಮತ್ತು ರೂಢಿಯಿಂದ ಬಂದ ಒಂದು ವ್ಯವಸ್ಥೆಯಾಗಿದೆ.

ಅಂದರೆ "ಪೃಥ್ವಿಯ ಮೇಲೆ ಮನುಷ್ಯನ ಎಲ್ಲಾ ಸಾಹಸ ಸಿದ್ದಿಯನ್ನು ಸಾರುವ ಸಂಪರ್ಕ ಸಾಧನವೇ ಭಾಷೆ."

'ಭಾಷೆ' ಎಂಬ ಪದ ಸಂಸ್ಕೃತದ 'ಭಾಷ್' ಎಂಬ ಧಾತುವಿನಿಂದ ಬಂದಿದೆ. 'ಭಾಷ್' ಎಂದರೆ ಹೇಳುವುದು, ಉಚ್ಚರಿಸುವುದು, ಮಾತನಾಡುವುದು ಎಂದರ್ಥ. ಇದನ್ನು ಇಂಗ್ಲೀಷಿನ 'Language' ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಇಂಗ್ಲೀಷಿಗೆ ಈ ಪದ ಬಂದದ್ದು ಲ್ಯಾಟಿನ್ ಭಾಷೆಯ 'Lingua' ಎಂದರೆ ನಾಲಗೆ ಆಡಿದ ಪದ ಎಂಬ ಅರ್ಥವಿದೆ. "ಮನಸ್ಸಿನ ಭಾವನೆಗಳು, ಆಲೋಚನೆಗಳು ನಾಲಗೆಯ ಮೂಲಕ ಉಚ್ಚರಿಸಲ್ಪಟ್ಟು ಹೊರಬರುವುದು ಭಾಷೆಯಾಗುತ್ತದೆ" ಅಂದರೆ ಭಾಷೆಗೆ ಸಮಾನಾರ್ಥಕವಾಗಿ ಮಾತು ಎಂಬುದನ್ನು ಬಳಸುತ್ತೇವೆ. ನಂತರ ಚಿತ್ರ, ಬರಹಗಳು ಇತ್ಯಾದಿ ಸಂಕೇತಗಳು ಮೂಡಿ ಬರುತ್ತವೆ. ಎಫ್.ಟಿ. ವುಡ್ ರವರು ಹೇಳುವಂತೆ " ಪ್ರಾಥಮಿಕವಾಗಿ ಮೌಖಿಕ ಕ್ರಿಯೆ ನಂತರ ಲಿಖಿತ ರೂಪಗಳು ಮೂಡಿ ಬಂದಿವೆ,

b) ಭಾಷೆಯ ವ್ಯಾಖ್ಯಾನಗಳು

'ಭಾಷೆ' ಎಂದರೇನು? ಎಂಬ ಪ್ರಶ್ನೆಗೆ ಪ್ರಾಚೀನ ವಿದ್ವಾಂಸರು ಹಾಗೂ ಆಧುನಿಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

1) ಪ್ರಾಚೀನ ವಿದ್ವಾಂಸರು

ಪ್ಲೇಟೋ ಪ್ರಕಾರ "ಧ್ವನಿ ಸಂಕೇತಗಳಿಂದ ಮನುಷ್ಯನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವ ಸಾಧನ ಭಾಷೆ."

ಹೆನ್ರಿ ಸ್ವೀಟ್ ಪ್ರಕಾರ "ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದು ಭಾಷೆ" ಎಂದಿದ್ದಾರೆ.

ಈಸ್ಲರ್ "ಆತ್ಮವಿರುವ ಯಾವುದೇ ಪ್ರಾಣಿಗಳ ಅನುಭವದ ಅಭಿವ್ಯಕ್ತಿಯೇ ಭಾಷೆ."

2) ಆಧುನಿಕ ವಿದ್ವಾಂಸರು

ಫರ್ಡಿನೆಂಟ್ ಡಿ ಸಸೂರ್ "ಮನುಷ್ಯನು ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಿ ಪಡಿಸುದಕ್ಕಾಗಿ ರೂಪಿಸಿಕೊಂಡಿರುವ ಸಂಕೇತಗಳ ವ್ಯವಸ್ಥೆಯೇ ಭಾಷೆ"

ಸ್ಟುರ್ಟ್ ವಾಂಟ್ "ಒಂದು ಸಮಾಜದ ಸದಸ್ಯರು ಪಾರಸ್ಪರಿಕವಾದ ಕ್ರಿಯೆ ಪ್ರಕ್ರಿಯೆಗಳಿಗಾಗಿ ಬಳಸುವ ಯಾದೃಚ್ಛಿಕ ಧ್ವನಿಸಂಕೇತಗಳ ವ್ಯವಸ್ಥೆ ಭಾಷೆ"

ಬ್ಲಾಕ್ ಮತ್ತು ಟ್ರಾಗಲ್ "Language is a system of vocal symbols of which a social group cooperates" ಅಂದರೆ ಒಂದು ಸಾಮಾಜಿಕ ಸಮೂಹ ತಮ್ಮ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ."

ಹಬ್ಬಿಂಗ್ ಹಾಸ್ ಪ್ರಕಾರ "ಯಾವಾಗ ಬೇಕಾದರೂ ಸ್ವಪ್ರೇರಿತವಾಗಿ ಉಚ್ಚರಿಸಬಹುದಾದ ಸಾಂಪ್ರದಾಯಿಕ ಸಂಕೇತಗಳ ವ್ಯವಸ್ಥೆಯೇ ಭಾಷೆ."

ಬ್ರಿಟಾನಿಕಾ ವಿಶ್ವಕೋಶದಲ್ಲಿ "ಒಂದು ಸಮಾಜದ ವ್ಯಕ್ತಿಗಳು ತಮ್ಮ ಪರಸ್ಪರ ವ್ಯವಹಾರಕ್ಕಾಗಿ ಅಥವಾ ವಿಚಾರ ವಿನಿಮಯಕ್ಕಾಗಿ ಬಳಸುವ ಯಾದೃಚ್ಛಿಕ ಧ್ವನಿ ಸಂಕೇತಗಳ ವ್ಯವಸ್ಥೆಯ ಸ್ವರೂಪವೇ ಭಾಷೆ."

ಡಾ.ಎಸ್.ಎಸ್ ವೀರಪ್ಪ ಶಾಸ್ತ್ರದ ಪಾರಿಭಾಷಿಕ ನಿಘಂಟಿನ ಪ್ರಕಾರ "ಬರಹ ಅಥವಾ ಮಾತಿನ ಸಂಕೇತಗಳ ಮೂಲಕ ಭಾವನೆ, ಸುದ್ದಿ, ಮನೋಭಾವಾದಿಗಳನ್ನು ತಿಳಿಸಲು ಅಥವಾ

ಅರಿತುಕೊಳ್ಳಲು ಬಳಸುವ ಯಾವುದಾದರೊಂದು ಸಾಧನ ಅಥವಾ ಸಂಕೇತಗಳ ಪದ್ಧತಿಯೇ ಭಾಷೆ."

ಈ ಮೇಲಿನ ವ್ಯಾಖ್ಯೆಗಳನ್ನು ಪರಿಶೀಲಿಸಿದಾಗ ಭಾಷೆ ಪ್ರಕೃತಿಯ ವರದಲ್ಲಿ ಅದು ಕಲಿತ ಕ್ರಿಯೆ. ಮಾನವನ ಆಂತರಿಕ ಭಾವನೆ, ಬಯಕೆಯ ಉತ್ಕಟತೆಗಳನ್ನು ಬೇರೊಬ್ಬರಿಗೆ ವ್ಯಕ್ತಪಡಿಸಲು ತಾವು ಉಚ್ಚರಿಸುವ ಸಂಕೇತಗಳ ಮಾಧ್ಯಮದಿಂದ ಮತ್ತು ಯಾದೃಚ್ಛಿಕ ಧ್ವನಿಗಳಿಂದ ಹೊರ ಬಂದ ವಿಶಿಷ್ಟ ಸಾಧನೆಯ ವಾಹಕವೇ ಭಾಷೆ ಎಂದು ಹೇಳಬಹುದು.

ಡಿ.ಎನ್. ಶಂಕರಭಟ್ ಹೇಳುವಂತೆ "ಮಾತಿನ ಮೂಲಕ ಇನ್ನೊಬ್ಬರಿಗೆ ತಿಳಿಸಬೇಕಾಗಿರುವ ವಿಷಯಗಳನ್ನು ಹಾಗೆ ತಿಳಿಸಲು ಸಾಧ್ಯವಿಲ್ಲದಂತಹ ಹಲವು ರೀತಿಯ ಸಂದರ್ಭಗಳಲ್ಲಿ ನಾವು ಬರಹವನ್ನು ಬಳಸುತ್ತೇವೆ. ಬರಹಕ್ಕಿರುವ ಈ ಅತ್ಯಂತ ಮುಖ್ಯವಾದ ಉದ್ದೇಶವನ್ನು ಅದು ತೃಪ್ತಿಕರವಾಗಿ ಸಾಧಿಸಬೇಕಿದ್ದಲ್ಲಿ ಮಾತಿಗೂ ಬರಹಕ್ಕೂ ನಡುವೆ ವ್ಯತ್ಯಾಸಗಳು ಕಡಿಮೆಯಿದ್ದಷ್ಟೂ ಒಳ್ಳೆಯದು. ಆದರೆ ಕನ್ನಡದಂತಹ ಹಲವು ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳಿರುವ ಭಾಷೆಗಳಲ್ಲಿ ಮಾತಿನ ಪ್ರಭೇದ ಮತ್ತು ಬರಹದ ಪ್ರಭೇದಗಳ ನಡುವೆ ವ್ಯತ್ಯಾಸಗಳಿರುವುದು ಸಹಜ.. ಕನ್ನಡ ಬರಹದಲ್ಲಿ ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವ ಮೊದಲನೆಯ ಪ್ರವೃತ್ತಿಯಿಂದಾಗಿ ಕನ್ನಡ ಬರಹದಲ್ಲಿ ಹೆಚ್ಚು ಹೆಚ್ಚು ಅಕ್ಷರಗಳು ಬಳಕೆಯಾಗಬೇಕಾಗಿದೆ. ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವುದು ಮತ್ತು ಇವನ್ನು ಸಂಸ್ಕೃತದಲ್ಲಿರುವ ಹಾಗೇನೆ, ಎಂದರೆ ತತ್ಸಮ ರೂಪದಲ್ಲಿ ಬಳಸುವುದು ಎರಡನೆಯ ಪ್ರವೃತ್ತಿ."

c) ಕನ್ನಡ ಭಾಷಾ ಬೋಧನೆಯ ಪ್ರಾಮುಖ್ಯತೆ

"ಮೊದಲ ತಾಯಿ ಹಾಲ ಕುಡಿದು,
ಲಲ್ಲೆಯಿಂದ ತೊದಲ ನುಡಿದು,
ಗೆಳೆಯರೊಡನೆ ಆಡಿ ಕುಣಿದ ಮಾತದಾವುದು"

ಈ ಮೇಲಿನ ಬಿ.ಎಂ ಶ್ರೀ ಯವರ ಕವಿತೆ ಕನ್ನಡ ಮಾತೃಭಾಷೆಯ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಇದನ್ನು 'ತಾಯ್ನುಡಿ' ಎಂದೂ ಹೇಳುತ್ತೇವೆ. ಇದು ಮಗು ಮೊದಲಿಗೆ ಕಲಿತ ನುಡಿ, ಇದನ್ನು ಮಗು ಎಳವೆಯಲ್ಲಿ ತಾಯಿಯ ಸಹವಾಸದಲ್ಲಿ ತಾಯಿಯ ಬಳಿಯಲ್ಲಿ ಕಲಿಯುತ್ತದೆ. ಈ ಕಾರಣದಿಂದ ಮಗುವಿನ ಮೊದಲ ನುಡಿ ಅಥವಾ ಮಾತನ್ನು 'ತಾಯ್ನುಡಿ', 'ಮಾತೃಭಾಷೆ' ಎಂದು ಕರೆಯುತ್ತೇವೆ. ಅಂದರೆ ಮಗುವು ಚಿಕ್ಕಂದಿನಲ್ಲಿ ತನ್ನ ಹೆತ್ತವರಿಂದ ಕಲಿತ ಮೊದಲ ಭಾಷೆ ತಾಯ್ನುಡಿ ತೊದಲ್ನುಡಿಯ ನುಡಿ ಇದು. ಹುಟ್ಟಿನಿಂದಲೇ ಕೇಳಿ ಕಲಿಯುವ ಮಾತಿದು.

ಪಿ.ಬಿ ಬಲಾರ್ಡ್ ರವರು ಮಾತೃಭಾಷೆಯನ್ನು 'ಮೊದಲ ನುಡಿ' ಎಂದು ಕರೆದಿದ್ದಾರೆ. ಮಗುವಿನ ಭಾವನೆಗಳನ್ನು ರೂಪುಗೊಳಿಸುವುದರಲ್ಲಿ ಪರಭಾಷೆಗಿಂತ ಮಾತೃಭಾಷೆ ಹೆಚ್ಚು ಫಲಕಾರಿಯಾದುದು ಮತ್ತು ಬಲವತ್ತರವಾದದು. ಒಟ್ಟಿನಲ್ಲಿ ಜೀವನದಲ್ಲಿ ಉತ್ತಮ ಅನುಭವವನ್ನು ಪಡೆಯಲು ಮಾತೃಭಾಷೆ ಒಂದು

ವಿಶೇಷ ಸಾಧನ. ಮಾನವನಲ್ಲಿ ಸುಪ್ತವಾಗಿರುವ ಸಾಮರ್ಥ್ಯಗಳನ್ನು ಉತ್ತಮವಾಗಿ ಅಭಿವೃದ್ಧಿಗೊಳಿಸಿಕೊಳ್ಳಲು ಮಾತೃಭಾಷೆ ಒಂದು ಪ್ರಮುಖ ಸಾಧನ. ಐ.ಎಲ್. ಕ್ಯಾಂಡಲ್ ಅವರು "ಮಾತೃಭಾಷೆಯನ್ನು ಶಿಕ್ಷಣದ ಮೊದಲ ಹಂತದಲ್ಲಿ ಎಲ್ಲರೂ ಕಲಿಯಲೇಬೇಕೆಂದು ಹೇಳಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕನ್ನಡವೇ ರಾಜ್ಯಭಾಷೆ ಹಾಗೂ ಮಾತೃಭಾಷೆಯೂ ಆಗಿರುವುದರಿಂದ ಕನ್ನಡ ಭಾಷಾ ಬೋಧನೆಯು ವಿಶಿಷ್ಟವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

- ಮಾತೃಭಾಷೆಯು ವ್ಯಕ್ತಿಯ ವಿಚಾರಗಳನ್ನು ವ್ಯಕ್ತಪಡಿಸಲು ಸುಲಭ ಸಾಧನವಾಗಿದೆ.
- ಬೌದ್ಧಿಕ ವಿಕಾಸದೊಂದಿಗೆ ಮಗುವಿನ ಸಂವೇದನಾತ್ಮಕ ವಿಕಾಸವಾಗುತ್ತದೆ/
- ಮಾತೃಭಾಷೆಯು ಉತ್ತಮ ಅನುಭವಗಳನ್ನು ನೀಡುವುದರ ಮೂಲಕ ವ್ಯಕ್ತಿಯ ತಿಳುವಳಿಕೆಯನ್ನು ಹೆಚ್ಚಿಸುತ್ತದೆ.
- ಮಾತೃಭಾಷೆಯು ದೈನಂದಿನ ವ್ಯವಹಾರ ನಿರ್ವಹಿಸಲು ನೆರವಾಗುತ್ತದೆ.
- ಭಾಷೆಯ ಮೂಲಕ ಸಂಸ್ಕೃತಿಯ ರಕ್ಷಣೆ ಆಗುತ್ತದೆ.
- ಮಾತೃಭಾಷೆಯ ಮೂಲಕ ಸಾಮಾಜಿಕ ಸ್ಥಿರತೆಯನ್ನು ಸಾಧಿಸಲು ಅಥವಾ ಕಾಪಾಡಲು ಸಾಧ್ಯವಾಗುತ್ತದೆ.
- ಮಾತೃಭಾಷಾ ಬೋಧನೆಯಿಂದ ಮಗುವಿನ ಶೈಕ್ಷಣಿಕ, ಸಾಮಾಜಿಕ ಹಾಗೂ ಸೃಜನಶೀಲ ಸಾಮರ್ಥ್ಯಗಳು ವಿಕಾಸ ಹೊಂದುತ್ತವೆ.
- ಸೌಂದರ್ಯೋಪಾಸನೆ, ಯೋಚನಾ ಶಕ್ತಿ ಮತ್ತು ಸೃಜನಶೀಲ ಶಕ್ತಿಯನ್ನು ಬೆಳೆಸಬಹುದು.
- ಮಗುವಿನ ಮೌಖಿಕ ಮತ್ತು ಲಿಖಿತ ಸಾಮರ್ಥ್ಯ ಬೆಳೆಯುತ್ತದೆ
- ವ್ಯಕ್ತಿತ್ವ ವಿಕಾಸವಾಗುತ್ತದೆ.
- ಮಕ್ಕಳು ನಿರೀಕ್ಷಿತ ಮಟ್ಟದಲ್ಲಿ ಜ್ಞಾನವನ್ನು ಸಂಪಾದಿಸಲು ಸಹಾಯಕವಾಗುತ್ತದೆ.
- ಮಗು ತನ್ನ ಅಂತರಾಳದ ಅನುಭವ, ಅನಿಸಿಕೆಗಳನ್ನು ವ್ಯಕ್ತಪಡಿಸಲು ಸಹಾಯಕವಾಗುತ್ತದೆ.
- ನಾಡು, ನುಡಿಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.

d) ಪ್ರಾಥಮಿಕ ಶಾಲಾ ಹಂತದಲ್ಲಿ ಮಾತೃಭಾಷಾ ಬೋಧನೆಯ ಉದ್ದೇಶಗಳು

ವ್ಯಕ್ತಿಯ ವರ್ತನೆಯಲ್ಲಿ ಪರಿವರ್ತನೆ ಬಯಸುವುದೇ ಶಿಕ್ಷಣ. ಹಾಗಾಗಿ ಶಿಕ್ಷಣ ಬಯಸಿದ್ದನ್ನು ಬೋಧನೆ ನೆರವೇರಿಸಬೇಕು. ಇದಕ್ಕಾಗಿ ಭಾಷಾ ಶಿಕ್ಷಕನಾದವನು ಕೆಲವು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅವುಗಳ ಸಹಾಯದಿಂದ ಬೋಧನಾ ವಿಧಾನ ಹಾಗೂ ಮೌಲ್ಯಮಾಪನವನ್ನು

ಯೋಜಿಸಿಕೊಳ್ಳಬೇಕು. ಮಾತೃಭಾಷಾ ಬೋಧನೆಯು ಭಾಷೆಯನ್ನು ಕಲಿಸುವುದಕ್ಕೆ ಮಾತ್ರ ಸೀಮಿತವಾಗಿರದೆ ಬೇರೆ ಬೇರೆ ಉದ್ದೇಶಗಳನ್ನು ಸಹ ಒಳಗೊಂಡಿದೆ. ಅವುಗಳೆಂದರೆ

- ಸಂವಹನಾ ಕೌಶಲಗಳಾದ ಆಲಿಸುವ ಕೌಶಲ, ಮಾತನಾಡುವ ಕೌಶಲ, ಓದುವ ಕೌಶಲ ಮತ್ತು ಬರವಣಿಗೆಯ ಕೌಶಲವನ್ನು ಬೆಳೆಸುವುದು.
- ಶಬ್ದ ಸಂಪತ್ತನ್ನು ಹೆಚ್ಚಿಸುವುದು.
- ಸೌಂದರ್ಯ ಪ್ರಜ್ಞೆ ಮತ್ತು ರಸಸ್ವಾದನೆಯ ಗುಣ ಬೆಳೆಸುವುದು
- ಸಾಹಿತ್ಯಾಭಿರುಚಿಯನ್ನು ಬೆಳೆಸುವುದು.
- ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಬೆಳೆಸುವುದು.
- ಸಾಂಸ್ಕೃತಿಕ ಉದ್ದೇಶಗಳ ಸಾಧನೆ
- ವಿಷಯ ಜ್ಞಾನದ ಗ್ರಹಿಕೆಯನ್ನುಂಟುಮಾಡುವುದು.
- ಸೃಜನಶೀಲತೆಯನ್ನು ಬೆಳೆಸುವುದು
- ಭಾವನಾಶಕ್ತಿಯನ್ನು ರೂಪಿಸುವುದು
- ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಬೆಳೆಸುವುದು
- ಸಾಹಿತ್ಯದ ಮುಖ್ಯ ಪ್ರಕಾರಗಳು ಹಾಗೂ ವ್ಯಾಕರಣವನ್ನು ಪರಿಚಯ ಮಾಡಿಕೊಡುವುದು.
- ಕ್ರಿಯಾತ್ಮಕ ವ್ಯಾಕರಣದ ಜ್ಞಾನವನ್ನು ಪಡೆಯುವಂತೆ ಮಾಡುವುದು.
- ಬರವಣಿಗೆಯಲ್ಲಿ ಪರಿಪೂರ್ಣತೆ ತರುವುದು ಮತ್ತು ವೇಗವಾಗಿ ಕರಾರುವಕ್ಕಾಗಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು.
- ತಾರ್ಕಿಕ ಮತ್ತು ವಿಮರ್ಶಾತ್ಮಕ ಶಕ್ತಿಯನ್ನು ಬೆಳೆಸುವುದು.
- ಮಾನವೀಯ ಮೌಲ್ಯಗಳನ್ನು ಬೆಳೆಸುವುದು.

1.3 ಭಾಷಾ ಬೋಧನೆಯಲ್ಲಿ ಕೌಶಲಗಳು

ಪ್ರಾಥಮಿಕ ಶಾಲಾ ಬೋಧನೆಯಲ್ಲಿ ಮಕ್ಕಳಲ್ಲಿ ಭಾಷಾ ಕೌಶಲಗಳನ್ನು ಉತ್ತಮವಾಗಿ ಬೆಳೆಸುವುದು ಭಾಷಾ ಬೋಧನೆಯ ಮುಖ್ಯ ಉದ್ದೇಶ. ಮಗು ಭಾಷೆಯನ್ನು ಉಪಯೋಗಿಸಿದಾಗ ಮಾತ್ರ ಭಾಷಾ ಕಲಿಕೆ ಸಾಧ್ಯವಾಗುತ್ತದೆ. ಈಜುವುದನ್ನು ಕಲಿಯಬೇಕಾದರೆ ನೀರಿನಲ್ಲಿ ಧುಮುಕಿಯೇ ಕಲಿಯಬೇಕು. ಹಾಗೆಯೇ ಭಾಷೆಯನ್ನು ಕಲಿಯಬೇಕಾದರೆ ಭಾಷಾ ಕೌಶಲಗಳನ್ನು ಕಲಿಯಲೇಬೇಕು.

ಭಾಷಾ ಕೌಶಲಗಳೆಂದರೆ,

1) ಆಲಿಸುವಿಕೆ

2) ಮಾತುಗಾರಿಕೆ

3) ಓದುಗಾರಿಕೆ

4) ಬರವಣಿಗೆ

ಈ ನಾಲ್ಕು ಕೌಶಲಗಳು ಭಾಷೆಯ ಸಂವಹನ ಕಾರ್ಯಕ್ಕೆ ನೆರವಾಗುವುದಲ್ಲದೆ, ಮಗುವಿಗೆ ಭಾಷೆಯ ಮೇಲೆ ಪ್ರಭುತ್ವ ಸಾಧಿಸಲು ಸಾಧನಗಳಾಗಿದೆ. ಇದನ್ನು ಸಾಧಿಸಲು ತರಬೇತಿಗಳಿಂದ ಮಾತ್ರ ಸಾಧ್ಯ.

a) ಬರವಣಿಗೆ ಕೌಶಲ

ಮನುಷ್ಯೇತರ ಪ್ರಾಣಿಗಳಿಗೆ ತಮ್ಮ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಚಾತುರ್ಪಾದಗಳಿರುವಂತೆ ಮನುಷ್ಯನಿಗೆ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಎಂಬ ನಾಲ್ಕು ಭಾಷಾ ಕೌಶಲಗಳಿವೆ. ಈ ಭಾಷಾ ಕೌಶಲಗಳ ಬೆಳವಣಿಗೆಯಲ್ಲಿ ಬರವಣಿಗೆ ವಿಶಿಷ್ಟವಾದ ಸ್ಥಾನವಿದೆ. ಭಾಷೆಯು ಆಲಿಸುವಿಕೆ, ಮಾತು, ಓದು ಈ ಮೂರು ಕೌಶಲಗಳು ಬರವಣಿಗೆಯಲ್ಲಿ ಅಂತರ್ಗತಗೊಳ್ಳುತ್ತದೆ.

ಕೈ ಬರಹವು ರೇಖಾವಿನ್ಯಾಸಗಳ ಕೌಶಲವಾಗಿದ್ದು, ಅಕ್ಷರಗಳ ರೇಖಾವಿನ್ಯಾಸಗಳು ಅರ್ಥಬದ್ಧವಾಗಿ ಜೋಡಿಸಲ್ಪಟ್ಟಿರುತ್ತವೆ. "ಒಂದು ವಿಷಯ, ಆಲೋಚನೆ, ಕಲ್ಪನೆ, ಅಭಿಪ್ರಾಯಗಳನ್ನು ಅಕ್ಷರಗಳ ನಿರ್ದಿಷ್ಟ ರೇಖಾವಿನ್ಯಾಸಗಳಿಂದ ಕ್ರಮಬದ್ಧವಾಗಿ, ಅರ್ಥಬದ್ದವಾಗಿ ಜೋಡಿಸಿ ಬರೆಯುವುದೇ ಬರವಣಿಗೆ."

ಕೈ ಬರಹದಲ್ಲಿ ಮನಸ್ಸು, ಕೈ ಬೆರಳುಗಳು, ರೇಖಾವಿನ್ಯಾಸಗಳು ಒಳಗೊಂಡಿರುತ್ತವೆ. ಒಂದು ವಿಷಯ ಅಥವಾ ಆಲೋಚನೆಯನ್ನು ಮನಸ್ಸಿನಲ್ಲಿ ಸಂಘಟಿಸಿ ಅದಕ್ಕನುಗುಣವಾದ ಲಿಪಿಯನ್ನು ಕ್ರಮಬದ್ದವಾಗಿ ಬರೆಯುವುದು ಬರಹ.

b) ಬರವಣಿಗೆ ಕೌಶಲದ ಮಹತ್ವ ಅಥವಾ ಪ್ರಾಮುಖ್ಯತೆ

"ಬರೆಯದೇ ಓದುವವನ
ಕರೆಯದೇ ಬರುವವನ
ಬರಿಗಾಲಲ್ಲಿ ನಡೆಯುವವನ
ಕರೆದು ಕರದಲ್ಲಿ ಹೊಡೆಯೆಂದ ಸರ್ವಜ್ಞ"

ಈ ಮೇಲಿನ ಸರ್ವಜ್ಞನ ಪದ್ಯದಿಂದ ಬರಹದ ಮಹತ್ವವನ್ನು ತಿಳಿಯಬಹುದು.

ಭಾಷೆಯ ಬೆಳಬಣಿಗೆಯಲ್ಲಿ ಬರವಣಿಗೆ ವಿಶಿಷ್ಟ ಸ್ಥಾನವಿದೆ. ಬರವಣಿಗೆ ಇಲ್ಲದಿದ್ದರೆ ಭಾಷೆಗಳು ಶಾಶ್ವತವಾಗಿ ನಿಲ್ಲುತ್ತಿರಲಿಲ್ಲ. ಬರವಣಿಗೆಯ ಭಾಷೆಯ ಮುಂದುವರೆದ ಹಾಗು ಮೂರ್ತ ಅಥವಾ ಶಾಶ್ವತ

ರೂಪ. ಮಾನವನ ಇತಿಹಾಸದ ಸಾಂಸ್ಕೃತಿಕ ಪರಂಪರೆ ಹಾಗೂ ಜ್ಞಾನರಾಶಿಯನ್ನು ಎಲ್ಲಾ ಸಮಾಜಗಳಿಗೂ, ಎಲ್ಲಾ ಕಾಲಕ್ಕೂ ಪ್ರಸಾರ ಮಾಡುವ ಕಾರ್ಯ ಬರವಣಿಗೆಯಿಂದ ಸಾಧ್ಯವಾಗಿದೆ. ಭಾಷೆಯ ಕಾಲ ಮತ್ತು ದೂರವನ್ನು ಗೆಲ್ಲುವುದು ಬರವಣಿಗೆಯ ಮೂಲಕ ಸಾದ್ಯವಾಗಿದೆ.

'ಶಿಕ್ಷಣದಲ್ಲಿ ಓದು ಮತ್ತು ಬರಹ ಜೊತೆ ಜೊತೆಯಲ್ಲಿ ಸಾಗುತ್ತಿದ್ದು, ಕಲಿಯುವ ವಿಷಯಗಳನ್ನು ಬರವಣಿಗೆ ದೃಢಪಡಿಸುತ್ತದೆ. ವಿಷಯಗಳನ್ನು ಬರೆಯುತ್ತಾ ಓದುವುದರಿಂದ, ಅಭ್ಯಾಸ ಮಾಡುವುದರಿಂದ ಹೆಚ್ಚು ಕಾಲ ಮನಸ್ಸಿನಲ್ಲಿ ಉಳಿಯುತ್ತದೆ. ಕೈ ಬರಹದಲ್ಲಿ ಕ್ರಮಬದ್ಧ ಅಭ್ಯಾಸ ಮಾಡುವುದರಿಂದ ಮಕ್ಕಳು ಸ್ವತಂತ್ರವಾಗಿ ಬರೆಯಲು ಶಕ್ತರಾಗಿರುತ್ತಾರೆ. ಇದರಿಂದ ಶೈಕ್ಷಣಿಕ ಸಾದನೆ ಬಲಗೊಳ್ಳುತ್ತದೆ. ಆ ವ್ಯಕ್ತಿಯ ಜೀವನದಲ್ಲಿ ಬರವಣಿಗೆಯು ಅನೇಕ ರೀತಿಯಲ್ಲಿ ಉಪಯುಕ್ತವಾಗಿದೆ. ಅವುಗಳೆಂದರೆ

- ಸಾಮಾಜಿಕ ಮತ್ತು ಆಡಳಿತಾತ್ಮಕ ವ್ಯವಹಾರಗಳಿಗೆ ಬರವಣಿಗೆ ಸಹಾಯಕವಾಗಿದೆ.
- ಲಿಖಿತ ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಗಳಿಸಿಕೊಳ್ಳಲು ಸಾದ್ಯವಾಗುತ್ತದೆ.
- ಸ್ವತಂತ್ರವಾಗಿ ವಿಚಾರ ಮಾಡಲು ಮತ್ತು ಸೃಜನಶೀಲ ಅಭಿವ್ಯಕ್ತಿಗೆ ಸಹಕಾರಿಯಾಗಿದೆ.
- ಸಾಹಿತ್ಯ ಸೃಷ್ಟಿ, ಅಧ್ಯಯನ ಮತ್ತು ಸಾಹಿತ್ಯ ಪ್ರಸಾರಕ್ಕೆ ಅನುವು ಮಾಡಿಕೊಡುತ್ತದೆ.
- ಸಂಸ್ಕೃತಿ ವಿಕಾಸ ಹಾಗೂ ಪ್ರಸಾರಕ್ಕೆ ಸಹಾಯಕವಾಗುತ್ತದೆ.
- ಜ್ಞಾನದ ಸೃಷ್ಟಿ, ಅಭಿವ್ಯಕ್ತಿಗೆ ಮತ್ತು ದಾಖಲೆಗೆ ಸಹಕಾರಿಯಾಗಿದೆ.
- ವಿದ್ಯಾರ್ಥಿಗಳ ಸೃಜನಶೀಲ ಅಭಿವ್ಯಕ್ತಿಗೆ ಪ್ರೇರಕವಾಗಿದೆ.
- ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಕ್ರಮಬದ್ದವಾಗಿ ಬರೆದು ಉತ್ತಮ ಶೈಕ್ಷಣಿಕ ಸಾಧನೆಯ ಮಾಡಲು ಸಹಾಯಕವಾಗಿದೆ.
- ಜ್ಞಾನಾರ್ಜನೆಗೆ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಬರವಣಿಗೆ ಸಹಾಯಕವಾಗಿದೆ.
- ತುಲನಾತ್ಮಕ ಜ್ಞಾನ ಮತ್ತು ವಿಮರ್ಶಾತ್ಮಕ ವಿವೇಚನೆ ಬೆಳೆಯುತ್ತದೆ.
- ಜ್ಞಾಪಕ ಶಕ್ತಿ ವೃದ್ಧಿಯಾಗುವುದರ ಜೊತೆಗೆ ವ್ಯವಹಾರ ಮಾಧ್ಯಮವಾಗಿ ಪಾತ್ರವಹಿಸುತ್ತದೆ.

c) ಉತ್ತಮ ಕೈ ಬರಹದ ಲಕ್ಷಣಗಳು

ಉತ್ತಮ ಮತ್ತು ಸುಂದರ ಬರವಣಿಗೆ ಎಲ್ಲರನ್ನು ಆಕರ್ಷಿಸುತ್ತದೆ ಹಾಗೂ ಆ ಬರಹ ಎಲ್ಲರಿಂದಲೂ ಮಾನ್ಯತೆ ಪಡೆಯುತ್ತದೆ. ಬರಹವನ್ನು ಕಲಿಯುವ ಪ್ರಾಥಮಿಕ ಹಂತಗಳಲ್ಲಿ ಪಡೆದಿರುವ ತರಬೇತಿ ಮತ್ತು ಬರಹ ಕಲಿತ ನಂತರ ಸುಂದರ ಉತ್ತಮವಾದ ಬರವಣಿಗೆಯನ್ನು ಕಲಿಯಲು ಅವರು ವಹಿಸಿರುವ ಆಸಕ್ತಿ, ಅವರ ಪ್ರಾಮಾಣಿಕ ಪ್ರಯತ್ನ, ಸತತ ಅಭ್ಯಾಸದೊಂದಿಗೆ ಕೆಲವರು ಸುಂದರವಾದ ಬರವಣಿಗೆಯನ್ನು ರೂಢಿಸಿಕೊಂಡಿರುತ್ತಾರೆ.

ಉತ್ತಮ ಕೈಬರಹದ ಲಕ್ಷಣಗಳು ಈ ರೀತಿ ಇವೆ.

- ಕೈ ಬರಹವು ದುಂಡಾಗಿ ಮತ್ತು ಆಕರ್ಷಕವಾಗಿರಬೇಕು.
- ಅಕ್ಷರಗಳ ರಚನೆ ಸುಸ್ಪಷ್ಟವಾಗಿರಬೇಕು.
- ಅಕ್ಷರಗಳು ಸಮರೂಪದ ಗಾತ್ರದಲ್ಲಿ ಇರಬೇಕು.
- ಅಕ್ಷರಗಳ ಆಕಾರ, ಗಾತ್ರ ಸಮರ್ಪಕವಾಗಿರಬೇಕು.
- ಅಕ್ಷರಗಳ ಮತ್ತು ಪದಗಳ ನಡುವೆ ಅಗತ್ಯವಿದ್ದಷ್ಟು ಸ್ಥಳದ ಅಂತರ ಇರಬೇಕು.
- ಅಕ್ಷರಗಳು ಮತ್ತು ಪದಗಳ ಜೋಡಣೆ ಸುಸಂಬದ್ಧವಾಗಿರಬೇಕು.
- ಕೈಬರಹದಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳಬೇಕು.
- ಲೇಖನ ಚಿಹ್ನೆಗಳು ಕಾಗುಣಿತಗಳ ಅಳವಡಿಕೆ ಕ್ರಮಬದ್ಧವಾಗಿರಬೇಕು.
- ನೇರವಾದ ಸಾಲುಗಳಲ್ಲಿ ಬರೆಯಬೇಕು.
- ವಾಕ್ಯವೃಂದಗಳಲ್ಲಿ (paragraph) ಬರೆಯಬೇಕು.
- ವೇಗವಾಗಿ ಬರೆಯಬೇಕು.
- ಅರ್ಥಪೂರ್ಣ ಪದಗಳಿಂದ ಕೂಡಿದ ವಾಕ್ಯವಿರಬೇಕು
- ಬೇರೆಯವರು ಸುಲಭವಾಗಿ ಓದಲು ಯೋಗ್ಯವಾಗಿದ್ದು, ಪ್ರಶಂಸೆ ಪಡುವಂತಿರಬೇಕು
- ಆತ್ಮವಿಶ್ವಾಸದಿಂದ ಬರೆಯುವಂತಿರಬೇಕು

d) ಕೈಬರಹ ಅಥವಾ ಬರವಣಿಗೆ ಕೌಶಲದ ವಿಧಗಳು

ಕೈ ಬರಹವು ಒಂದು ಸಂಕೀರ್ಣ ರೇಖಾ ವಿನ್ಯಾಸ ಕೌಶಲವಾಗಿದ್ದು, ಮಾನಸಿಕ, ಸ್ನಾಯು, ರೇಖಾವಿನ್ಯಾಸ, ಅಕ್ಷರಗಳ ರಚನಾ ಕ್ರಮ, ಕಾಗುಣಿತ, ಲೇಖನಚಿಹ್ನೆಗಳು ಇತ್ಯಾದಿ ಹಲವು ಕೌಶಲಗಳು ಅರ್ಥಬದ್ದವಾಗಿ ಸಮನ್ವಯಗೊಂಡಿರುತ್ತವೆ. ಸದಾ ಬರೆಯುವವರಿಗೆ ಬರವಣಿಗೆ ಸುಲಭ ಎನಿಸಿದರೂ ಎಂದೂ ಲೇಖನಿ ಹಿಡಿಯದವರಿಗೆ ಅಕ್ಷರಗಳನ್ನು ಮೂಡಿಸುವುದು ಅತ್ಯಂತ ಸೂಕ್ಷ್ಮ ಹಾಗೂ ಕಷ್ಟ ಎನಿಸುತ್ತದೆ. ಕೈಬರಹದಲ್ಲಿ ಸಮನ್ವಯಗೊಳ್ಳುವ ವಿವಿಧ ಕೌಶಲಗಳ ಬಗ್ಗೆ ತಿಳುವಳಿಕೆ ಹಾಗೂ ಕ್ರಮಬದ್ದ ಅಭ್ಯಾಸದಿಂದ ಮಾತ್ರ ಕೈಬರಹ ಕಲಿಯಲು ಸಾದ್ಯ.

ಬರವಣಿಗೆಯಲ್ಲಿ ಕೌಶಲದಲ್ಲಿನ ವಿಧಗಳು ಈ ಕೆಳಕಂಡಂತಿವೆ

1. ಮಾನಸಿಕ ಕೌಶಲಗಳು
2. ಸ್ನಾಯು ಕೌಶಲಗಳು

3. ಚಾಕ್ಷುಷ ಕೌಶಲಗಳು

4. ರೇಖಾ ವಿನ್ಯಾಸ ಕೌಶಲಗಳು

5. ಅಕ್ಷರ ಅಥವಾ ವರ್ಣವಿನ್ಯಾಸ ಕೌಶಲಗಳು

6. ಕಾಗುಣಿತ ರೇಖಾವಿನ್ಯಾಸದ ಕೌಶಲಗಳು

7. ಅಕ್ಷರ ಮತ್ತು ಪದಜೋಡಣಾ ಕೌಶಲಗಳು

8. ವಾಕ್ಯ ರಚನೆಯ ಕೌಶಲಗಳು

9. ಲೇಖನ ಚಿಹ್ನೆಗಳ ಕೌಶಲಗಳು

10. ಇತರೆ ಬರವಣಿಗೆ ಕೌಶಲಗಳು

ಈ ಕೌಶಲಗಳಷ್ಟೆ ಅಲ್ಲದೇ ಬರೆಯಲು ಸರಿಯಾಗಿ ಕುಳಿತುಕೊಳ್ಳಬೇಕು. ಲೇಖನಿ ಹಿಡಿಯುವ ರೀತಿ, ಬರೆಯುವ ಕಾಗದವನ್ನು ಸರಿಯಾಗಿ ಜೋಡಿಸುವ ಕ್ರಮ, ಕಣ್ಣು ಮತ್ತು ಕಾಗದಕ್ಕೆ ನಡುವೆ ಇರಬೇಕಾದ ಸೂಕ್ತ ಅಂತರ ಇವೂ ಸಹ ಬರವಣಿಗೆಯ ಕೌಶಲಗಳಾಗಿವೆ.

1.4 ವಿದ್ಯಾರ್ಥಿಗಳ ಕೈಬರಹದಲ್ಲಿ ಕಂಡುಬರುವ ದೋಷಗಳು

ಶಾಲೆಗಳಲ್ಲಿ ಮಕ್ಕಳು ಅಕ್ಷರ ಬರೆಯುವ ರೀತಿ, ಅಕ್ಷರ ಜೋಡಣೆ, ಪದ ಜೋಡಣೆ, ಕಾಗುಣಿತ, ಲೇಖನಚಿಹ್ನೆಗಳು, ಇವುಗಳನ್ನು ಭಾಷೆಯಲ್ಲಿ ಸರಿಯಾಗಿ ಬಳಸದೆ ದೋಷಗಳನ್ನು ಮಾಡುವುದನ್ನು ಬರವಣಿಗೆ ದೋಷಗಳು ಎಂದು ಕರೆಯುತ್ತೇವೆ. ಬರವಣಿಗೆ ಜ್ಞಾನ, ಅಕ್ಷರಗಳ ಬಳಕೆಯ ತಿಳುವಳಿಕೆ ಮತ್ತು ನಿಖರತೆಯ ಬಗ್ಗೆ ಎಚ್ಚರಿಕೆ ಇಲ್ಲದೆ ಉಚ್ಚಾರದಲ್ಲೂ ದೋಷಗಳನ್ನು ಮೂಡುತ್ತಾ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಯ ನಡುವೆ ಸರಿಯಾದ ವ್ಯತ್ಯಾಸ ತಿಳಿಯದೆ ಬರವಣಿಗೆ ಬರೆಯುವಾಗ ಕಾಗುಣಿತದ ದೋಷಗಳಾಗಲು ಅವಕಾಶವಿರುತ್ತದೆ.

ಬರವಣಿಗೆ ದೋಷಗಳನ್ನು

1. ಆಂತರಿಕ ದೋಷಗಳು

2. ಬಾಹ್ಯ ದೋಷಗಳು

ಎಂದು ಎರಡು ರೀತಿಯಲ್ಲಿ ವಿಂಗಡಿಸುತ್ತೇವೆ.

a) **ಆಂತರಿಕ ದೋಷಗಳು (ಕಾಗುಣಿತ ದೋಷಗಳು):** "ಬರವಣಿಗೆಯಲ್ಲಿ ಕಾಗುಣಿತವನ್ನು ಅಸ್ಪಷ್ಟವಾಗಿ, ಅಸ್ಪಷ್ಟ ರೇಖಾವಿನ್ಯಾಸ ಮತ್ತು ರೂಪ ರೇಖೆಯಿಂದ ಬರೆಯುವುದನ್ನು ಆಂತರಿಕ ದೋಷಗಳು ಅಥವಾ ಕಾಗುಣಿತ ದೋಷಗಳು ಎನ್ನುತ್ತೇವೆ.

ಅಂದರೆ ಕಾಗುಣಿತವಿಲ್ಲದೆ ಬರಹದಲ್ಲಿ ಅರ್ಥವಿಲ್ಲ. ಮಕ್ಕಳು ಬರವಣಿಗೆ ಮಾಡುವಾಗ ಅಸಮರ್ಪಕ ಕಾಗುಣಿತ ಬಳಕೆ, ಮತ್ತು ಕಾಗುಣಿತದ ರೇಖಾ ವಿನ್ಯಾಸದಿಂದ ಸರಿಯಾಗಿ ಬಳಸದೇ ಇರುವುದು. ಕಾಗುಣಿತಗಳಾದ ತಲೆಗಟ್ಟುಗಳು. ಏತ್ವ, ಒತ್ವ, ಕೊಂಬು, ಕೊಂಬಿನಿಳಿ, ಗುಡಿಸು,

ದೀರ್ಘ, ಬಾಲ (ಒಕ್ಳ) ವಟ್ರಸುಳಿ, ಐತ್ವ, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ, ಅಲ್ಪಪ್ರಾಣ, ಮಹಾಪ್ರಾಣ, ಸಂಯುಕ್ತಾಕ್ಷರಗಳನ್ನು ಸರಿಯಾಗಿ ಬರೆಯದಿರುವುದು, ಬರವಣಿಗೆಯ ಚಿಹ್ನೆಗಳು, ಅ,ಹ,ಸ,ಶ,ಷ.ನ,ಲ,ಳ,ಕ್ಷ,ಐ ಮುಂತಾದವುಗಳನ್ನು ಬರೆಯುವಾಗ ದೋಷಗಳು ಉಂಟಾಗುತ್ತವೆ.

ಉದಾ:

1. ಹ ಕಾರ – ಅ

ಹ – ಅ
ಹಕ್ಕಿ – ಅಕ್ಕಿ
ಹಾಲು – ಆಲು

ಹ ಕಾರಕ್ಕೆ ಉ ಕಾರ
ಹುಳ – ಉಳ
ಹುಂಜ – ಉಂಜ

ಹ ಕ್ಕೆ ಏ, ಓ ಐ ಇ
ಹೇಳು – ಏಳು
ಹೋಗು – ಓಗು
ಹೆಂಟೆ – ಎಂಟೆ
ಹಿಮ – ಇಮ

2. ಸ್ವರದ ಬದಲು ವ್ಯಂಜನ

ಓಲೆ – ವಾಲೆ
ಬಸಗೆ – ವಸಗೆ

3. ಅಲ್ಪಪ್ರಾಣ – ಮಹಾಪ್ರಾಣ

ದೊರೆ – ಧೊರೆ
ದಂಡ – ಧಂಡ

ಮಹಾಪ್ರಾಣಕ್ಕೆ – ಅಲ್ಪಪ್ರಾಣ

ಸಮಾಧಾನ – ಸಮಾದಾನ
ಘನ – ಗನ

4. ಸ, ಶ, ಷ, ಕಾರಗಳು

ಶಂಕೆ – ಸಂಕೆ
ಷಣ್ಮುಖ – ಸಣ್ಮುಖ
ದೃಶ್ಯ – ದುಷ್ಯ
ಗರಗಸ – ಗರಗಶ

ಕೋಶ – ಕೋಷ
ಭಾಷಾಶಾಸ್ತ್ರ – ಭಾಸಾಶಾಸ್ತ್ರ
ಕಂಸ – ಕಂಶ

5. ಹ್ರಸ್ವ ಸ್ವರ – ಧೀರ್ಘ ಸ್ವರ

ನಾಗರಿಕ – ನಾಗರೀಕ
ಜನಪ್ರಿಯ – ಜನಪ್ರೀಯ

ಜಾತ್ಯಾತಿತ – ಜಾತ್ಯಾತೀತ
ಕೋಟ್ಯಂತರ – ಕೋಟ್ಯಾಂತರ

6. (ೃ) ಕಾರಕ್ಕೆ ಬದಲು (ು) ಬಳಸುವುದು

ತೃಪ್ತಿ – ತ್ರುಪ್ತಿ ಶೃತಿ – ಶ್ರುತಿ

ಗೃಹಿಣಿ – ಗ್ರಹಿಣಿ

ಕೃಷಿ – ಕ್ರುಷಿ

7. ಷ ಕಾರಕ್ಕೆ ಒತ್ತಕ್ಷರ ಹಾಕುವಾಗ ಠ ಕಾರ ಅಥವಾ ಟ ಕಾರ ವನ್ನು ಬಳಸುವ ದೋಷ

ಗರಿಷ್ಠ – ಗರಿಷ್ಟ

ಕನಿಷ್ಠ – ಕನಿಷ್ಟ

8. ಚ – ಛ ಕಾರ (ಒತ್ತಕ್ಷರಗಳನ್ನು ಬಳಸುವಲ್ಲಿ ದೋಷ)

ವಿದ್ಯುಚ್ಛಕ್ತಿ – ವಿದ್ಯುಚ್ಚಕ್ತಿ

ವಿಚ್ಛೇದನ – ವಿಚ್ಚೇದನ

9. ಕೆಲವು ಪದಗಳಿಗೆ ಅನವಶ್ಯಕ ಅಕ್ಷರ ಸೇರಿಸುವುದು

ಜಿಗುಪ್ಸೆ – ಜುಗುಪ್ಸೆ

ಮುಖ – ಮುಕ

ಮೊಳೆ – ಮಳೆ

ಅನಕ್ಷರತೆ – ಅನಕ್ಷರಸ್ಥತೆ

i. ಕಾಗುಣಿತ ದೋಷಗಳಿಗೆ ಕಾರಣಗಳು

1. ವರ್ಣಗಳ ರಚನಾ ವಿನ್ಯಾಸ ತಿಳಿಯದೇ ಇರುವುದು.
2. ಕಾಗುಣಿತದ ಜ್ಞಾನ ಇಲ್ಲದೇ ಇರುವುದು.
3. ಕಾಗುಣಿತದ ಬಗ್ಗೆ ತಿಳುವಳಿಕೆ ಮತ್ತು ತರಬೇತಿ ಇಲ್ಲದೆ ಇರುವುದು.
4. ಪರಭಾಷೆಯ ಬರವಣಿಗೆಯ ಪ್ರಭಾವ.
5. ಮಾನಸಿಕ ಮತ್ತು ಸ್ನಾಯು ಹೊಂದಾಣಿಕೆಯ ಕೊರತೆ.
6. ಕಾಗುಣಿತ ರೇಖಾ ವಿನ್ಯಾಸಗಳನ್ನು ಬರೆಯುವ ಅಭ್ಯಾಸವಿಲ್ಲದಿರುವುದು.
7. ಅಜಾಗರೂಕತೆ.
8. ಬೇಜಾವಾಬ್ದಾರಿಯಿಂದ ಆತುರವಾಗಿ ಬರೆಯುವುದರಿಂದ.

9. ಜ್ಞಾಪಕ ಶಕ್ತಿ ಇಲ್ಲದಿರುವುದು.

10. ಭಾಷಾ ಬೋಧಕನ ನಿರಾಸಕ್ತಿ.

11. ಉಚ್ಚಾರಣಾ ದೋಷ.

12. ಹಳೆಯ ಬೋಧನಾ ಪದ್ಧತಿ.

13. ಕ್ರೀಡಾ ಪದ್ಧತಿಯನ್ನು ಕಲಿಸದೇ ಇರುವುದು.

14. ಸಮೂಹ ಮಾಧ್ಯಮಗಳ ಪ್ರಭಾವ.

15. ಏಕಾಗ್ರತೆ ಕೊರತೆ.

b) ಬಾಹ್ಯ ದೋಷಗಳು

ಅಕ್ಷರ ರಚನಾ ವಿನ್ಯಾಸದಲ್ಲಿ ಸಂಭವಿಸುವ ದೋಷಗಳು

1) ರೇಖಾ ವಿನ್ಯಾಸಗಳನ್ನು ಸಹಜವಾಗಿ ಮೂಡಿಸದೆ ಅಸ್ಪಷ್ಟವಾಗಿ ಬರೆಯುವುದು.

2) ಅಕ್ಷರಗಳನ್ನು ಅವುಗಳ ಮೂಲರೂಪಕ್ಕೆ ತಕ್ಕಂತೆ ಬರೆಯದೆ ವಿರೂಪ ಮಾಡಿ ಬರೆಯುವುದು.

3) ಅಕ್ಷರಗಳನ್ನು ಬರೆಯುವ ಕ್ರಮದಲ್ಲಿ ಸರಿಯಾಗಿಲ್ಲದಿರುವುದು.

4) ಅಕ್ಷರಗಳಿಗೆ ತಲೆಗಟ್ಟನ್ನು ಏರುಪೇರಾಗಿ ಹಾಕುವುದು.

5) ಅಕ್ಷರಗಳನ್ನು ಒಂದು ಕಡೆ ಬಾಗಿಸಿ ಬರೆಯುವುದು.

6) ಅಸ್ಪಷ್ಟವಾಗಿ ಅಕ್ಷರಗಳನ್ನು ಬರೆಯಿರಿ.

7) ಕಾಗುಣಿತ ವಿನ್ಯಾಸಗಳನ್ನು ಅಕ್ಷರಗಳಿಗೆ ಅಸ್ಪಷ್ಟವಾಗಿ ಜೋಡಿಸಿ ಬರೆಯುವುದು.

8) ಅಕ್ಷರಗಳಿಗೆ ಒತ್ತಕ್ಷರಗಳನ್ನು ಅಸ್ತವ್ಯಸ್ತವಾಗಿ ಹಾಕುವುದು.

9)

i. ಅಕ್ಷರ ರಚನಾ ವಿನ್ಯಾಸದ ದೋಷಗಳಿಗೆ ಕಾರಣಗಳು

1. ಲೇಖನಿ ಹಿಡಿದು ಬರೆಯುವ ಸೂಕ್ತ ಅಭ್ಯಾಸವಿಲ್ಲದಿರುವುದು.

2. ಆಸಕ್ತಿ ಪ್ರಚೋದನೆ ಇಲ್ಲದಿರುವುದು.

3. ರೇಖಾ ವಿನ್ಯಾಸಗಳನ್ನು ಬರೆಯುವ ಅಭ್ಯಾಸವಿಲ್ಲದಿರುವುದು.

4. ಅಕ್ಷರಗಳ ಮೂಲ ರೂಪದ ಸ್ಪಷ್ಟ ಕಲ್ಪನೆ, ತಿಳುವಳಿಕೆ ಕೊರತೆ.

5. ಅಕ್ಷರಗಳನ್ನು ಬರೆಯುವ ನಿಯಮ ಮತ್ತು ಕ್ರಮ ತಿಳಿಯದಿರುವುದು.

6. ಅಕ್ಷರಗಳನ್ನು ಬರೆಯುವ ಅಭ್ಯಾಸಗಳಿಲ್ಲದೆ ಇರುವುದು.

7. ಬೆರಳುಗಳು ಮತ್ತು ಮುಂಗೈನ ಹೊಂದಾಣಿಕೆ ಇಲ್ಲದಿರುವುದು.

8. ಒತ್ತಕ್ಷರ, ಸಂಯುಕ್ತಾಕ್ಷರಗಳನ್ನು ಬರೆಯುವ ತರಬೇತಿ ಇಲ್ಲದಿರುವುದು.

9. ಕಾಪಿ ಪುಸ್ತಕ ಬರೆಯುವ ಅಭ್ಯಾಸದ ಕೊರತೆ.

10. ಪ್ರಾಥಮಿಕ ಹಂತಗಳನ್ನು ಬರವಣಿಗೆಯ ಸೂಕ್ತ ಮಾರ್ಗದರ್ಶನ ಇಲ್ಲದೆ ಇತ್ಯಾದಿ ಕಾರಣಗಳಿಂದ ಅಕ್ಷರ ರಚನಾ ವಿನ್ಯಾಸದಲ್ಲಿ ದೋಷಗಳಾಗುತ್ತವೆ.

ii. ಅಕ್ಷರ ಮತ್ತು ಪದಜೋಡಣೆಯಲ್ಲಿ ಆಗುವ ದೋಷಗಳು

1. ಅಕ್ಷರ ಹಾಗೂ ಪದಗಳನ್ನು ಸರಿಯಾಗಿ ಜೋಡಿಸದಿರುವುದು
2. ಅಕ್ಷರಗಳು ಒಂದಕ್ಕೆ ಒಂದು ತಾಗುವಂತೆ ಜೋಡಿಸುವುದು
3. ಅಕ್ಷರಗಳನ್ನು ಒಂದರೊಳಗೊಂದು ಸೇರಿಸಿ ಬರೆಯುವುದು
4. ಅಕ್ಷರಗಳ ಗಾತ್ರ ಏರುಪೇರಾಗಿರುವುದು
5. ಅಕ್ಷರಗಳು ಹಾಗೂ ಪದಗಳ ನಡುವೆ ಸೂಕ್ತ ಅಂತರವಿಲ್ಲದೆ ಜೋಡಿಸುವುದು\
6. ಪದಗಳನ್ನು ತಂದು ಮಾಡಿ ಬರೆಯುವುದು
7. ಅಕ್ಷರಗಳನ್ನು ಬಿಡಿ ಬಿಡಿಯಾಗಿ ಬರೆಯುವುದು
8. ವ್ಯಕ್ತವಾದ ಸಾಲುಗಳನ್ನು ಬರೆಯುವುದು

ಇದರಿಂದ ಬರಹದ ಸಹಜತೆ ಮತ್ತು ಸೌಂದರ್ಯ ಕೆಡುತ್ತಿದೆ.

iii. ಅಕ್ಷರ ಮತ್ತು ಪದಜೋಡಣೆಯಲ್ಲಿ ಆಗುವ ದೋಷಗಳಿಗೆ ಕಾರಣಗಳು

1. ಅಕ್ಷರ ಮತ್ತು ಪದಗಳ ಜೋಡಣೆಯಲ್ಲಿ ತರಬೇತಿ ಇಲ್ಲದಿರುವುದು.
2. ವಾಕ್ಯರಚನೆಯ ಅಭ್ಯಾಸಗಳಿಲ್ಲದಿರುವುದು.
3. ಕಾಪಿ ಪುಸ್ತಕ ಬರೆಯುವ ಅಭ್ಯಾಸವಿಲ್ಲದಿರುವುದು.
4. ಸರಿಯಾದ ಲೇಖನ ಸಾಮಗ್ರಿಗಳ ಕೊರತೆ.
5. ಆತುರ ಅಥವಾ ತಾತ್ಸಾರದಿಂದ ಬರೆಯುವುದು.
6. ಪ್ರತಿದಿನ ಕೈ ಬರಹದ ಅಭ್ಯಾಸ ಇಲ್ಲಧಿರುವುದು.
7. ನಿರಾಸಕ್ತಿಯಿಂದ ಬರೆಯುವುದು.

iv. ಲೇಖನ ಚಿಹ್ನೆಗಳನ್ನು ಅಳವಡಿಸುವ ದೋಷಗಳು

1. ವಾಕ್ಯಗಳಿಗೆ ಅಗತ್ಯವಿಲ್ಲದ ಕಡೆ ಲೇಖನ ಚಿಹ್ನೆಗಳನ್ನು ಹಾಕುವುದು.
2. ವಿವಿಧ ಚಿಹ್ನೆಗಳ ಬಗ್ಗೆ ಸೂಕ್ತವಾದ ಜ್ಞಾನವಿಲ್ಲದೆ ಹಾಕುವುದು.
3. ಮಹಾಪ್ರಾಣಕ್ಕೆ ಅಲ್ಪಪ್ರಾಣದ ಬತ್ತು ಕೂಡುವುದು.
4. ಅವಶ್ಯವಿರುವ ಕಡೆ ಲೇಖನ ಚಿಹ್ನೆ ಹಾಕದಿರುವುದು.

5. ಲೇಖನ ಚಿಹ್ನೆಗಳ ಪರಿಚಯವಿಲ್ಲದಿರುವುದು.
6. ವಾಕ್ಯರಚನೆ ಬಗ್ಗೆ ಅಪೂರ್ಣ ಜ್ಞಾನ.
7. ವಾಚನ ಅಭ್ಯಾಸದ ಕೊರತೆ.

v. ವಾಕ್ಯ ರಚನೆ, ವಾಕ್ಯ ವೃಂದದ ರಚನೆಯಲ್ಲಿ ಸಂಭವಿಸುವ ದೋಷಗಳು

1. ಅತಿ ಉದ್ದನೆಯ ಅಥವಾ ಅಪೂರ್ಣ ವಾಕ್ಯ ರಚನೆ.
2. ಸಂದಿಗ್ಧ ವಾಕ್ಯಗಳು, ಅರ್ಥವಾಗದ ವಾಕ್ಯಗಳನ್ನು ಬರೆಯುವುದು.
3. ವ್ಯಾಕರಣ ದೋಷದ ವಾಕ್ಯಗಳು.
4. ಅವಶ್ಯಕ ಲೇಖನ ಚಿಹ್ನೆಗಳನ್ನು ಅಳವಡಿಸದೆ ರಚಿಸುವ ವಾಕ್ಯಗಳು.
5. ಕಾಲ, ಲಿಂಗ, ವಚನಗಳನ್ನು ಸರಿಯಾಗಿ ಬಳಸದೆ ಇರುವುದು.
6. ಅನವಶ್ಯಕ ಪದಗಳನ್ನು ಸೇರಿಸುವುದು.
7. ಪದಗಳನ್ನು ಪುನರಾವರ್ತನೆ ಮಾಡುವುದು.
8. ಉದ್ದದ ವಾಕ್ಯವೃಂದ ಬರೆಯುವುದು.
9. ಅನಾವಶ್ಯಕ ವಾಕ್ಯಗಳನ್ನು ಪುನರಾವರ್ತಿಸಿ ಬರೆಯುವುದು.
10. ವಾಕ್ಯಗಳು ಪರಸ್ಪರ ಸಂಪರ್ಕ ಕಳೆದುಕೊಂಡಿರುವುದು.
11. ವಾಕ್ಯಗಳು ಆಲೋಚನೆಗಳನ್ನು ಬೆಳೆಸದೆ ತುಂಡಾಗಿರುವುದು.
12. ವಿಷಯ, ವಾಕ್ಯ ಮತ್ತು ಉಪಸಂಹಾರ ವಾಕ್ಯಗಳ ಮಹತ್ವವನ್ನು ಅರಿಯದೇ ಬರೆಯುವುದು.

vi. ಕೈ ಬರಹದ ಒಟ್ಟಾರೆ ಮೈ ಕಟ್ಟಿನಲ್ಲಿ ಆಗುವ ದೋಷಗಳು

1. ಮಾರ್ಜಿನ್ ಬಿಡದೆ ಬರೆಯುವುದು.
2. ಶೀರ್ಷಿಕೆ ಮತ್ತು ಉಪಶೀರ್ಷಿಕೆಗಳನ್ನು ನೀಡದೇ ಇರುವುದು.
3. ಸುಸ್ಪಷ್ಟತೆ ಮತ್ತು ಸಮರೂಪತೆಯನ್ನು ಕಾಯ್ದುಕೊಳ್ಳದೇ ಬರೆಯುವುದು.
4. ಅರ್ಧಪದ ಮತ್ತು ಶೂನ್ಯದಿಂದ ಸಾಲುಗಳನ್ನು ಮುಗಿಸಿ ನಂತರ ಸಾಲನ್ನು ಅರ್ಧ ಪದದಿಂದ ಪ್ರಾರಂಭಿಸಿ ಬರೆಯುವುದು.
5. ವಾಕ್ಯವೃಂದ ಪ್ರಾರಂಭಿಸುವ ವಿಧಾನ ತಿಳಿಯದಿರುವುದು.
6. ಪದರಚನೆಯಲ್ಲಿ ಆಗುವ ದೋಷಗಳು.
7. ಪದಗಳನ್ನು ತುಂಡು ಮಾಡಿ ಬರೆಯುವುದು, ವಕ್ರವಾದ ಸಾಲುಗಳು, ಸಾಲುಗಳ ನಡುವೆ ಸೂಕ್ತ ಅಂತರ ಕಾಯ್ದುಕೊಳ್ಳದೆ ಬರೆಯುವುದು.
8. ಬರೆದಿರುವ ಶಾಯಿಯ ಮಂದತೆಯಲ್ಲಿ ಬರಹದಲ್ಲಿ ಸ್ಥಿರತೆ ಇಲ್ಲದಿರುವುದು.

9. ಅಕ್ಷರಗಳು ಸಮರೂಪವಾಗಿರದೆ ಏರುಪೇರು ಗಾತ್ರದಲ್ಲಿ ಇರುವುದು.

10. ವಕ್ರವಾದ ಸಾಲುಗಳನ್ನು ಬರೆಯುವುದು.

11. ಸರಾಗವಾಗಿ ಬರೆಯುವ ಲೇಖನಿಯ ಬಳಸದಿರುವುದು.

ಇಂತಹ ದೋಷಗಳಿಂದ ಇಡೀ ಕೈ ಬರಹ ತನ್ನ ಸೊಬಗನ್ನು ಕಳೆದುಕೊಳ್ಳುತ್ತದೆ. ಇದರಿಂದ ಭಾಷೆಯ ರಚನೆ ಮತ್ತು ವಿಷಯ ನಿರೂಪಣೆಯ ಕ್ರಮದಲ್ಲಿ ದೋಷಗಳಿರುತ್ತವೆ.

1.5. ಬರವಣಿಗೆ ದೋಷಗಳ ಬಗ್ಗೆ ವಿದ್ವಾಂಸರ ಅಭಿಪ್ರಾಯ

ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆ ದೋಷಗಳು ಕಂಡುಬರುವಲ್ಲಿ ಕಾರಣಗಳು ಮತ್ತು ಅವುಗಳಿಂದ ಉಂಟಾಗುವ ಪರಿಣಾಮದ ಬಗ್ಗೆ ಭಾಷಾ ವಿಜ್ಞಾನಿಗಲು ಹಲವು ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

ಭಾಷಾ ವಿದ್ವಾಂಸರಾದ ಡಿ.ಎನ್. ಶಂಕರಭಟ್ ರವರು ತಮ್ಮ ಕೃತಿಯಾದ 'ಕನ್ನಡ ಬರಹವನ್ನು ಸರಿಪಡಿಸೋಣ' ದಲ್ಲಿ ಸಂಸ್ಕೃತದ ಪದಗಳನ್ನು ಸಂಸ್ಕೃತದಲ್ಲಿ ಇರುವಂತೆಯೇ ಬರೆಯುವ ಕೆಲಸದಲ್ಲಿ ಮೇಲ್ವರ್ಗದ ಮಕ್ಕಳಿಂದ ಹೆಚ್ಚಾಗಿ ಕೆಳವರ್ಗದ ಮಕ್ಕಳೇ ಹೆಚ್ಚು ತಪ್ಪುಗಳನ್ನು ಮಾಡುತ್ತಾರೆ. ಈ ರೀತಿ ಉಚ್ಚಾರಣೆ ಇಲ್ಲದ ಹಲವು ವ್ಯತ್ಯಾಸಗಳನ್ನು ಬರಹದಲ್ಲಿ ತೋರಿಸುವ ಕಾರಣವಲ್ಲದೇ ಕನ್ನಡದ ಮಟ್ಟಿಗೆ ಅವಶ್ಯಕವಿಲ್ಲದ ಹಲವು ಕನ್ನಡ ಅಕ್ಷರಗಳಾದ ಶ, ಷ, ಮಹಾಪ್ರಾಣಾಕ್ಷರಗಳು, ಅನುಸ್ವಾರ, ವಿಸರ್ಗ ಅಕ್ಷರಗಳಲ್ಲಿ ಬಳಸುತ್ತಿರುವುದೇ ಬರವಣಿಗೆ ದೋಷಕ್ಕೆ ಕಾರಣವಾಗಿದೆ. ನಿಜಕ್ಕೂ ಕನ್ನಡದವೇ ಆದ ಪದಗಳನ್ನು ಬರೆಯಲು ಒಟ್ಟು ಮೂವತ್ತಮೂರು ಅಕ್ಷರಗಳು ಸಾಕು ಎಂದು ಹೇಳಿದ್ದರೆ ಹಾಗೂ ಕನ್ನಡದಲ್ಲಿ ಬಳಕೆಯಲ್ಲಿ ಇಲ್ಲದ ದೇಶೀ ಸ್ವರಗಳನ್ನು ಬಳಸದೇ ಇರುವುದು, ಕಲಿಕೆಗೆ ಬೇಕಾದ ಅಕ್ಷರಗಳನ್ನು ಮಾತ್ರ ತೆಗೆದುಕೊಳ್ಳಬೇಕು ಎನ್ನುತ್ತಾರೆ. ಅಂದರೆ ಕನ್ನಡ ಲಿಪಿ ಚಿಹ್ನೆಗಳಲ್ಲಾಗುವ ದೋಷಗಳಲ್ಲಿ ಸ್ವೀಕೃತ ವರ್ಣಗಳೇ ಬರವಣಿಗೆ ದೋಷಗಳಿಗೆ ಕಾರಣ ಅದಕ್ಕಾಗಿ ದೇಶಿ ವರ್ಣಗಳನ್ನು ಮಾತ್ರ ಬಳಸಿಕೊಳ್ಳಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಡಿ.ಎನ್ ಶಂಕರ ಭಟ್ ರವರ ವಾದವನ್ನು ಭಾಷಾ ತಜ್ಞರಲ್ಲಿ ಪ್ರಮುಖರಾದ ಡಾ.ಎಂ ಚಿದಾನಂದ ಮೂರ್ತಿ ಹಾಗೂ ಜಿ. ವೆಂಕಟಸುಬ್ಬಯ್ಯನವರು ವಿರೋಧಿಸುತ್ತಾ ಅವರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇವರ ಪ್ರಕಾರ ಕನ್ನಡದಲ್ಲಿರುವ ಸ್ವೀಕೃತ ಪದಗಳನ್ನು ಮತ್ತು ಲಿಪಿ-ಚಿಹ್ನೆಗಳನ್ನು ತೆಗೆದು ಹಾಕಿದರೆ ಬರವಣಗೆ ಅಸಂಬದ್ದವಾಗುತ್ತದೆಯಲ್ಲದೇ ಕನ್ನಡದ ಸಂಸ್ಕೃತಿಗೆ ದಕ್ಕೆಯಾಗುತ್ತದೆ ಮತ್ತು ಕನ್ನಡದಲ್ಲಿ ಹಿಂದಿನಿಂದಲೂ ಬಳಸಿಕೊಂಡು ಬಂದ ಸಂಸ್ಕೃತ ಮತ್ತು ಇತರೆ ಸ್ವೀಕೃತ ಪದಗಳನ್ನು ತೆಗೆದು ಹಾಕುವುದು ಕಷ್ಟದ ಕೆಲಸವಾಗಿದೆ. ಎಂದು ಹೇಳಿದ್ದಾರೆ.

ಈ ಮೇಲಿನ ತಜ್ಞರ ಹೇಳಿಕೆಯನ್ನು ನೋಡಿದಾಗ ಬರವಣಿಗೆಯ ದೋಷಗಳನ್ನು ಕಂಡು ಹಿಡಿಯಲು ಹಾಗು ಅದಕ್ಕೆ ಕಾರಣಗಳನ್ನು ಹುಡುಕಲು ಈ ಸಂಪ್ರಬಂಧದಲ್ಲಿ ಕೇವಲ ಪ್ರಾಥಮಿಕ ಶಾಲಾ

ಮಕ್ಕಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಗೆ ಸಂಬಂಧಿಸಿದ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳ ಮಕ್ಕಳ ಸಮೀಕ್ಷೆಯಲ್ಲಿ ಕನ್ನಡ ಭಾಷಾ ಕಲಿಕೆಯ ಬರವಣಿಗೆ ದೋಷಗಳನ್ನು ಹ್ರಸ್ವ ಸ್ವರ – ಧೀರ್ಘಸ್ವರ, ಶ, ಷ, ಸ, ನ, ಲ, ಳ, ಗಳ ದೋಷ 'ಅ' ಕಾರಾದಿ, ಸ್ವರಾದಿ ಅಲ್ಪಪ್ರಾಣ, ದೀರ್ಘ, ಒತ್ತಕ್ಷರ, ಅರ್ಕಾವತ್ತು, ಮತ್ತು ಇತರೆ ದೋಷಗಳನ್ನು ಕಂಡುಕೊಳ್ಳಲು ಶಾಲಾವಾರು ಸಮೀಕ್ಷೆಯನ್ನು ನಡೆಸಿ ಅವುಗಳಲ್ಲಿ ಕಂಡುಬರುವ ದೋಷ ಪ್ರಮಾಣಗಳನ್ನು ವಿದ್ಯಾರ್ಥಿಗಳ ಸ್ವ-ವಿವರದ ಹಿನ್ನೆಲೆಯಲ್ಲಿ ಸಮೀಕ್ಷೆ ಕೈಗೊಂಡು ಬರವಣಿಗೆ ದೋಷ ಪ್ರಮಾಣವನ್ನು ಈ ಸಂಪ್ರಬಂಧದ ಮೂಲಕ ವಿಶ್ಲೇಷಿಸಲಾಗಿದೆ.

1.6 ಅಧ್ಯಯನದ ಅಗತ್ಯತೆ

1) ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಅಥವಾ ಖಾಸಗಿ ಪ್ರಾಥಮಿಕ ಶಾಲೆಗಳ 7ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆ ದೋಷಗಳು ಹೆಚ್ಚಾಗಿ ಕಂಡುಬರುತ್ತಿರುವ ಕಾರಣದಿಂದ ಇದರ ಅಧ್ಯಯನ ಅತಿ ಮುಖ್ಯವಾಗಿದೆ.
2) ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ದೃಷ್ಟಿಯಿಂದ ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ ಮತ್ತು ಬರವಣಿಗೆ ಕಲಿಸುವುದು ಅಗತ್ಯವಾಗಿದೆ.
3) ಪ್ರಸ್ತುತ ಪ್ರಾಥಮಿಕ ಶಾಲೆಗಳ ಮೇಲೆ ಪರಭಾಷೆಗಳು ಹೆಚ್ಚು ಪ್ರಭಾವ ಬೀರುತ್ತಿರುವುದರಿಂದ ಕನ್ನಡ ಭಾಷೆಯ ಮಹತ್ವವನ್ನು ತಿಳಿಸುವುದು ಅಗತ್ಯವಾಗಿದೆ.
4) ಕಿರು ಸಂಶೋಧನೆಯನ್ನು ಕೈಗೊಂಡ ಸಂಶೋಧಕರು ಪ್ರಸ್ತುತ ಪ್ರಾಥಮಿಕ ಶಾಲೆಯ ಶಿಕ್ಷಕರಾಗಲು ತರಬೇತಿ ಹೊಂದುತ್ತಿರುವ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ (ಡಿ.ಇಡಿ) ಕನ್ನಡ ಭಾಷಾ ಬೋಧನೆಯ ಬಗ್ಗೆ ಬೋಧಿಸುವುದರಿಂದ ಅಧ್ಯಯನ ಅಗತ್ಯವಾಗಿದೆ.
5) ಸಂಶೋಧಕರು ತಮ್ಮ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ಬೋಧನೆ ಮಾಡುವಾಗ ಎದುರಾಗುವ ಸಮಸ್ಯೆಗಳನ್ನು ಗುರುತಿಸಿಕೊಳ್ಳಲು ಅಧ್ಯಯನ ಅಗತ್ಯವಾಗಿದೆ.
6) ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯನ್ನು ಆಸ್ವಾದಿಸುವ ಹಾಗೂ ಪ್ರಶಂಸಿಸುವ ಗುಣವನ್ನು ಬೆಳೆಸಬೇಕಾಗಿರುವದರಿಂದ ಅಧ್ಯಯನ ಅಗತ್ಯವಾಗಿದೆ.
7) ಪ್ರಸ್ತುತ ಶಾಲೆಗಳು ಉದ್ಯಾನನಗರಿಯಾದ ಬೆಂಗಳೂರು ನಗರದಲ್ಲಿ ಹಾಗೂ ಉದ್ಯಾನ ನಗರಿಯ ಪಕ್ಕದಲ್ಲಿ ಗ್ರಾಮೀಣ ಜಿಲ್ಲೆ ನೆಲಮಂಗಲ ಹಾಗೂ ದೊಡ್ಡಬಳ್ಳಾಪುರದಲ್ಲಿ ಇರುವ ಕಾರಣ ಈ ಶಾಲೆಗಳ ಮಕ್ಕಳ ಭಾಷೆಯ ಮೇಲೆ ಪರಭಾಷೆಯ ಪ್ರಭಾವ ಹೆಚ್ಚಾಗಿರುದರಿಂದ ಭಾಷಾ ಕಲಿಕೆಯಲ್ಲಿ ಆಸಕ್ತಿ ಕಡಿಮೆಯಾಗಿರುವುದು ಕಂಡು ಬರುತ್ತದೆ.

8) ಸಾಮಾಜಿಕ ಪರಿಸರ ಕನ್ನಡ ಭಾಷೆಯ ಬಗ್ಗೆ ತಪ್ಪು ಮನೋಭಾವ ಇರುವುದರಿಂದ ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

9) ಸಂಶೋಧಕರು ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಉಪನ್ಯಾಸಕರಾಗಿರುವುದರಿಂದ ರೂಡಿಬೋಧನೆ ಅವಧಿಯಲ್ಲಿ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳ 7ನೇ ತರಗತಿ ವಿದ್ಯಾರ್ಥಿಗಳು ಭಾಷಾ ಕಲಿಕೆಯಲ್ಲಿ ಮಾಡುತ್ತಿರುವ ಲೋಪದೋಷಗಳ ಬಗ್ಗೆ ಅರಿವಿದೆ.

10) ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ಸೂಕ್ತವಾದ ವಾತಾವರಣ ಕಲ್ಪಿಸಿಕೊಡದೆ ಇರುವ ಕಾರಣದಿಂದ ಹಿಂದಿನ ಶಿಕ್ಷಕರು ಭಾಷೆಯನ್ನು ಕಲಿಸುವಲ್ಲಿ ತಾತ್ಸಾರ ಮನೋಭಾವನೆಯನ್ನು ತೋರಿರಬಹುದೆಂದು ಅಧ್ಯಯನ ಅಗತ್ಯವಾಗಿದೆ.

11) ಬೆಂಗಳೂರು ನಗರ ಹಾಗೂ ಗ್ರಾಮೀಣ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಗೆ ದೋಷಗಳು – ಸಮೀಕ್ಷಾ ಅಧ್ಯಯನ ಮಾಡದ ಹಿನ್ನೆಲೆಯಲ್ಲಿ ಸಂಶೋಧಕರು ಈ ಸಮಸ್ಯೆಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಇವುಗಳ ಹಿನ್ನೆಲೆಯಲ್ಲಿ "ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು" – ಸಮೀಕ್ಷಾ ಅಧ್ಯಯನ ವಾಗಿದ್ದು, ಬರವಣಿಗೆ ದೋಷಗಳು ಯಾವುವು? ಬರವಣಿಗೆ ದೋಷಗಳಿಗೆ ಕಾರಣಗಳೇನು? ಬರವಣಿಗೆ ದೋಷಗಳು ಯಾವ ಪ್ರಮಾಣದಲ್ಲಿ ಕಂಡುಬರುತ್ತದೆ ಎಂಬುದನ್ನು ಸಂಪ್ರಬಂಧದ ಮೂಲಕ ತಿಳಿಸಲಾಗುತ್ತದೆ.

1.7 ಅಧ್ಯಯನದ ಉದ್ದೇಶಗಳು

1) ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳು ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದು.

2) ವಿದ್ಯಾರ್ಥಿಗಳು ಕನ್ನಡ ಭಾಷಾ ಬರವಣಿಗೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಕಾರಣಗಳನ್ನು ಕಂಡುಕೊಳ್ಳುವುದು

3) ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಬರವಣಿಗೆಯಲ್ಲಿ ಪರಿಣಾಮಕಾರಿಯಾಗಿ ಕಲಿಸಲು ಸೂಕ್ತ ಸಲಹೆ ನೀಡುವುದು.

4) ವಿದ್ಯಾಥಿಗಳಲ್ಲಿ ಗುರುತಿಸಿಕೊಂಡ ಸಮಸ್ಯೆಗಳಿಗೆ ಸೂಕ್ತ ಸಲಹೆ ನೀಡುವುದು.

5) ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳಲ್ಲಿ 7ನೇ ತರಗತಿಯ ಹೆಣ್ಣು ಮತ್ತು ಗಂಡು ಮಕ್ಕಳ ನಡುವೆ ಇರುವ ವ್ಯತ್ಯಾಸ ತಿಳಿಯುವುದು.

6) ಕನ್ನಡ ಭಾಷಾ ಬೋಧಕರು ತಮ್ಮ ಕನ್ನಡ ಭಾಷಾ ಬೋಧನೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಂಡು ಕಲಿಕೆಯನ್ನು ಯಶಸ್ವಿಗೊಳಿಸುವುದು.

7) ವಿದ್ಯಾರ್ಥಿಗಳಿಗೆ ಭಾಷಾ ಕೌಶಲಗಳಾದ ಆಲಿಸುವ ಕೌಶಲ, ಮಾತಿನ ಕೌಶಲ, ಓದಿನ ಕೌಶಲ ಮತ್ತು ಬರವಣಿಗೆ ಕೌಶಲ ಗಳನ್ನು ಅಭಿವೃದ್ಧಿ ಪಡಿಸುವುದು.

8) ಕನ್ನಡ ಭಾಷಾ ಬೋಧನೆಯಲ್ಲಿ ಬರವಣಿಗೆಗೆ ಬೇಕಾದ ಸೂಕ್ತ ಬೋಧನೋಪಕರಣಗಳನ್ನು ವ್ಯವಸ್ಥಿತವಾಗಿ ಬಳಕೆ ಮಾಡಿಕೊಂಡು ಕಲಿಕೆ ಯಶಸ್ವಿಯಾಗುವಂತೆ ಮಾಡುವುದು.

9) ವಿದ್ಯಾರ್ಥಿಗಳ ಭಾಷಾ ಪ್ರೌಡಿಮೆಯನ್ನು ವೃದ್ದಿಸುವುದು

10) ಪ್ರಬಂಧ, ಕಥೆ, ಲೇಖನಗಳನ್ನು ಬರೆಯುವ ಪ್ರೌಡಿಮೆಯನ್ನು ಬೆಳೆಸುವುದು.

11) ಕನ್ನಡ ಭಾಷಾ ಬೋಧನೆಯ ಮೂಲಕ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಬೆಳೆಸುವುದು

12) ಕನ್ನಡ ಭಾಷೆಯನ್ನು ಉತ್ತಮ ರೀತಿಯಲ್ಲಿ ಬಳಕೆ ಮಾಡುವ ಸಾಮರ್ಥ್ಯ ಬೆಳೆಸುವುದು

13) ಕರ್ನಾಟಕದಲ್ಲಿ ಕನ್ನಡಿಗರಿಗೆ ಅನ್ನದ ಸಮಸ್ಯೆಯನ್ನು ಹೋಗಲಾಡಿಸುವುದು

14) ಬೆಂಗಳೂರು ನಗರ ಮತ್ತು ಗ್ರಾಮೀಣ ಮಕ್ಕಳನ್ನು ಆಯ್ಕೆ ಮಾಡಿಕೊಂಡ ಸರ್ಕಾರಿ, ಅನುದಾನಿತ, ಮತ್ತು ಖಾಸಗಿ ಶಾಲೆಗಳನ್ನು ವಿಭಾಗಿಸಿಕೊಂಡು ಅಲ್ಲಿನ 7ನೇ ತರಗತಿ ವಿದ್ಯಾರ್ಥಿಗಳಲ್ಲಿ ಅವರ ಕಾಗುಣಿತ ದೋಷದ ಪ್ರಮಾಣವನ್ನು ಸೂಚಿಸುವುದು.



ಅಧ್ಯಾಯ–2

ಪೂರಕ ಸಾಹಿತ್ಯದ ಅವಲೋಕನ

ಅಧ್ಯಾಯ 2

ಪೂರಕ ಸಾಹಿತ್ಯದ ಅವಲೋಕನ

2.1 ಪೀಠಿಕೆ

ಪೂರಕ ಸಾಹಿತ್ಯಾವಲೋಕನವು ಸಂಶೋಧಕನಿಗೆ ಹೊಸ ವಿಷಯಗಳ ಜ್ಞಾನದ ಅರಿವು ಮೂಡಿಸುತ್ತದೆ. ಇದು ಸಂಶೋಧಕನಿಗೆ ಹೊಸ ಒಳನೋಟ ದೊರಕಿಸಿಕೊಡಲು ಹಾಗೂ ಹೊಸ ಮಾರ್ಗೋಪಾಯಗಳನ್ನು ಅನುಸರಿಸಿ ಸಂಶೋಧನೆಯನ್ನು ಕೈಗೊಳ್ಳಲು ಅಗತ್ಯವಾದ, ಸೂಕ್ತವಾದ ಜ್ಞಾನವನ್ನು ಒದಗಿಸಿಕೊಡುತ್ತದೆ. ಇದರಿಂದ ಸಂಶೋಧನೆಯನ್ನು ಹೆಚ್ಚಿನ ತೊಡಕಿಲ್ಲದೆ ಕೈಗೊಳ್ಳಬಹುದು.

ವೈಯಕ್ತಿಕವಾಗಿ ಯೋಜನೆ ಮಾಡಿದ ಸಂಶೋಧನೆಗೆ ಸಂಬಂಧಪಟ್ಟ ವರದಿಗಳ ಗುರುತಿಸುವಿಕೆ ವಾಚನ ಮತ್ತು ಮೌಲ್ಯಮಾಪನ ಹಾಗೂ ಅವಲೋಕನ ಮತ್ತು ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುತ್ತದೆ.

ಜಾನ್ ಬೆಸ್ಟಲ್ ರವರ ಪ್ರಕಾರ:-

"ಹೆಚ್ಚು ಕಡಿಮೆ ಎಲ್ಲಾ ಮಾನವ ಜ್ಞಾನವನ್ನು ಪುಸ್ತಕಗಳಲ್ಲಿ ಮತ್ತು ಗ್ರಂಥಾಲಯಗಳಲ್ಲಿ ಕಾಣಬಹುದು. ಆದರೆ ಇತರ ಪ್ರಾಣಿಗಳ ಪ್ರತಿ ಒಂದು ಪೀಳಿಗೆಯಲ್ಲಿಯೂ ಹೊಸದಾಗಿಯೇ ಪ್ರಾರಂಬಿಸಬೇಕಾಗುತ್ತದೆ. ಮಾನವನು ಭೂತಕಾಲದ ಒಟ್ಟುಗೂಡಿಸಿದ ಮತ್ತು ದಾಖಲಿಸಿದ ಜ್ಞಾನದ ಆಧಾರದ ಮೇಲೆ ಹೊಸದನ್ನು ಕಟ್ಟುತ್ತಾನೆ." ಎಂದಿದ್ದಾರೆ.

2.2 ಬರವಣಿಗೆ ದೋಷ ಹಾಗೂ ಕನ್ನಡ ಭಾಷೆ ಬಗೆಗೆ ನಡೆಸಿರುವ ಅಧ್ಯಯನಗಳು

ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಕನ್ನಡ ಭಾಷಾ ಸಾಧನೆಯ ಮಟ್ಟವನ್ನು ಆಧಾರವಾಗಿಟ್ಟುಕೊಂಡು "ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು ಮತ್ತು ಅವುಗಳಿಗೆ ಕಾರಣಗಳು" ಇದನ್ನು ಆಧಾರವಾಗಿಟ್ಟುಕೊಂಡು ನೋಡುವುದರಿಂದ ಇಂತಹ ಸಮೀಕ್ಷಾ ಅಧ್ಯಯನಗಳು ನಡೆದಿರುವುದು ವಿರಳವಾಗಿದೆ. ಕನ್ನಡ ಭಾಷಾ ಸಾಧನೆ ಮತ್ತು ಭಾಷಾ ಬೋಧನಾ ವಿಧಾನಗಳನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಆದರೆ "ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು" ಇದರ ಮೇಲೆ ಯವುದೇ ಸಮೀಕ್ಷಾ ಅಧ್ಯಯನವು ನಡೆದಿರುವುದಿಲ್ಲ. ಹೀಗಾಗಿ ಪ್ರಸ್ತುತ ಅಧ್ಯಯನ ತನ್ನದೇ ಆದ ಮಹತ್ವವನ್ನು ಹೊಂದಿದೆ. ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ ಈ ಮೊದಲು ನಡೆದಿರುವ ಸಂಶೋಧನೆಗಳನ್ನು ಅವಲೋಕಿಸಿ ಮಾಹಿತಿ ಸಂಗ್ರಹಿಸುವುದೇ ಪೂರಕ ಸಾಹಿತ್ಯಾವಲೋಕನ. ಪ್ರಸ್ತುತ ಅಧ್ಯಯನದಲ್ಲಿ ಅನೇಕ ಸಂಶೋಧಕರು ಆಯ್ಕೆ ಮಾಡಿಕೊಂಡ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಸಂಶೋಧನೆಗಳನ್ನು ಮತ್ತು ಅವರ ಅಭಿಪ್ರಾಯಗಳನ್ನು ಈ ಕೆಳಗಿನಂತೆ ಕೊಡಲಾಗಿದೆ.

[illegible]

ಹಾಗೆಯೇ ಸಂಗ್ರಹಿಸಿದ ಹಾಗೂ ದಾಖಲಿಸಿದ ಹಿಂದಿನ ಜ್ಞಾನವು ಸೈದ್ಧಾಂತಿಕ ಮತ್ತು ಸಂಶೋಧನೆಯ ರೂಪದಲ್ಲಿ ದೊರೆಯುತ್ತದೆ. ಮತ್ತು ಆ ಕ್ಷೇತ್ರದಲ್ಲಿಯು ಹೊಸ ಜ್ಞಾನವು ಇದರ ಮೇಲೆಯೇ ರಚಿತವಾಗುತ್ರದೆ. ಆದ್ದರಿಂದ ಸಂಶೋಧನೆಯು ಇಂತಹ ಒಂದು ಬುನಾದಿಯನ್ನು ಹೊಂದಿರಲೇ ಬೇಕಾಗುತ್ತದೆ. ಸಂಶೋಧನೆಯು ಸಮಸ್ಯೆಗೆ ಸಂಬಂದಿಸಿದಂತೆ ಜಾಗರೂಕತೆಯಿಂದ ಕೈಗೊಂಡ ಪೂರಕ ಸಾಹಿತ್ಯಾವಲೋಕನವು ಸಂಶೋಧನೆಯು ಒಂದು ಪ್ರಮುಖವಾದ ಮೆಟ್ಟಿಲಾಗಿದೆ. ಆದ್ದರಿಂದ ಈ ಕೆಳಕಂಡ ಸಂಶೋಧನೆಗಳನ್ನು ಅಧ್ಯಯನ ಮಾಡಲಾಗಿದೆ

ಹೇಮಮಾಲಿನಿ ಹೆಚ್.ಸಿ (2007) ಅವರು "9ನೇ ತರಗತಿಯ ಮಕ್ಕಳ ಕ್ರಿಯಾಪದಗಳ ಬಳಕೆಯ ಮೇಲೆ ಸಂಘಟಿತ ಉಪಕ್ರಮದ ಪರಿಣಾಮ" ಎಂಬ ಪ್ರಾಯೋಗಿಕ ಅಧ್ಯಯನದಲ್ಲಿ ಸಂಘಟಿತ ಉಪಕ್ರಮ ಇಂಗ್ಲೀಷ್ ವ್ಯಾಕರಣ ಕಲಿಕೆಯಲ್ಲಿ ಹೆಚ್ಚು ಪರಿಣಾಮಕಾರಿ ಹಾಗೂ ಇಂಗ್ಲೀಷ್ ವ್ಯಾಕರಣ ಕಲಿಕೆಯಲ್ಲಿ ಹುಡುಗ-ಹುಡುಗಿಯರ ನಡುವೆ ವ್ಯತ್ಯಾಸ ಕಂಡು ಬರುವುದಿಲ್ಲ ಎಂದು ನಿರ್ಣಯಿಸಿರುತ್ತಾರೆ.

ಜಕಾರಿಯಾ ಮತ್ತು ರೋಷನ್ (1999) ಅವರು ಇಂಗ್ಲೀಷ್ ಪ್ರಬಂಧ ಬರವಣೀಗೆಯಲ್ಲಿ ಯೋಚನಾ ಪ್ರಕ್ರಿಯಾ ಕೌಶಲಗಳನ್ನು ಬೆಳೆಸುವುದಕ್ಕೆ ರಚಿಸಿದ ಸೂಚನಾ ಸಾಮಗ್ರಿಗಳು ಪರಿಣಾಮಕಾರಿಯಾಗಿವೆ ಎಂಬುದಾಗಿ ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಹಾಗೂ ಪ್ರಬಂಧ ಬರವಣಿಗೆಯ ಪ್ರಕ್ರಿಯಾ ಕೌಶಲಗಳಿಗೂ ಹಾಗೂ ಬುದ್ಧಿಶಕ್ತಿಗೆ ಧನಾತ್ಮಕ ಸಂಬಂಧವಿದೆ ಎಂದು ತಿಳಿಸಿದ್ದಾರೆ.

ಶ್ಯಾಮಲ ಎಸ್,ಕೆ (1996) ಅವರು ಪ್ರಾಥಮಿಕ ಶಾಲಾ ಮಕ್ಕಳ ದ್ವಿತೀಯ ಭಾಷಾ ಪದ ಸಂಪತ್ತಿನ ಸಾಧನೆಯ ಮೇಲೆ ಅಧ್ಯಯನ ನಡೆಸಿದ್ದು, ಹುಡುಗರು ಹುಡುಗಿಯರಿಗಿಂತ ಹೆಚ್ಚಿನ ಪದಸಂಪತ್ತನ್ನು ಹೊಂದಿದ್ದಾರೆ ಎಂದು ತೀರ್ಮಾನಿಸಿರುತ್ತಾರೆ.

ಶಿವಲಿಂಗಯ್ಯ. ಎಸ್ "1992-93ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುವ 8ನೇ ತರಗತಿಯ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದ ವಿಮರ್ಶಾತ್ಮಕ ಅವಲೋಕನ"
1993- (ಮಾರ್ಗದರ್ಶಕರು: ಪ್ರೊ. ಉದ್ದಂಡಪ್ಪ. ಕೆ.ಹೆಚ್)
ಈ ಅಧ್ಯಯನದಲ್ಲಿ ಮುಂದೆ ಕಾಣಿಸಿದ ಮುಖ್ಯ ಗುರಿಗಳನ್ನು ಹಮ್ಮಿಕೊಳ್ಳಲಾಗಿತ್ತು.

1. ಪಠ್ಯಪುಸ್ತಕದಲ್ಲಿರುವ ಗುಣದೋಷಗಳನ್ನು ಗುರುತಿಸುವುದು.
2. ಅವುಗಳನ್ನು ಸಂಬಂದಿಸಿದ ಅಧಿಕಾರಿಗಳಿಗೆ ಕೊಡುವುದು.

ಉತ್ತಮ ಪಠ್ಯಪುಸ್ತಕದ ಹದಿನಾರು ಮಾನದಂಡಗಳ ಆಧಾರದ ಮೇಲೆ 8ನೇ ತರಗತಿಯ ಕನ್ನಡ ಪಠ್ಯಪುಸ್ತಕದ ವಿಶ್ಲೇಷಣೆ ಮಾಡಿ ಮೌಲ್ಯಮಾಪನ ಮಾಡಲಾಯಿತು. ಜೊತೆಗೆ ಹತ್ತು ಜನ ನುರಿತ ಶಿಕ್ಷಕರುಗಳ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಈ ಅಧ್ಯಯನದ ತೀರ್ಮಾನಗಳು

1. ಪಠ್ಯಪುಸ್ತಕದ ಮೊದಲನೆ ಪಾಠ ಕನ್ನಡಾಭಿಮಾನಕ್ಕೆ ಧಕ್ಕೆ ತರುವಂತದ್ದಾಗಿದೆ
2. ಕೆಲವು ಪಾಠಗಳ ಆಯ್ಕೆ ಸರಿಯಿಲ್ಲ.
3. ಹಳಗನ್ನಡ, ನಡುಗನ್ನಡ ಪಾಠಗಳಿಲ್ಲ.
4. ಹಳಗನ್ನಡ ಪದ್ಯಗಳಿಲ್ಲ.
5. ಸಾಹಿತ್ಯದ ಕೆಲವೇ ಪ್ರಕಾರಗಳನ್ನು ಸೇರಿಸಲಾಗಿದೆ.
6. ವ್ಯಾಕರಣ ಪಾಠಕ್ಕೆ ಪ್ರಾಧಾನ್ಯತೆಯನ್ನು ನೀಡಿಲ್ಲ.
7. ಪುಸ್ತಕ ಅಂದವಾಗಿಲ್ಲ ಹಾಗೂ ಮುದ್ರಣ ದೋಷಗಳಿಂದ ಕೂಡಿದೆ.

ಚಂದ್ರಹಾಸ ಎಸ್.ಎಂ "ಆನೇಕಲ್ ತಾಲ್ಲೂಕಿನ 9ನೇ ತರಗತಿಯ ವಿದ್ಯಾರ್ಥಿಗಳು ಕನ್ನಡ ಕಲಿಕೆಯ ಸಾಧನೆಯಲ್ಲಿ ಹಿಂದುಳಿಯಲು ಕಾರಣಗಳನ್ನು ಗುರುತಿಸಿ ಪರಿಹರಿಸುವ ಪ್ರಯತ್ನ"–1990 (ಮಾರ್ಗದರ್ಶಕರು–ಡಾ.ಜಯಲಕ್ಷ್ಮಿ ಟಿ.ಕೆ) ಈ ಅಧ್ಯಯನದಲ್ಲಿ ಮುಂದೆ ಕಾಣಿಸಿ ಮುಖ್ಯ ಗುರಿಗಳನ್ನು ಹಮ್ಮಿಕೊಳ್ಳಲಾಗಿತ್ತು.

1. ಆನೇಕಲ್ ತಾಲ್ಲೂಕಿನ ಒಟ್ಟು ಐದು ಪ್ರೌಢಶಾಲೆಗಳ 9ನೇ ತರಗತಿಯ ವಿದ್ಯಾರ್ಥಿಗಳು ಕನ್ನಡ ಕಲಿಕೆಯ ಸಾಧನೆಯಲ್ಲಿ ಹಿಂದುಳಿದಿರುವ ಕಾರಣಗಳನ್ನು ಗುರುತಿಸುವುದು.
2. ಕನ್ನಡ ಕಲಿಕೆಯಲ್ಲಿ ಹಿಂದುಳಿಕೆಯ ನಿರ್ಧಿಷ್ಟ ಕ್ಲಿಷ್ಟತೆಯನ್ನು ಪತ್ತೆ ಮಾಡುವುದು.
3. ಕಾರಣಗಳ ಆಧಾರದ ಮೇಲೆ ಅಭ್ಯಾಸ ವಿಧಾನದಿಂದ ಪರಿಹಾರವನ್ನು ಸೂಚಿಸುವುದು

ಆನೇಕಲ್ ತಾಲೂಕಿನಲ್ಲಿ 5 ಪ್ರೌಢಶಾಲೆಗಳಲ್ಲಿನ 9ನೆಯ ತರಗತಿಗಳಲ್ಲಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳನ್ನು ಸಂಶೋಧನೆಗೆ ಆರಿಸಿಕೊಳ್ಳಲಾಗಿತ್ತು. ಒಟ್ಟು 642 ವಿದ್ಯಾರ್ಥಿಗಳನ್ನು ಸಂಶೋಧನೆಗೆ ಆರಿಸಿಕೊಳ್ಳಲಾಗಿತ್ತು. ಪ್ರಸ್ತುತ ಸಂಶೋದನೆಗೆ ಈ ಕೆಳಕಂಡ ಸಾಧನಗಳನ್ನು ಉಪಯೋಗಿಸಲಾಗಿತ್ತು.

ಅ) ಚೆನ್ನಮ್ಮ ಸತ್ಯಾನಂದರಿಂದ ಪ್ರಮಾಣೀಕೃತವಾದ ಬುದ್ಧಿಶಕ್ತಿಮಾಪನ ಒರೆ

ಆ) ಸಾಧನೆಯ ಪರೀಕ್ಷೆಯ ಅಂಶಗಳು

ಇ) ನೈದಾನಿಕ ಪರೀಕ್ಷೆಯ ಒರೆಯನ್ನು ಹೋಲುವ ಕನ್ನಡ ಒರೆ (ಇದನ್ನು ಸಂಶೋಧಕರೇ ಸಿದ್ದಪಡಿಸಿರುತ್ತಾರೆ)

ಈ ಅಧ್ಯಯನದಿಂದ ಕೈಕೊಳ್ಳಲಾಗಿರುವ ತೀರ್ಮಾನಗಳು ಈ ಕೆಳಕಂಡಂತಿವೆ.

1. ಆನೇಕಲ್ ತಾಲೂಕಿನ 9ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಶೇ.5.45 ರಷ್ಟು ವಿದ್ಯಾರ್ಥಿಗಳು ಕನ್ನಡ ಕಲಿಕೆಯಲ್ಲಿ ಹಿಂದುಳಿದಿದ್ದಾರೆ.
2. ಕನ್ನಡ ಕಲಿಕೆಯ ಸಾಧನೆಯಲ್ಲಿ ಹಿಂದುಳಿದ ಕಾರಣಗಳು, ವಾಕ್ಯ ರಚನೆ, ಲೇಖನ ಚಿಹ್ನೆಗಳ ದೋಷದಿಂದಲೇ ಆಗಿವೆ.
3. ಇತರ ಪ್ರಮುಖ ಕಾರಣಗಳು ತತ್ಸಮ-ತದ್ಭವಗಳು, ದೇಶ್ಯ-ಅನ್ಯದೇಶ್ಯ ಪದಗಳು, ವಿಭಕ್ತಿ ಪ್ರತ್ಯಯಗಳು, ವರ್ಣಮಾಲೆ, ಸಂಯುಕ್ತಾಕ್ಷರಗಳು ಮುಖ್ಯವಾದವು.
4. ಅಭ್ಯಾಸ ಕ್ರಮವನ್ನು ಅನುಸರಿಸಿ ಪರಿಶ್ರಮ ಕೊಟ್ಟಾಗ ಕನ್ನಡ ಕಲಿಕೆಯ ಸಾಧನೆಯಲ್ಲಿ ಹಿಂದುಳಿದ ಮಕ್ಕಳು ಬಹಳಷ್ಟು ಉತ್ತಮಗೊಂಡರು.

ಶೀಲಾದೇವಿ.ಎಸ್.ಮಳೀಮಠ್ "ಭಾಷಾ ಪ್ರಧಾನ ಬೋಧನೋಪಕರಣಗಳನ್ನು ಕನ್ನಡ ಪಾಠಗಳಲ್ಲಿ ಬಳಸಿಕೊಂಡು 9ನೇ ತರಗತಿಯ ವಿದ್ಯಾರ್ಥಿನಿಯರಲ್ಲಿ ಸೃಜನಶೀಲ ಸಾಮರ್ಥ್ಯವನ್ನು ಬೆಳೆಸುವ ಅಧ್ಯಯನ" 1990 (ಮಾರ್ಗದರ್ಶಕರು: ಡಾ.ಭಾಸ್ಕರ್. ಎಸ್)

ಈ ಅಧ್ಯಯನದಲ್ಲಿ ಮುಂದೆ ಕಾಣಿಸಿದ ಮುಖ್ಯ ಗುರಿಗಳನ್ನು ಹಮ್ಮಿಕೊಳ್ಳಲಾಗಿತ್ತು

1. ಮಕ್ಕಳ ಸೃಜನಾತ್ಮಕ ಪ್ರತಿಭೆಯನ್ನು ಕಂಡುಹಿಡಿಯುವುದು
2. ಭಾಷಾ ಪ್ರಧಾನ ಬೋಧನೋಪಕರಣಗಳನ್ನು ಅಭಿವೃದ್ಧಿ ಪಡಿಸುವುದು.
3. ತಂತ್ರಗಳನ್ನು ಅಳವಡಿಸುವುದರ ಮೂಲಕ ಮಕ್ಕಳಲ್ಲಿರುವ ಸೃಜನಶೀಲತೆಯನ್ನು ಅಭಿವೃದ್ಧಿ ಪಡಿಸುವುದು.

ಅನ್ವರ್ ಪಾಣಿ (1989) ಅವರು "ಮರಾಠಿ ಭಾಷೆಯ ಕೌಶಲಗಳನ್ನು ಉತ್ತಮಪಡಿಸುವಿಕೆ" ಎಂಬ ತಮ್ಮ ಅಧ್ಯಯನದಲ್ಲಿ ಶೈಕ್ಷಣಿಕ ಕಾರ್ಯಕ್ರಮದ ಹಂತದಲ್ಲೂ ಮಕ್ಕಳಿಗೆ ತರಬೇತಿ ಕಾರ್ಯವನ್ನು ವಿವಿಧ ಮಾಧ್ಯಮಗಳ ಮೂಲಕ ನೀಡುತ್ತಿದ್ದಾರೆ. ಫಲಿತಾಂಶ ಪರಿಣಾಮಕಾರಿಯಾಗುತ್ತದೆ ಎಂದು ತೀರ್ಮಾನಿಸಿರುತ್ತಾರೆ.

ನಂಜುಂಡಯ್ಯ ಸಿ "ಬೆಂಗಳೂರು ಉತ್ತರ ವಲಯದ ಅನುದಾನರಹಿತ ಕೆಲವು ಆಂಗ್ಲ ಮಾಧ್ಯಮ ಪ್ರೌಢಶಾಲೆಗಲ್ಲಿ ಪ್ರಥಮ ಭಾಷೆ ಕನ್ನಡ ಬೋಧನೆಯಲ್ಲಿನ ಸಮಸ್ಯೆಗಳ ಕನ್ನಡ ಭಾಷಾ ಶಿಕ್ಷಕರ ಅಭಿಪ್ರಾಯ ಸಮೀಕ್ಷೆ" 1987 (ಮಾರ್ಗದರ್ಶಕರು: ಡಾ.ಸಿ.ಮಧುಕರ್)
ಈ ಅಧ್ಯಯನದಲ್ಲಿ ಮುಂದೆ ಕಾಣಿಸಿದ ಮುಖ್ಯ ಗುರಿಗಳನ್ನು ಹಮ್ಮಿಕೊಳ್ಳಲಾಗಿತ್ತು.

1. ಆಂಗ್ಲ ಮಾಧ್ಯಮ ಪ್ರೌಢಶಾಲೆಗಳಲ್ಲಿ ಪ್ರಥಮ ಭಾಷೆ ಕನ್ನಡ ಬೋಧನೆಯಲ್ಲಿನ ಶಿಕ್ಷಕರ ಸಮಸ್ಯೆಗಳನ್ನು ಗುರುತಿಸುವುದು
2. ಭಾಷೆಯ ಬೋಧನೆಗೆ ಪರಿಸರ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಗುರುತಿಸುವುದು.
3. ಈ ಬೋಧನಾ ತೊಡಕುಗಳನ್ನು ನಿವಾರಿಸಿಕೊಳ್ಳಲು ಸಹಾಯ ಮಾಡುವುದು.

ಬೆಂಗಳೂರು ಉತ್ತರ ವಲಯದ 20 ಶಾಲೆಗಳಲ್ಲಿ 20 ಶಿಕ್ಷಕರು ಪ್ರಶ್ನಾವಳಿಗಳನ್ನು ಸಂಶೋಧಕರೇ ತಯಾರು ಮಾಡಿದ್ದರು. 30 ಶಿಕ್ಷಕರನ್ನು ಸಂದರ್ಶನ ಮಾಡಿ ದತ್ತಾಂಶಗಳನ್ನು ಸಂಗ್ರಹಿಸಿದ್ದರೂ ಶೇಕಡಾ ಕ್ರಮವನ್ನು ಉಪಯೋಗಿಸಿ ದತ್ತಾಂಶಗಳನ್ನು ವಿಶ್ಲೇಷಿಸಿದ್ದಾರೆ.

ಈ ಅಧ್ಯಯನದ ಮುಖ್ಯ ತೀರ್ಮಾನಗಳು

1. ಪ್ರಸ್ತುತ ಕನ್ನಡ ಪಠ್ಯಪುಸ್ತಕವು ವಿಶೇಷತಃ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಮೇಲ್ಪಟ್ಟಿದ್ದಾಗಿದೆ.
2. ವಿಷಯದ ಹೊರೆ ಅಧಿಕವಾಗಿದೆ
3. ಪ್ರಸ್ತುತ ಪಠ್ಯ ಪುಸ್ತಕವನ್ನು ಬದಲಿಸಿ "ವ್ಯವಹಾರಿಕ ಕನ್ನಡ" ಮಾತೃಭಾಷೆ ಕನ್ನಡ ಎಂಬ ಎರಡು ದೃಷ್ಠಿಯಿಂದ ಪಠ್ಯ ರಚಿಸಬೇಕಾಗಿದೆ.
4. ಪಠ್ಯ ಪುಸ್ತಕವು ಸಕಾಲದಲ್ಲಿ ದೊರೆಯದೆ ಬೋಧನೆಗೆ ತೊಡಕಾಗಿದೆ
5. ಅಧ್ಯಾಪಕರು ಬೇರೆ ಬೇರೆ ಭಾಷಾ ಸಾಹಿತ್ಯಗಳಿಂದ ಪೂರಕವಾದ ದೃಷ್ಟಾಂತಗಳನ್ನು ಕೊಟ್ಟು ಉತ್ತಮವಾಗಿ ಬೋಧಿಸುತ್ತಾರೆ.

ಶಶಿಧರಪ್ಪ ಗೌಡ, "ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಲ್ಲಿ ಕನ್ನಡ ಸಾಧನೆ ಮತ್ತು ಕನ್ನಡದ ಬಗ್ಗೆ ಅಭಿಪ್ರಾಯ ಒಂದು ಅಧ್ಯಯನ"

1980 – (ಮಾರ್ಗದರ್ಶಕರು: ಡಾ.ಭಾಸ್ಕರ್. ಎಸ್)

ಈ ಅಧ್ಯಯನದಲ್ಲಿ ಮುಂದೆ ಕಾಣಿಸಿದ ಮುಖ್ಯಗುರಿಗಳನ್ನು ಹಮ್ಮಿಕೊಳ್ಳಲಾಗಿತ್ತು.

1. ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಲ್ಲಿ ಕನ್ನಡದಲ್ಲಿಯ ಸಾಧನೆ ಕಂಡುಹಿಡಿಯುವುದು
2. ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಇರುವ ಅಭಿಪ್ರಾಯಗಳನ್ನು ಕಂಡುಹಿಡಿಯುವುದು.
3. ಭಾಷಾ ಅಲ್ಪಸಂಖ್ಯಾತರ ಅಭಿಪ್ರಾಯದ ಮೇಲೆ ಮಾಧ್ಯಮವೇನಾದರೂ ಪ್ರಭಾವ ಬೀರಿದೆಯೇ ಎಂಬುದನ್ನು ಕಂಡುಹಿಡಿಯುವುದು.

ಸಂಶೋಧಕರು ಮೂರು ಭಾಷಾ ಅಲ್ಪಸಂಖ್ಯಾತರ ಶಾಲೆಗಳನ್ನು ಉದ್ದೇಶಾತ್ಮಕ ಮಾದರಿಯನ್ನಾಗಿ ಆಯ್ದುಕೊಂಡಿದ್ದರು. ಒಟ್ಟು 138 ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ಭಾಗವಹಿಸಿದ್ದರು. ಅವರುಗಳು ಕ್ರಿಶ್ಚಿಯನ್, ಮುಸ್ಲಿಂ ಹಾಗು ಪಂಜಾಬಿ ಶಾಲೆಗಳಿಗೆ ಸೇರಿದವರಾಗಿದ್ದರು. ಸಾಧನೆಯ ಪರೀಕ್ಷೆ ಹಾಗೂ

ಅಭಿಪ್ರಾಯ ಸಂಗ್ರಹಣೆಯ ಪ್ರಶ್ನಾವಳಿಗಳನ್ನು ಸಂಶೋಧಕರೇ ತಯಾರಿಸಿದ್ದು, ಪಠ್ಯ ಸಮಂಜಸತೆಯನ್ನು ಕಂಡುಹಿಡಿಯಲಾಯಿತು. ಕೇಂದ್ರೀಯ ಪ್ರವೃತ್ತಿ ಮಾನಗಳಾದ ಸರಾಸರಿ, ಮಧ್ಯಾಂಕ ಹಾಗೂ ಶೇಕಡಾವಾರು ಕ್ರಮದಿಂದ ದತ್ತಾಂಶಗಳ ವಿಶ್ಲೇಷಣೆ ಮಾಡಲಾಯಿತು. ಸಹಸಂಬಂಧ ಗುಣಾಂಕವನ್ನು ಸಹ ಕಂಡುಹಿಡಿಯಲಾಯಿತು.

ಈ ಅಧ್ಯಯನದ ತೀರ್ಮಾನಗಳು

1. ಭಾಷಾ ಅಲ್ಪಸಂಖ್ಯಾತರ ಶಾಲೆಯ 8ನೇ ತರಗತಿಯ ಮಕ್ಕಳ ಸಾಧನ ಮಟ್ಟ ಉತ್ತಮವಾಗಿದೆ
2. ಈ ಮೂರು ಬಗೆಯ ಶಾಲೆಗಳಲ್ಲಿ ಕ್ರಿಶ್ಚಿಯನ್ ಶಾಲೆಯ ಮಕ್ಕಳ ಕನ್ನಡದ ಸಾಧನಾ ಮಟ್ಟ ಅತ್ಯುತ್ತಮವಾಗಿದೆ.
3. ವಿದ್ಯಾರ್ಥಿಗಳು ವಿದ್ಯಾರ್ಥಿನಿಯರಿಗಿಂತ ಕನ್ನಡದ ಸಾಧನೆಯಲ್ಲಿ ಮುಂದಿದ್ದಾರೆ.
4. ಅಭಿಪ್ರಾಯಗಳನ್ನು ಸಾಧನೆಯೊಂದಿಗೆ ಹೋಲಿಸಿದಾಗ ಗಳಿಕೆಯ ಮಟ್ಟ ಉತ್ತಮವಾಗಿದೆಯೆಂದು ಕಂಡುಬರುತ್ತದೆ.
5. ಭಾಷಾ ಅಲ್ಪಸಂಖ್ಯಾತರ ಶಾಲೆಯ ಮಕ್ಕಳ ಕನ್ನಡದ ಸಾಧನೆಗೂ ಅವರ ಅಭಿಪ್ರಾಯಕ್ಕೂ ಹೆಚ್ಚು ಸಂಬಂಧವಿಲ್ಲ. ಸಹಸಂಬಂಧಾತ್ಮಕ ಕಡಿಮೆಯಾದರೂ, ಧನಾತ್ಮಕ ದಿಕ್ಕಿನಲ್ಲಿದೆ.

ಬಿಡ್ (1980) ಅವರು "ಹಿಂದಿ ಭಾಷೆಯ ಬರವಣಿಗೆಯ ದೋಷಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ನೀಡುವುದು" ಕುರಿತು ಮಾಡಿದ ಅಧ್ಯಯನದಲ್ಲಿ ಮಕ್ಕಳ ತಪ್ಪುಗಳಿಗೆ ಶಿಕ್ಷಕರೇ ಕಾರಣ. ಬಹುತೇಕ ವಿದ್ಯಾರ್ಥಿಗಳು ಆಸಕ್ತಿವಹಿಸಿ ಕಲಿತಾಗ ದೋಷಗಳು ಕಡಿಮೆ ಆಗುತ್ತವೆ. ಎಂದು ತೀರ್ಮಾನಿಸಿರುತ್ತಾರೆ.

ಅಹಮದ್ ನಗರದ ಎ.ಇ ಶೈಕ್ಷಣಿಕ ಸಂಸ್ಥೆ (1978) ಅವರ ಅಧ್ಯಯನದ ಪ್ರಮುಖ ಉದ್ದೇಶ "ಇಂಗ್ಲೀಷ್ ಬರವಣಿಗೆಯಲ್ಲಿ ವಿಶೇಷವಾಗಿ ಮಾಡುವ ತಪ್ಪುಗಳನ್ನು ಗುರುತಿಸಿ, ಕಾರಣಗಳನ್ನು ಪತ್ತೆ ಹಚ್ಚಿ ಅದಕ್ಕೆ ಸೂಕ್ತ ಪರಿಹಾರ ಕ್ರಮಗಳನ್ನು ಸೂಚಿಸುವುದಾಗಿದೆ. ಉಚ್ಚಾರಣೆ, ಕಾಗುಣಿತ, ಸಮುಚ್ಚಯ, ಕಾಲಮಾನ, ಅಕ್ಷರಗಳ ಸ್ಥಾನಪಲ್ಲಟ ಹಾಗೂ ಕ್ರಿಯಾಪದಗಳಲ್ಲಿ ದೋಷಗಳನ್ನು ಪತ್ತೆಹಚ್ಚಿ ಶಿಕ್ಷಕರೊಂದಿಗೆ ಚರ್ಚಿಸಿ, ಪರಿಹಾರ ನೀಡಿದಲ್ಲಿ ಕ್ರಮೇಣ ಮುಂದಿನ ತರಗತಿಗಳಿಗೆ ಹೋದಂತೆ ದೋಷಗಳ ಸಂಖ್ಯೆ ಕಡಿಮೆ ಆಗುತ್ತಾ ಹೋಗುತ್ತದೆ ಎಂಬ ಅಂಶಗಳು ಸಂಶೋಧನೆಯಿಂದ ಕಂಡುಬಂದಿದೆ.

ಸುಬ್ರಮಣ್ಯಂ. ಎಂ (1974) ಅವರು ಮಾಧ್ಯಮಿಕ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ತೆಲುಗು ಮಾಧ್ಯಮದ ವಿದ್ಯಾರ್ಥಿಗಳ ಬರವಣಿಗೆ ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಕೈಗೊಂಡ ಅಧ್ಯಯನದಲ್ಲಿ ಆಯಾಯ ನಿರ್ದಿಷ್ಟ ತರಗತಿಗಳಿಗೆ ಅನುಗುಣವಾಗಿ ಪಠ್ಯ ಪುಸ್ತಕಗಳಲ್ಲಿ ವ್ಯಾಕರಣಾಂಶಗಳನ್ನು ಹಂತ

ಹಂತವಾಗಿ ಅಳವಡಿಸಲು ಈ ಸಂಶೋಧನಾ ಅಧ್ಯಯನ ಸಹಕಾರಿಯಾಗಿದೆ ಎಂದು ಸಂಶೋಧನೆಯಿಂದ ಕಂಡುಬಂದಿದೆ.

ಮುಜಾವರ (1980) ಅವರು "ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಅಭ್ಯಸಿಸುತ್ತಿರುವ ಮಕ್ಕಳಲ್ಲಿನ ಕನ್ನಡ ವಿಷಯದಲ್ಲಿ ಕಡಿಮೆ ಸಾಧನೆಗೆ ಕಾರಣಗಳು" ಒಂದು ಅಧ್ಯಯನದಲ್ಲಿ ಈ ಕೆಳಗಿನ ಅಂಶಗಳನ್ನು ತಿಳಿಸಿದ್ದಾರೆ.

ಈ ಅಧ್ಯಯನದ ಉದ್ಧೇಶಗಳು

1. ಕನ್ನಡದಲ್ಲಿ ಕಡಿಮೆ ಸಾಧನೆಗಳು, ಕಠಿಣತೆಯ ಸ್ವರೂಪವನ್ನು ಕಂಡು ಹಿಡಿಯುವುದು.
2. ಕನ್ನಡ ಅಭ್ಯಸಿಸುವಾಗ ಗಂಡು ಮತ್ತು ಹೆಣ್ಣು ಮಕ್ಕಳು ಎದುರಿಸುವ ಕಾರಣ ಮತ್ತು ಸಮಸ್ಯೆಗಳು ಯಾವುವು ಎಂದು ತಿಳಿಯುವುದು.
3. ಕನ್ನಡ ಅಭ್ಯಸಿಸುವಾಗ ಗಂಡು ಮತ್ತು ಹೆಣ್ಣು ಮಕ್ಕಳು ಎದುರಿಸುವ ಕಾರಣ ಮತ್ತು ಸಮಸ್ಯೆಗಳ ವ್ಯತ್ಯಾಸವನ್ನು ಕಂಡುಹಿಡಿಯುವುದು.

ಈ ಅಧ್ಯಯನದ ತೀರ್ಮಾನಗಳು/ಫಲಿತಾಂಶಗಳು

1. ಎಲ್ಲಾ ವಿದ್ಯಾರ್ಥಿಗಳು ಕನ್ನಡ ಪುಸ್ತಕಗಳನ್ನು ಓದುವಲ್ಲಿ ಆಸಕ್ತಿವಹಿಸಿದ್ದಾರೆ.
2. ಸುಮಾರು ಪ್ರತಿಶತ 99% ರಷ್ಟು ವಿದ್ಯಾರ್ಥಿಗಳು ಗ್ರಂಥಾಲಯ ಸೌಲಭ್ಯಗಳನ್ನು ಹೊಂದಿದ್ದರು. ಗ್ರಂಥಾಲಯವು ವಿವಿಧ ತರಹದ ಗ್ರಂಥಗಳಿಂದ ಕೂಡಿದ್ದು ವಿದ್ಯಾರ್ಥಿಗಳು ತಮಗೆ ಬೇಕಾದ ಗ್ರಂಥವನ್ನು ಆಯ್ಕೆಮಾಡಿ ಓದಲು ಅವಕಾಶವಿದ್ದಿತು.
3. ಸುಮಾರು ಪ್ರತಿಶತ 91% ರಷ್ಟು ವಿದ್ಯಾರ್ಥಿಗಳು ತಮಗೆ ಹಂಚಿದ ಪುಸ್ತಕಗಳನ್ನು ಮೆಚ್ಚಿದ್ದರು. ಈ ಪುಸ್ತಕವು ಒಳ್ಳೆಯ ವಿಷಯಾನುಕ್ರಮಗಳಿಂದ ಆಯ್ಕೆಯಾಗಿತ್ತು.
4. ಸುಮಾರು ಪ್ರತಿಶತ 7.2% ರಷ್ಟು ವಿದ್ಯಾರ್ಥಿಗಳು ಮತ್ತು ಸಮಾರು ಪ್ರತಿಶತ 70% ವಿದ್ಯಾರ್ಥಿನಿಯರು ಕನ್ನಡ ಚರ್ಚೆಯಲ್ಲಿ ಮತ್ತು ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.
5. ಸುಮಾರು ಪ್ರತಿಶತ 28% ರಷ್ಟು ವಿದ್ಯಾರ್ಥಿಗಳು ಮತ್ತು ಸುಮಾರು ಪ್ರತಿಶತ 28% ರಷ್ಟು ವಿದ್ಯಾರ್ಥಿನಿಯರು ಅರೇ ಮನಸ್ಸಿನಿಂದ ಭಾಗವಹಿಸುತ್ತದ್ದರು.
6. ಸುಮಾರು ಪ್ರತಿಶತ 80% ರಷ್ಟು ವಿದ್ಯಾರ್ಥಿಳು ಈ ವಿಷಯವನ್ನು ಇಚ್ಛಿಸುತ್ತಿದ್ದರೂ ಕೇವಲ ಸುಮಾರು ಪ್ರತಿಶತ 20% ರಷ್ಟು ವಿದ್ಯಾರ್ಥಿಗಳು ಉಳಿದ ವಿಷಯಗಳಂತೆ ಇದನ್ನು ಹೆಚ್ಚು ಇಚ್ಛಿಸುತ್ತದ್ದಿಲ್ಲ.
7. ಸುಮಾರು ಪ್ರತಿಶತ 25% ರಷ್ಟು ವಿದ್ಯಾರ್ಥಿಗಳು ಮತ್ತು ಸುಮಾರು ಪ್ರತಿಶತ 22% ರಷ್ಟು ವಿದ್ಯಾರ್ಥಿನಿಯರು ತೊಂದರೆ ಎದುರಿಸುತ್ತಿದ್ದರು.

8. ಸುಮಾರು ಪ್ರತಿಶತ 26% ರಷ್ಟು ವಿದ್ಯಾರ್ಥಿಗಳು ಮತ್ತು ಸುಮಾರು ಪ್ರತಿಶತ 22 % ವಿದ್ಯಾರ್ಥಿನಿಯರ ಬರವಣಿಗೆ ಸಮಯೋಜನೆಯಲ್ಲಿ ತಮ್ಮ ಸಮಸ್ಯೆಗಳನ್ನು ತೋರಿಸಿದ್ದಾರೆ.
9. ಬಹಳಷ್ಟು ವಿದ್ಯಾರ್ಥಿಗಳು ವರ್ಗಕೋಣೆಯ ಬೋಧನೆಯನ್ನು ತಿಳಿದುಕೊಳ್ಳುವಲ್ಲಿ ಅಸಮರ್ಥರಾಗಿದ್ದರು.



ಅಧ್ಯಾಯ–3

ಸಂಶೋಧನಾ ವಿಧಾನ (ವಿನ್ಯಾಸ)

ಅಧ್ಯಾಯ – 3

ಸಂಶೋಧನಾ ವೈಧಾನಿಕತೆ (ವಿನ್ಯಾಸ)

3.1 ಪೀಠಿಕೆ

ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನೆಯ ಅರ್ಥ ವ್ಯಾಖ್ಯೆಗಳು, ಸಂಶೋಧನೆಯ ವಿಧಾನಗಳು, ಪ್ರಶ್ನಾವಳಿಯ ಅರ್ಥ, ವ್ಯಾಖ್ಯೆ, ವಿಧಗಳು, ಗುಣಲಕ್ಷಣಗಳು, ಪ್ರಸ್ತುತ ಸಂಶೋಧನೆಗೆ ಪ್ರಶ್ನಾವಳಿ ಸಿದ್ಧಪಡಿಸಿದ ವಿನ್ಯಾಸ, ಸಮಸ್ಯೆಗಳ ವಿವರಣೆ, ಪ್ರಸ್ತುತ ಸಂಶೋಧನೆಯಲ್ಲಿ ನಮೂನೆಗಳ ಆಯ್ಕೆಯ ವಿನ್ಯಾಸಗಳ ಬಗ್ಗೆ ವಿವರಣೆ ನೀಡಲಾಗಿದೆ.

3.2 ಸಂಶೋಧನೆಯ ಅರ್ಥ ಮತ್ತು ವ್ಯಾಖ್ಯೆಗಳು

'ಸಂಶೋಧನೆ' ಎಂದರೆ ಬರೀ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೂಡಿ ಹಾಕುವುದು ಮಾತ್ರವಲ್ಲ ಅದು ಅಭಿಪ್ರಾಯಗಳ ಸಂಕಲನವೂ ಅಲ್ಲ, ದೊರಕಿಸಿದ ಮಾಹಿತಿಗಳನ್ನು ಅರ್ಥೈಸಿಕೊಂಡು ಪರಸ್ಪರ ಸಂಬಂಧಗಳನ್ನು ಹುಡುಕಿ ಸಮರ್ಥವಾಗಿ, ನಿಷ್ಪಕ್ಷಪಾತದ ಆಧಾರದಿಂದ ತಾರ್ಕಿಕವಾದ ವಿಶ್ಲೇಷಣೆ ಮಾಡಿ ದಾಖಲಿಸುವುದನ್ನು ಸಂಶೋದನೆ ಎಂದು ಹೇಳಬಹುದು.

ಸಂಶೋಧನೆಯು ಇಂಗ್ಲೀಷ್‌ನ 2 ವಿಧಗಳಿಂದ ಕೂಡಿದೆ. Re + Search = Research. 'Re' ಎಂದರೆ 'ಹಾಗೆಯೇ' 'Search' ಎಂದರೆ 'ಕೆಲವೊಂದನ್ನು ಹುಡುಕು' ಅಂದರೆ ಸಮಸ್ಯೆಗಳನ್ನು ಅಭ್ಯಾಸ ಮಾಡಲು ವೈಜ್ಞಾನಕ ಪದ್ಧತಿಯನ್ನು ಅನುಸರಿಸುವುದೇ 'ಸಂಶೋಧನೆ'.

'ಸಂಶೋಧನೆ' ಎಂದರೆ 'ಶುದ್ಧ ಗೊಳಿಸು,' 'ತಿದ್ದು' ಎಂದರ್ಥ; ಪರ್ಯಾಯವಾಗಿ ಇದಕ್ಕೆ 'ಹುಡುಕು' ಎಂಬ ಅರ್ಥವನ್ನು ಕೊಡುತ್ತದೆ. 'ಸಂಶೋಧನೆ' ಎನ್ನುವುದು 'ಗಣಿಯಿಂದ ಚಿನ್ನವನ್ನು ತೆಗೆದಂತೆ'. "ಜನಪ್ರಿಯವಾಗಿರುವ ನಂಬಿಕೆ, ಕಲ್ಪನೆ, ಸುದ್ದಿಗಳಣ್ನು ತಲಸ್ಪರ್ಶಿಯಾಗಿ ಶೋಧಿಸಿ ಆಧಾರ ಸಹಿತವಾಗಿ ಸಮರ್ಥಿಸುವ ಅಥವಾ ನಿರಾಕರಿಸುವ ಪ್ರಕ್ರಿಯೆಯನ್ನು ಸಂಶೋಧನೆ" ಎನ್ನಬಹುದು.

'ಸಂಶೋಧನೆ'ಯು ಹುಡುಕುವಿಕೆಯನ್ನು ಸೂಚಿಸುತ್ತದೆ. ಅಂದರೆ ಸತ್ಯವನ್ನು ಪ್ರಕಟಿಸುವುದೇ 'ಸಂಶೋಧನೆ'. ಇದರ ಉದ್ದೇಶ ಸತ್ಯವನ್ನು ಕಂಡು ಹಿಡಿಯುವುದು. ಇದು ಜ್ಞಾನದ ದಿಗಂತವನ್ನು ವಿಸ್ತರಿಸುವ ಕಾರ್ಯ. ಆದ್ದರಿಂದ ಸಂಶೋಧನೆ ಎನ್ನುವುದು ಸತ್ಯವನ್ನು ಕಾಣಬೇಕೆಂಬ ಉತ್ತಟ ಅಪೇಕ್ಷೆಯುಳ್ಳ ವ್ಯಕ್ತಿಯೊಬ್ಬನ ಒಂದು ಪ್ರಾಮಾಣಿಕ ಪ್ರಯತ್ನ. ಇಂತರ ಪ್ರಯತ್ನವನ್ನು ಕೈಗೊಳ್ಳುವವನು ಸಂಶೋಧಕ.

3.3. ವ್ಯಾಖ್ಯೆಗಳು

ಆಯ್ ವ್ಹಿ ರೆಡ್‌ಮ್ಯಾನ್ ಮತ್ತು ಎ.ವ್ಹಿ.ಎಚ್.ಮೊರೆ ಯವರ ಪ್ರಕಾರ "ಹೊಸ ಜ್ಞಾನವನ್ನು ಪಡೆಯುವ ಸಲುವಾಗಿ ವ್ಯವಸ್ಥಿವಾದ ಪ್ರಯತ್ನವೇ ಸಂಶೋಧನೆ".

ವಿ.ಎಂ.ಟ್ರಾವಲ್ಸ್ ರವರ ಪ್ರಕಾರ "ಸಂಶೋಧನೆಯು ಕೆಲವು ಸನ್ನಿವೇಶಗಳಲ್ಲಿ ವರ್ತನೆಯ ಚಿಂತನೆಯ ವಿಕಾಸದೆಡೆಗೆ ನಿರ್ದೇಶಿತವಾದ ಚಟುವಟಿಕೆಯಾಗಿದೆ. ಇಂಥಹ ವಿಜ್ಞಾನದ ಅಂತಿಮ ಗುರಿಯು ತಜ್ಞರು ಹೆಚ್ಚು ಪರಿಣಾಮಕಾರಿ ವಿಧಾನಗಳ ಮೂಲಕ ಅವರ ಗುರಿಗಳನ್ನು ಸಾಧಿಸುವ ಅವಕಾಶ ನೀಡುವ ಜ್ಞಾನವನ್ನು ಒದಗಿಸುವುದಾಗಿದೆ".

ಪ್ರಾನ್ಸಿಸ್ ಜಿ ಕರ್ನಲ್ ರವರ ಪ್ರಕಾರ "ಉತ್ತಮವಾದ ಸಂಶೋಧನೆಯು ವಿಶ್ವಾಸಾರ್ಹತೆ, ಸಂಪೂರ್ಣತೆಯಿಂದ ಕೂಡಿದ್ದಾಗಿಯೂ ಹಾಗೂ ಪ್ರಾಮಾಣೀಕರಿಸಿ ನೋಡುವಂತದ್ದಾಗಿದೆ. ಆದ್ದರಿಂದ ಸಂಶೋಧನೆಯಿಂದ ನಂಬಿಕೆಗೆ ಅರ್ಹವಾದ ಮಾಹಿತಿಯನ್ನು ನಾವು ಪಡೆಯಬಹುದಾಗಿದೆ.

ಎಫ್.ಎಲ್. ವೈಟಿಸೀ ಯವರ ಪ್ರಕಾರ " ಸಂಶೋಧನೆಯು ವಿಮರ್ಶಾತ್ಮಕ, ಪ್ರತಿಫಲನ ಚಿಂತನೆಯ ವಿಧಾನವಾದ ವೈಜ್ಞಾನಿಕ ಮತ್ತು ತತ್ವಶಾಸ್ತ್ರೀಯ ವಿಧಾನಗಳನ್ನು ಬಳಸುವುದರ ಮೂಲಕ ಹಲವು ಕ್ಷೇತ್ರಗಳಲ್ಲಿ ಸಮಸ್ಯೆಗಳ ಪರಿಹಾರದೆಡೆಗೆ ಕೊಡುಗೆ ನೀಡುವ ಗುರಿಗಳನ್ನು ಹೊಂದಿದೆ" ಎಂದಿದ್ದಾರೆ.

ವಿ.ಎಂ.ಕುಕ್ ರವರ ಪ್ರಕಾರ "ಸಂಶೋಧನೆಯು ಘಟನೆಗಳು ಮತ್ತು ಅವುಗಳ ಅರ್ಥವನ್ನು ಸತ್ಯಾಂಶ ಸಂಪೂರ್ಣತೆ ಮತ್ತು ಜಾಣ್ಮೆಯಿಂದ ಹುಡುಕುವುದಾಗಿದೆ ಅಥವಾ ಕೊಟ್ಟಿರುವ ಉಲ್ಲೇಖಾರ್ಹ ಸಮಸ್ಯೆಗಳನ್ನು ಜಾರಿ ಮಾಡುವುದಾಗಿದೆ".

ಪಾಲ್‌ವಾನ್ ಲಜ್ಸ್, ಪೆಲ್ಪ್ ಮತ್ತು ಸಿಚಲ್ ರವರ ಪ್ರಕಾರ "ಸಂಶೋಧನೆ ಎಂಬ ಇಲ್ಲಿ ಅನೇಕ ವಿಧಾನಗಳನ್ನು ಮತ್ತು ಸಾಧನೆಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಮಾಡುವ ಒಟ್ಟಾರೆ ಪ್ರಯತ್ನಗಳಾಗಿವೆ.

3.4 ಸಂಶೋಧನಾ ವಿಧಿ–ವಿಧಾನಗಳು

ಸಂಶೋಧನೆ/ಅಧ್ಯಯನ ಎಂದರೇನು? ಅದರ ವಿವಿಧ ವ್ಯಾಖ್ಯಾನಗಳು

(ಸಂಶೋಧನೆ ಎಂದರೆ 'ಸಮ್ಯಕ್ ಶೋಧನೆ' ಎಂದಾಗುತ್ತದೆ. 'ಕ್ರಮಬದ್ಧವಾಗಿ ಶೋಧಿಸು' ಎಂದು ಇದರ ಅರ್ಥ.

ಇಂಗ್ಲೀಷ್‌ನಲ್ಲಿ ಇದಕ್ಕೆ "RESERCH" ಎಂಬ ಪರ್ಯಾರ ಪದ ಬಳಕೆಯಲ್ಲಿದೆ. 'Re' ಎಂದರೆ 'ಚೆನ್ನಾಗಿ', 'ಸರಿಯಾಗಿ' ಎಂಬ ಅರ್ಥ, 'Search' ಎಂದರೆ 'ಹುಡುಕು' ಎಂಬ ಅರ್ಥವಿದೆ. ಆದುದರಿಂದ "RESERCH" ಎಂಬುದು 'ಚನ್ನಾಗಿ ಹುಡುಕು'; 'ಸರಿಯಾಗಿ ಹುಡುಕು' ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. ಇದಕ್ಕೆ ನಾವು ಬಳುಸುತ್ತಲಿರುವ ಪರ್ಯಾಯ ಪದ 'ಸಂಶೋಧನೆ'.

ಸಂಶೋಧನೆ ಎಂಬುದು ಸಂಸ್ಕೃತದ ಮೂಲ 'ಶುಧ್' ಎಂಬ ಧಾತುವಿನಿಂದ ಬಂದಿದೆ. ಶುಧ್ ಎಂದರೆ 'ಶುದ್ಧ ಮಾಡು'.

ಇದರಿಂದ 'ಶೋಧ', 'ಶೋಧನ' ಎಂಬ ರೂಪಗಳು ಸಿದ್ಧವಾಗುತ್ತವೆ. ಶೋಧನೆ ಎಂಬುದಕ್ಕೆ 'ಸಂ' ಎಂಬ ಪೂರ್ವ ಪ್ರತ್ಯಯ ಸೇರಿ ಸಂಶೋಧನೆ ಎಂಬ ಪದ ಸಿದ್ಧವಾಗಿ ಕನ್ನಡದಲ್ಲಿ ಸಮಸಂಸ್ಕೃತವಾಗಿ 'ಸಂಶೋಧನ' ಎಂಬ ಪದ ಬಳಕೆಯಾಗುತ್ತಿದೆ.

ಶುಧ್	= ಶುದ್ಧ ಮಾಡು
ಶೋಧ	= ಶುದ್ಧ ಮಾಡಿದುದು
ಶೋಧನ	= ಶುದ್ಧ ಮಾಡುವುದು
ಸಂಶೋಧನ	= ಚೆನ್ನಾಗಿ ಶುದ್ಧ ಮಾಡುವುದು, ಸರಿಯಾಗಿ ಶುದ್ಧ ಮಾಡುವುದು.
ಸಂಶೋಧನೆ	= ಸಂಶೋಧನ ಎಂಬುದರ ಸಮ ಸಂಸ್ಕೃತ ರೂಪ.

'ಸಂಶೋಧನೆ' ಎಂದರೆ "ಸತ್ಯದ ಬಗೆಗೆ ಹೊಸದಾಗಿ ಹುಡುಕುವಿಕೆ" ಎನ್ನಬಹುದು.
ಸಂಶೋಧನೆಗೆ ತಮಿಳಿನಲ್ಲಿ "ಅರಾಯ್ಚಿ' ಎನ್ನುತ್ತಾರೆ. ಇದನ್ನು ಹಳಗನ್ನಡದ "ಆರಯ್ದು" ಎಂಬ ಪದದೊಂದಿಗೆ ಹೋಲಿಸಬಹುದು. ಮಲೆಯಾಳಂನಲ್ಲಿ "ಗವೇಷಣ" ಎಂಬ ಪದವಿದೆ. ಒಟ್ಟಿನಲ್ಲಿ ಇವೆಲ್ಲವುದರ ಅರ್ಥವೂ 'ಹುಡುಕುವಿಕೆ' ಎಂದೇ ಆಗಿದೆ.

ವಿಲಸ್ಸ್ ಮತ್ತು ಭಂಡಾರ್ಕರ್ ಅವರು ತಮ್ಮ 'Methodology and Techniques of Social Research' ಎಂಬ ಗ್ರಂಥದ ಮುನ್ನುಡಿಯಲ್ಲಿ "There is no alternative to truth and therefore Research. The Research is to ge nearer to the truth to understand reality" ಹೇಳಿದ್ದಾರೆ.

ಈ ಮೇಲಿನ ಹೇಳಿಕೆ ಸಂಶೋಧನೆಯ ಬಗೆಗೆ ಕೊಡುವ ಸಮರ್ಪಕವಾದ ಹೇಳಿಕೆ ಎಂದು ಹೇಳಬಹುದು.
ಸತ್ಯಕ್ಕೆ ಅಥವಾ ವಸ್ತುಸ್ಥಿತಿಗೆ ಪರ್ಯಾಯವಾದುದು ಯಾವುದೂ ಇಲ್ಲ. ಸಂಶೋಧನೆ ಎಂದರೆ "ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಅನುಸರಿಸುವ ಪ್ರಾಮಾಣಿಕ ಪ್ರಯತ್ನ ಎಂದರೂ ಸರಿಯೇ. ನಿಜಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಾಮಾಣಿಕತೆ, ಸತ್ಯನಿಷ್ಠೆ, ಕ್ರಮಬದ್ಧತೆ ಇರಬೇಕು. ಒದಗಿಸುವ ಆಧಾರಗಳು ಸರಿಯಾದುದಾಗಿರಬೇಕು. ತರ್ಕಬದ್ಧ ವಿಚಾರ ಸರಣಿಯಿಂದ ಮಾಡಿಸಿರಬೇಕು, ಹಾಗಿದ್ದಲ್ಲಿ ಅದು ನಿಜವಾದ ಸಂಶೋಧನೆ ಎನ್ನಿಸಿಕೊಳ್ಳುತ್ತದೆ, ಉತ್ಕೃಷ್ಟವಾದುದೆನಿಸುತ್ತದೆ.

ಒಟ್ಟಾರೆ ಸಂಶೋಧನೆಯು ಹುಡುಕುವಿಕೆಯನ್ನು ಸೂಚಿಸುತ್ತದೆ. ಅನೇಕ ಸಂಗತಿಗಳು ಗೊತ್ತಿರುವುದಿಲ್ಲ ಅಥವಾ ಅವುಗಳು ಗೊತ್ತಿದ್ದರೂ ಅಲ್ಲಿ ಕೆಲವು ಸಮಸ್ಯೆಗಳು ಉಳಿದು ಕೊಂಡಿರುತ್ತವೆ.

ಇನ್ನೂ ಕೆಲವು ಸಂಗತಿಗಳು ಇರುವುದು ಮಾತ್ರ ಗೊತ್ತು. ಆದರೆ ಅವುಗಳ ಸ್ವರೂಪ ಮಾತ್ರ ಸ್ಪಷ್ಟವಾಗಿರುವುದಿಲ್ಲ.

ವಾಸ್ತವಾಗಿ ಇರುವ, ಆದರೆ ನಮಗೆ ಗೊತ್ತಿಲ್ಲದ ಸಂಗತಿಗಳನ್ನು ಹುಡುಕಿ ಪ್ರಕಟಿಸುವುದೇ ಸಂಶೋಧನೆಯ ಉದ್ದೇಶ. ಅಂದರೆ ಸತ್ಯವನ್ನು ಪ್ರಕಟಿಸುವುದು ಸಂಶೋಧನ ಕೆಲಸ. ಅಲ್ಲಿ ಸಂಶೋಧನಕ ವೈಯಕ್ತಿಕವಾದ ಅನಿಸಿಕೆಗಳಾಗಲೀ, ಕಲ್ಪನೆಗಳಾಗಲೀ ಬೆಲೆ ಇಲ್ಲ. ಅವನು ವಾಸ್ತವ ಸಂಗತಿಯೊಂದರ ಇರುವಿಕೆಯನ್ನು ಆಧಾರಗಳಿಂದ ಊಹಿಸಬಹುದೇ ಹೊರತು, ಅದನ್ನು ಕಲ್ಪಿಸುವಂತಿಲ್ಲ. ಇಲ್ಲಿ ಸಾಹಿತ್ಯಕ್ಕೂ – ಸಂಶೋಧನೆಗೂ ಇರುವ ವ್ಯತ್ಯಾಸ ಎದ್ದು ಕಾಣುತ್ತದೆ.

ಕವಿ ತನ್ನ ಕಲ್ಪನೆಯಲ್ಲಿ ತನ್ನದೇ ಆದ ಒಂದು ಸಂಗತಿಯನ್ನು ಕಟ್ಟಿ ಚಿತ್ರಿಸಬಹುದು. ಆದರೆ ಸಂಶೋಧಕ ತನ್ನಿಂದ ಸಂಪೂರ್ಣವಾಗಿ ಬೇರೆಯಾದ ಸಂಗತಿಯನ್ನು ಕಂಡು ಹಿಡಿದು ಅದನ್ನು ಮಾತ್ರ ಹೇಳಬೇಕು.

ವಾಸ್ತವ ಸಂಗತಿ ಎಂದರೆ ಅವರ ಮೂಲಕ ಪ್ರಕಾಶಕ್ಕೆ ಬರುತ್ತದೆ. ಆದ್ದರಿಂದ ಅವನದು ಸಂಪೂರ್ಣವಾಗಿ ವಸ್ತು ನಿಷ್ಠವಾದ ದೃಷ್ಟಿ.

ಸಂಶೋಧನೆಯ ಉದ್ದೇಶ ಸತ್ಯವನ್ನು ಕಂಡು ಹಿಡಿಯುವುದು ಎಂದು ಹಿಂದೆ ಹೇಳಿದೆ. ಆದರೆ ಅದಕ್ಕಿಂತ ಹೀಗೆ ಹೇಳುವುದು ಸೂಕ್ತ. "ಸಂಶೋಧನೆ ಎನ್ನುವುದು ಸತ್ಯವನ್ನು ಕಾಣಲು ಮಾಡುವ ಒಂದು ಪ್ರಾಮಾಣಿಕ ಪ್ರಯತ್ನ" ಏಕೆಂದರೆ ಒಬ್ಬ ಸಂಶೋಧಕ ಬಹಳ ಕಷ್ಟಪಟ್ಟು ಅನೇಕ ಆಧಾರಗಳನ್ನು ಹುಡುಕಿ ತೆಗೆಯುತ್ತಾನೆ.

3.5 ಸಂಶೋಧನೆಯ ಹಂತಗಳು

1) ಸಮಸ್ಯೆಯನ್ನು ಆಯ್ಕೆ ಮಾಡಿಕೊಳ್ಳುವುದು.
2) ಸಮಸ್ಯೆಯನ್ನು ಸರಿಯಾಗಿ ನಿರೂಪಿಸಿಕೊಳ್ಳುವುದು.
3) ಪೂರ್ವ ಸಿದ್ಧಾಂತದ ರಚನೆ
4) ದತ್ತಾಂಶದ ಸಂಗ್ರಹ
5) ದತ್ತಾಂಶದ ವಿಶ್ಲೇಷಣೆ ಹಾಗೂ ನಿರೂಪಣೆ
6) ಫಲಿತಾಂಶವನ್ನು ವರದಿ ಮಾಡುವುದು

3.6 ಸಂಶೋಧನೆಯ ವಿಧಗಳು ಅಥವಾ ವಿಧಾನಗಳು:

ಸಂಶೋಧನೆಯ ಬರವಣಿಗೆ ಯಾವ ಮಾದರಿಯನ್ನು ಉಪಯೋಗಿಸಿಕೊಂಡು ವಿವರಿಸಲ್ಪಡುತ್ತದೆ ಎಂಬುದರ ಮೇಲೆ ಸಂಶೋಧನೆಯ ವಿಧಗಳನ್ನು ವಿಂಗಡಿಸಬಹುದು.

1) ತಾತ್ವಿಕ ಸಂಶೋಧನೆ

2) ಅನ್ವಯಿಕ ಸಂಶೋಧನೆ

ಅ) ವಿವರಣಾತ್ಮಕ ಸಂಶೋಧನೆ

ಆ) ತೌಲಿನಿಕ ಸಂಶೋಧನೆ

ಇ) ಚಾರಿತ್ರಿಕ ಅಥವಾ ಐತಿಹಾಸಿಕ ಸಂಶೋಧನೆ

ಈ) ಸರ್ವೇಕ್ಷಣಾ ಸಂಶೋಧನೆ

ಉ) ಬಹುಶಿಸ್ತೀಯ ಸಂಶೋಧನೆ

ಊ) ವಿಶ್ಲೇಷಣಾತ್ಮಕ ಸಂಶೋಧನೆ

ಋ) ವೈಜ್ಞಾನಿಕ ಸಂಶೋಧನೆ

ೠ) ಅಂಕಿ ಅಂಶಗಳ ಆಧಾರಿತ ಶೋಧನೆ

3.7 ಸಮೀಕ್ಷಾ ವಿಧಾನ

ಪ್ರಸ್ತುತ ಘಟನೆಗಳ ವಿವರವಾದ ಮಾಹಿತಿಯನ್ನು ಸಂಗ್ರಹಿಸಿ, ಈಗಿನ ಪರಿಸ್ಥಿತಿಯು ಸರಿಯಾಗಿದೆ ಎಂಬುದನ್ನು ಸ್ಪಷ್ಟಪಡಿಸಲು ಅಥವಾ ಇನ್ನೂ ಉತ್ತಮಪಡಿಸುವ ದೃಷ್ಟಿಯಿಂದ ಕೆಲವು ಯೋಜನೆಗಳನ್ನು ಸೂಚಿಸಲು ಸರ್ವೇಕ್ಷಣಾ ಅಧ್ಯಯನ ಸಹಾಯಕ. ಇದರ ಮುಖ್ಯ ಉದ್ದೇಶ ವಿಶ್ಲೇಷಿಸುವದು ಅರ್ಥೈಸುವುದು, ಮತ್ತು ಪ್ರಸ್ತುತ ಪರಿಸ್ಥಿತಿಯನ್ನು ವರದಿ ಮಾಡುವುದು, ಮಾತ್ರವಲ್ಲದೇ ಒಂದು ಗೊತ್ತು ಪಡಿಸಲಾದ ಮಟ್ಟಕ್ಕೆ ಅದನ್ನು ಹೋಲಿಸಿ ಅದು ಎಷ್ಟರ ಮಟ್ಟಿಗೆ ತೃಪ್ತಿಕರವಾಗಿದೆ ಎಂಬುದನ್ನು ತಿಳಿಸುವುದೂ ಆಗಿರುತ್ತದೆ. ಕೆಲವು ಸರ್ವೇಕ್ಷಣೆಗಳು ಎಲ್ಲಾ ಮೂರು ವಿಧವಾದ ಮಾಹಿತಿಯನ್ನೂ ಸಂಗ್ರಹಿಸುವುದಾಗಿರುತ್ತದೆ.

1) ಈಗಿನ ಸ್ಥಿತಿಗೆ ಸಂಬಂಧಿಸಿದ ದತ್ತಾಂಶಗಳನ್ನು ಸಂಗ್ರಹಿಸುವುದು

2) ಗೊತ್ತುಪಡಿಸಲಾದ ಮಟ್ಟಕ್ಕೆ ಈಗಿನ ಪರಿಸ್ಥಿತಿಯನ್ನು ಹೋಲಿಸುವುದು

3) ಪ್ರಸ್ತುತ ಸ್ಥಿತಿಗಳನ್ನು ಉತ್ತಮ ಪಡಿಸುವ ಉಪಾಯಗಳನ್ನು ಸೂಚಿಸುವುದು

ಸಂಶೋಧನೆಯ ವ್ಯಾಪ್ತಿ ಮತ್ತು ರೂಪರೇಶೆಗಳಿಗನುಗುಣವಾಗಿ ಸಮೀಕ್ಷಾ ಅಧ್ಯಯನವು ವಿವಿಧ ರೀತಿಯದಾಗಿರುತ್ತದೆ. ಅದರ ವ್ಯಾಪ್ತಿ ಬಹಳ ಸಂಕುಚಿತವಾಗಿ ಅಥವಾ ವ್ಯಾಪಕವಾಗಿ ಇರಬಹುದು. ಕೆಲವು ಸಮೀಕ್ಷೆಗಳು ಅನೇಕ ದೇಶಗಳನ್ನೇ ಒಳಗೊಂಡಿರಬಹುದು. ರಾಜ್ಯಗಳು, ಪ್ರದೇಶಗಳನ್ನೊಳ ಗೊಂಡಿರಬಹುದು, ಇಲ್ಲವೇ ಒಂದೇ ದೇಶಕ್ಕೆ ಮಿತಿಗೊಂಡಿರಬಹುದು. ಒಂದು ಪ್ರದೇಶ, ಜಿಲ್ಲೆ, ಅಥವಾ ತಾಲೂಕಿಗೆ ಸೀಮಿತವಾಗಿರಬಹುದು. ಒಂದು ಶಾಲೆಯ ವ್ಯವಸ್ಥೆಗೆ ಅಥವಾ ಯಾವುದೋ ಒಂದು ಘಟಕಕ್ಕೆ ನಿಗದಿಯಾಗಿರಬಹುದು. ಸಮೀಕ್ಷೆಯ ಮೂಲಕ ದತ್ತಾಂಶಗಳನ್ನು ಎಲ್ಲಾ ಘಟಕಗಳ ಅಥವಾ ಅವುಗಳ ಪ್ರತಿನಿಧಿತ ಪ್ರತಿದರ್ಶಗಳಿಂದ ಸಂಗ್ರಹಿಸಬಹುದು. ಹೀಗೆ ಸಂಗ್ರಹಿಸಲಾದ ಮಾಹಿತಿಯು ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಅಥವಾ ಆಯ್ಕೆ ಮಾಡಲಾದ ಕೆಲವು ಅಂಶಗಳನ್ನು ಒಳಗೊಂಡಿರಬಹುದು.

3.8 ಪ್ರಶ್ನಾವಳಿಯ ಅರ್ಥ ಮತ್ತು ವ್ಯಾಖ್ಯೆಗಳು :

ಸಂಶೋಧನೆ ಮತ್ತು ಸಮೀಕ್ಷೆ ಮಾಹಿತಿ ಸಂಗ್ರಹಿಸಲು ಪ್ರಶ್ನಾವಳಿ ಬಹಳ ಉಪಯುಕ್ತ ಸಾಧನ. ದೊಡ್ಡ ವೈವಿಧ್ಯ ಹಾಗೂ ಹರಡಿದ ಸಾಮಾಜಿಕ ಗುಂಪುಗಳಿಂದ ಮಾಹಿತಿ ಸಂಗ್ರಹಿಸಲು ಇದೊಂದು ಉತ್ತಮ ವಿಧಾನ. ವ್ಯಕ್ತಿಗಳ ಮನೋಭಾವಗಳು, ನಂಬಿಕೆಗಳು, ಅಭ್ಯಾಸಗಳು ಮತ್ತು ಅಭಿಪ್ರಾಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವಲ್ಲಿ ಪ್ರಶ್ನಾವಳಿಯು ಉಪಯುಕ್ತ ಸಾಧನವಾಗಿದೆ.

a) ವ್ಯಾಖ್ಯೆಗಳು

ಪ್ರಶ್ನಾವಳಿಯ ಅರ್ಥವನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸಬಹುದಾಗಿದೆ.

ಜಿ.ವಿ.ಲುಂಡ್ ಬರ್ಗ್ ಪ್ರಕಾರ "ಮೂಲಭೂತವಾಗಿ ಪ್ರಶ್ನಾವಳಿಯು ಪ್ರೇರಕಗಳ ಗುಚ್ಛವಾಗಿದ್ದು, ಇವುಗಳಿಗೆ ಅಕ್ಷರಸ್ಥರ ಲಿಖಿತ ಮನೋಭಾವ ಏನೆಂಬುದನ್ನು ತಿಳಿಯದಾಗಿದೆ'.

ಗೂಡೆ ಮತ್ತು ಹ್ಯಾಟ್ ರವರ ಪ್ರಕಾರ "ಪ್ರಶ್ನಾವಳಿಯು ಸ್ವತಃ ಪ್ರತಿಕ್ರಿಯೆಯೇ ಪ್ರಶ್ನೆಗಳ ಪಟ್ಟಿಯಲ್ಲಿ ಉತ್ತರಗಳನ್ನು ನಮೂದಿಸುವ ಮೂಲಕ ತನ್ನ ಉತ್ತರವನ್ನು ವ್ಯಕ್ತಪಡಿಸುವ ಸಾಧನ".

ಬೋಗಾರ್ಡಸ್ ರವರ ಪ್ರಕಾರ "ಪ್ರಶ್ನಾವಳಿಯು ಹಲವಾರು ಜನರಿಂದ ಉತ್ತರ ಪಡೆಯುವ ಕಳುಹಿಸಿಕೊಟ್ಟು ಪ್ರಶ್ನೆಗಳ ಪಟ್ಟಿಯಾಗಿದೆ. ಇದರಿಂದ ಸಂಖ್ಯಾಂಶವಾಗಿ ಗರಿಷ್ಟ ಪ್ರಮಾಣ ಗೊಳಿಸಬಹುದಾದ ಉತ್ಕೃಷ್ಟ ದರ್ಜೆಯ ಫಲಿತಾಂಶಗಳನ್ನೇ ಪಡೆಯಲಾಗಿದೆ" ಎಂದು ತಿಳಿಸಿದ್ದಾರೆ.

ಡಿಕ್ಷ್ನರಿ ಆಫ್ ಸ್ಟ್ಯಾಟಿಸ್ಟಿಕಲ್ ಆರ್ಮ್ಸ್‌ನಂತೆ "ಪ್ರಶ್ನಾವಳಿಯು ಒಂದು ವಿಷಯ ಅಥವಾ ಕ್ರಮಾನುಸಾರ ವಿಷಯಗಳ ಬಗ್ಗೆ ಮಾಹತಿದಾರನಿಂದ ಉತ್ತರ ಪಡೆಯಲು ರಚಿಸಿದ ಪ್ರಶ್ನೆ ಮಾಲಿಕೆ".

b) ಪ್ರಶ್ನಾವಳಿಯ ಬಗೆಗಳು:

ವಿಶಾಲಾರ್ಥದಲ್ಲಿ ಪ್ರಶ್ನಾವಳಿಗಳಲ್ಲಿ ಎರಡು ರೂಪಗಳಿವೆ.

1) ಅಮುಕ್ತ ಅಥವಾ ಸಂರಚಿತ ನಮೂನೆ ಪ್ರಶ್ನಾವಳಿಗಳು
2) ಮುಕ್ತ ಅಥವಾ ಅಸಂರಚಿತ ನಮೂನೆ ಪ್ರಶ್ನಾವಳಿಗಳು

1) ಅಮುಕ್ತ ಅಥವಾ ಸಂರಚಿತ ನಮೂನೆ ಪ್ರಶ್ನಾವಳಿಗಳು:

ಅಮುಕ್ತ ನಮೂನೆ ಪ್ರಶ್ನಾವಳಿಗಳಲ್ಲಿ ಪ್ರಶ್ನೆಯೊಂದಿಗೆ ಒದಗಿಸಿದ ಬಹು ಉತ್ತರದಲ್ಲಿ ಒಂದು ಸೂಕ್ತ ಉತ್ತರವನ್ನು ಪ್ರತ್ಯುತ್ತರಾರ್ಥಿ ಆಯ್ಕೆ ಮಾಡುತ್ತಾನೆ. ಇದನ್ನು ತುಂಬಿಸುವುದು ಸುಲಭ. ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತದೆ. ವಿಷಯಕ್ಕೆ ಪ್ರತಿಕ್ರಿಯಿಸುವವನು ಗಮನಿಸುವಂತೆ ಮಾಡುತ್ತೆ. ಹೆಚ್ಚು

ವಸ್ತು ನಿಷ್ಠವಾಗದೇ ಹೆಚ್ಚು ಸಮ್ಮತವಾಗಿದೆ. ಉತ್ತರಿಸುವವನಿಗೆ ಅನುಕೂಲವಾಗಿದೆ ಮತ್ತು ತಖ್ತೀಕರಣಗೊಳಿಸಲು ಹಾಗೂ ವಿಶ್ಲೇಷಿಸಲು ತಕ್ಕಮಟ್ಟಿಗೆ ಸುಲಭವಾಗಿದೆ.

2) ಮುಕ್ತ ಅಥವಾ ಅಸಂರಚಿತ ಪ್ರಶ್ನಾವಳಿಗಳು:

ಮುಕ್ತ ಅಥವಾ ಅಸಂರಚಿತ ಪ್ರಶ್ನಾವಳಿಗಳಲ್ಲಿ ಪ್ರಶ್ನೆಗಳ ರಚನೆಯು ಉತ್ತರಿಸುವವರಿಗೆ ತಾವೇ ಉತ್ತರಗಳನ್ನು ಉತ್ತರಿಸಲು ಮುಂದಾಗುವಂತಿರಬೇಕು. ಸುಳಿವುಗಳನ್ನು ಒದಗಿಸಲಾಗುವುದಿಲ್ಲ. ಮುಕ್ತ ಅಥವಾ ಅಸಂರಚಿತ ವಿವಿಧ ಪ್ರಶ್ನಾವಳಿಯು ಉತ್ತರಿಸುವವರಿಗಾಗಿರುವ ಚೌಕಟ್ಟಿನಲ್ಲಿ ಸ್ವಂತತ್ರವಾದ ಉತ್ತರಗಳಿಗೆ ಎಡೆ ಮಾಡಿಕೊಡುತ್ತದೆ. ಮತ್ತು ಅವರು ತಮ್ಮದೇ ಆದ ಉತ್ತರಗಳನ್ನು ಭರ್ತಿ ಮಾಡಬಹುದು. ವ್ಯಕ್ತಿಯು ತನ್ನ ನಿಯಮಗಳ ಚೌಕಟ್ಟನ್ನು ನೀಡುತ್ತಾನೆ ಹಾಗೂ ಸಾಧ್ಯವಾದಷ್ಟು ತನ್ನ ಉತ್ತರಗಳಿಗೆ ಕಾರಣಗಳನ್ನು ನೀಡುತ್ತಾನೆ. ಈ ವಿವಿಧ ಅಂಶಗಳನ್ನು ಸಂಶೋಧನಾ ವರದಿಯಲ್ಲಿ ಕೆಲವು ಅರ್ಥೈಸುವುದು, ತಖ್ತೀಕರಿಸುವುದು ಮತ್ತು ಸರಳೀಕರಿಸುವುದು ಕಠಿಣವಾಗುತ್ತದೆ. ಉತ್ತರಿಸುವವನಿಗೆ ಉತ್ತರಿಸುವ ಸ್ವಾತಂತ್ರ್ಯ ನೀಡಿದಾಗ ಅವನ ನಿರೂಪಣೆಯ ರೀತಿ ಇತರೆ ಉತ್ತರಗಳೊಂದಿಗೆ ಯಾವುದೇ ಏಕರೂಪತೆ ಇದರ ಒಂದು ದ್ವಿತೀಯ ಮಾರ್ಗವನ್ನು ಅನುಸರಿಸಬಹುದು.

c) ಪ್ರಶ್ನಾವಳಿಗಳನ್ನು ಅವುಗಳ ಉಪಯುಕ್ತತೆಯ ಆಧಾರದ ಮೇಲೆ ಹೀಗೆ ವರ್ಗೀಕರಿಸಲಾಗಿದೆ.

1) ದರ್ಜಾ ನಿರ್ಧಾರ ಪ್ರಶ್ನಾವಳಿ
2) ಅವಲೋಕನ ಪ್ರಶ್ನಾವಳಿ
3) ಸಂದರ್ಶನ ಪ್ರಶ್ನಾವಳಿ
4) ದಾಖಲಾ ಪ್ರಶ್ನಾವಳಿ

d) ಉತ್ತಮ ಪ್ರಶ್ನಾವಳಿಯ ಗುಣಲಕ್ಷಣಗಳು:

1) ಉತ್ತರಿಸುವವನು ಸಹ ಮಹತ್ವ ಪೂರ್ಣವೆಂದು ಪರಿಗಣಿಸುವ ಉಪಯೋಗಗಳೊಂದಿಗೆ ಇದು ಸಂಬಂಧಿಸಿದೆ.
2) ಇದರೊಂದಿಗೆ ಇದರ ಮಹತ್ವವನ್ನು ಸೂಚಿಸುವ ಒಂದು ಪತ್ರವನ್ನು ಹೊಂದಿರುತ್ತದೆ.
3) ಇತರ ಮೂಲಗಳಿಂದ ಮಾಹಿತಿ ಪಡೆಯಲು ಸಾಧ್ಯವಿಲ್ಲದ ಮಾಹಿತಿಯನ್ನು ಪಡೆಯಲು ಸಹಾಯ ನೀಡುತ್ತದೆ.
4) ಇದು ಎಲ್ಲಾ ಸಂಬಂಧಿಸಿದ ಮಾಹಿತಿಯನ್ನು ಪಡೆಯಲು ಅನುಕೂಲ ವಾಗದಂತೆ ವ್ಯಾಪಕವಾಗಿಯೂ ಹಾಗೂ ಸ್ಪಷ್ಟವಾಗಿಯೂ ಇರುತ್ತದೆ.
5) ಎಷ್ಟು ಸಾಧ್ಯವೋ ಅಷ್ಟು ಸಂಕ್ಷಿಪ್ತವಾಗಿರುತ್ತದೆ.

6) ಇದು ವಸ್ತುನಿಷ್ಠ ಸ್ವರೂಪದ ಪ್ರಶ್ನೆಗಳನ್ನು ಹೊಂದಿರುತ್ತದೆ.

7) ಇದು ಸೌಮ್ಯತೆಯಿಂದ ಹೆಚ್ಚು ನಿರ್ಧಿಷ್ಟತೆಯೆಡೆಗೆ ಹಾಗೂ ಸರಳತೆಯಿಂದ ಸಂಕೀರ್ಣತೆಯೆಡೆಗೆ ಒಂದು ಉತ್ತಮ ವ್ಯವಸ್ಥೆಯಿಂದ ಕೂಡಿರುವ ಪ್ರಶ್ನೆಗಳನ್ನು ಹೊಂದಿರುತ್ತದೆ.

8) ನಿಖರವಾಗಿ ಮತ್ತು ಸುಲಭವಾಗಿ ಉತ್ತರಗಳನ್ನು ಪಡೆಯಲು ಅನುಕೂಲವಾಗುವಂತೆ ಪ್ರಶ್ನೆಗಳನ್ನು ನಿರ್ದಿಷ್ಟ ವರ್ಗಗಳಾಗಿ ವ್ಯವಸ್ಥೆಗೊಳಿಸಲಾಗಿರುತ್ತದೆ. ಇದು ಸ್ಪಷ್ಟವಾದ ಮತ್ತು ಪರಿಪೂರ್ಣವಾದ ಸೂಚನೆಗಳನ್ನು ಹೊಂದಿರುತ್ತದೆ.

9) ಪ್ರಶ್ನಾವಳಿಯ ಪ್ರತಿಯೊಂದು ಪ್ರಶ್ನೆಯೂ ಒಂದು ವಿಚಾರಕ್ಕೆ ಮಾತ್ರ ಸಂಬಂಧಿಸಿರುತ್ತದೆ.

10) ಪೇಚಿಗೀಡು ಮಾಡುವ ಹಾಗೂ ನೋವುಂಟು ಮಾಡುವ ಪ್ರಶ್ನೆಗಳನ್ನು ದೂರವಿಡುತ್ತದೆ.

3.9 ಪ್ರಸ್ತುತ ಸಂಶೋಧನೆಗೆ ಪ್ರಶ್ನಾವಳಿ ಸಿದ್ಧಪಡಿಸಿದ ವಿನ್ಯಾಸ

ಪ್ರಸ್ತುತ ಸಂಶೋಧನೆಯು "ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರಾಥಮಿಕ ಶಾಲೆಗಳ ೭ನೇ ತರಗತಿ ವಿದ್ಯಾರ್ಥಿಗಳಲ್ಲಿ "ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆಯ ದೋಷಗಳು ಕುರಿತು ಸಮೀಕ್ಷಾ ಅಧ್ಯಯನ" ಎಂಬ ಸಮಸ್ಯೆಯನ್ನು ಗುರುತಿಸಿಕೊಂಡಿರುತ್ತಾರೆ. ಈ ಸಂಶೋಧನೆಯು ಬರವಣಿಗೆಯ ದೋಷಗಳನ್ನು ಪತ್ತೆ ಹಚ್ಚಿ ಅದಕ್ಕೆ ಕಾರಣಗಳನ್ನು ಹುಡುಕುವುದಾಗಿದೆ. ಈ ನಿಟ್ಟಿನಲ್ಲಿ ಪ್ರಶ್ನೆಗಳನ್ನು ರಚಿಸಿರುತ್ತದೆ. ಪ್ರಶ್ನಾವಳಿಯು ಮೂರು ರೀತಿಯಿಂದ ಕೂಡಿದ್ದು;

- 'ಎ' ವಿಭಾಗವು ೨೦ ಉಕ್ತಲೇಖನ ಪದಗಳನ್ನು ಒಳಗೊಂಡಿದೆ.
- 'ಬಿ' ವಿಭಾಗವು ಪಾಠದಲ್ಲಿ ಆಯ್ಕೆ ಮಾಡಿಕೊಂಡ ೧೦ ವಾಕ್ಯಗಳನ್ನು ಒಳಗೊಂಡಿದೆ.
- 'ಸಿ' ವಿಭಾಗವು ಪಾಠಗಳಲ್ಲಿ ಆಯ್ಕೆ ಮಾಡಿಕೊಂಡ ಟಿಪ್ಪಣಿ ರೂಪವನ್ನು ಒಳಗೊಂಡಿದೆ.

ಇವೆಲ್ಲವನ್ನು ಒಂದೇ ಪ್ರಶ್ನೆ ಪತ್ರಿಕೆಯಲ್ಲಿ ಕೊಡಲಾಗಿರುತ್ತದೆ. ಈ ಪ್ರಶ್ನೆಗಳನ್ನು "ದರ್ಜಾ ನಿರ್ಧಾರದ ಪ್ರಶ್ನೆಗಳು" ಗುಂಪಿಗೆ ಸೇರಿಸಬಹುದಾಗಿದೆ.

3.10 ನಮೂನೆಯ ವಿವರಣೆ

ಸಂಶೋಧನೆಯಲ್ಲಿ ನಮೂನೆ ಅಥವಾ ಪ್ರತಿದರ್ಶಚಯನವನ್ನು ಆಯ್ಕೆ ಮಾಡುವ ಉದ್ದೇಶದಿಂದ ಕೂಡಾ ಸಂಶೋಧನಾ ಕ್ಷೇತ್ರವನ್ನು ಕುರಿತ ತೀರ್ಮಾನಗಳನ್ನು ಕೈಗೊಳ್ಳಲು ಪ್ರತಿದರ್ಶಚಯನ ಒಂದು ಆಧಾರವನ್ನು ಒದಗಿಸುತ್ತದೆ ಎಂಬ ಕಾರಣದಿಂದ ಒಂದು ಸಂಶೋಧನಾ ಕ್ಷೇತ್ರದಲ್ಲಿನ ಎಲ್ಲಾ ವ್ಯಕ್ತಿಗಳನ್ನು ಅಧ್ಯಯನ ವ್ಯಾಪ್ತಿಯಲ್ಲಿ ತರಬೇಕಾದರೆ ಅಪರಿಮಿತ ಕಾಲ, ಹಣ ವ್ಯಯವಾಗುವುದರಿಂದ ಅತಿ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಫಲಿತಾಂಶಗಳನ್ನು ಪಡೆಯಲು ಪ್ರತಿದರ್ಶಚಯನ ಆಯ್ಕೆ ಸಂಶೋಧಕನಿಗೆ ಅನುವು

ಮಾಡಿಕೊಡುತ್ತದೆ. ಸಂಶೋಧನಾ ಕ್ಷೇತ್ರದ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವ, ಆ ಕ್ಷೇತ್ರವನ್ನು ಸರ್ವ ವಿಧದಲ್ಲೂ ಪ್ರತಿನಿಧಿಸುವ ಒಂದು ಸಣ್ಣ ಪ್ರತಿರೂಪವೇ ಪ್ರತಿದರ್ಶವೆಂದು ಹೇಳಬಹುದು. ಅಂದರೆ ಕಠಿಣವಾದ ಕೆಲಸವನ್ನು ಸರಳವಾಗಿ ಸಾಧಿಸುವ ಪ್ರಯತ್ನ ಎಂದು ನಮೂನೆಯನ್ನು ಅರ್ಥೈಸಬಹುದಾಗಿದೆ.

ಸಂಶೋಧನೆಯ ಅಥವಾ ಮಾಪನದ ಉದ್ದೇಶಕ್ಕಾಗಿ ವಿವರಸಲ್ಪಟ್ಟು ಸಮಷ್ಟಿಯ ಬಗೆಗೆ ಅವಶ್ಯಕವಾದ ಮಾಹಿತಿ ಸಂಗ್ರಹಿಸುವುದಕ್ಕಾಗಿ ಆ ಸಮಷ್ಟಿಯಿಂದಲೇ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳನ್ನೊಳಗೊಂಡ ಪ್ರತಿನಿಧಿಕ ಗುಂಪನ್ನು ಪ್ರತಿದರ್ಶ ಅಥವಾ ನಮೂನೆ ಎಂದು ಕರೆಯಲಾಗಿದೆ.

a) ವ್ಯಾಖ್ಯೆಗಳು

ಎ.ಎ.ಯಂಗರ್‌ರವರ ಪ್ರಕಾರ:

"ಸಂಖ್ಯಾಶಾಸ್ತ್ರೀಯ ನಮೂನೆ ಸಂಪೂರ್ಣ ಸಮೂಹದ ಚಿಕ್ಕ ಭಾಗ ಎಂದರೆ ಒಂದು ವಿಸ್ತೃತ ಸಮೂಹದ ಚಿಕ್ಕ ಪ್ರತಿನಿಧಿಕ ಸಮೂಹವೇ ನಮೂನೆ".

ಗೋಡ್ ಮತ್ತು ಹ್ಯಾಟಲ್‌ರವರ ಪ್ರಕಾರ:

"ಬೃಹತ್ ಅಂಕಿ ಸಂಖ್ಯೆಗಳನ್ನು ಪ್ರತಿನಿಧಿಸುವ ಚಿಕ್ಕ ಪ್ರತಿನಿಧಿಯೇ ಪ್ರತಿದರ್ಶ" ಎಂದಿದ್ದಾರೆ.

ನಾಸ್ಲಿನ್‌ರವರ ಪ್ರಕಾರ:

"ಇಡೀ ಜನಾಂಗದ ಒಂದು ಪ್ರತಿನಿಧಿಕ ಉಪಘಟಕವೇ ನಮೂನೆ" ಎಂದಿದ್ದಾರೆ.

b) ನಮೂನೆಗಳ ಪ್ರಮುಖ ಲಕ್ಷಣಗಳು

1) ಪ್ರತಿದರ್ಶ ಅಥವಾ ನಮೂನೆಗಳ ಪೂರ್ವಗ್ರಹ ಹಾಗೂ ಪ್ರತಿದರ್ಶ ಘಟಕಗಳ ಆಯೆಯಲ್ಲಿನ ದೋಷಗಳಿಂದ ಮುಕ್ತವಾಗಿರಬೇಕು.
2) ಪ್ರತಿ ಶ್ರೇಣಿಯಲ್ಲಿನ ಘಟಕಗಳ ನಡುವೆ ಏಕರೂಪತೆ ಇರಬೇಕು.
3) ಶ್ರೇಣಿಗಳ ಗುಣಲಕ್ಷಣಗಳು ಒಂದನ್ನೊಂದು ಅತಿಕ್ರಮಿಸುವಂತಿರಬಾರದು.
4) ನಮೂನೆಗಳು ಸೂಕ್ತ ಗಾತ್ರದ್ದಾಗಿರಬೇಕು ಅದು ನಂಬಿಕೆಗೆ ಅರ್ಹವಾಗಿರಬೇಕು.
5) ನಮೂನೆಗಳ ಘಟಕಗಳು ಪರಸ್ಪರ ಅವಲಂಭಿತವಾಗಿರದೇ ಸಾಧ್ಯವಾದ ಮಟ್ಟಿಗೆ ಸ್ವತಂತ್ರವಾಗಿರಬೇಕು.
6) ಒಂದು ಉತ್ತಮ ಪ್ರತಿದರ್ಶ ಯಾವಾಗಲೂ ಉತ್ತಮವಾದ ಸಂಭವನೀಯ ಪ್ರತಿದರ್ಶ ಆಯ್ಕೆಯ ವಿಧಾನದಿಂದ ಆರಿಸಲ್ಪಟ್ಟದ್ದಾಗಿರಬೇಕು.
7) ಪ್ರತಿದರ್ಶಗಳನ್ನು ಆಯ್ಕೆ ಮಾಡುವಾಗ ವೈಯಕ್ತಿಕ ಪಕ್ಷಪಾತಗಳು ಪ್ರಭಾವಿಸದಂತೆ ಎಚ್ಚರವನ್ನು ವಹಿಸಬೇಕು.

c) ನಮೂನೆಗಳು ಅಥವಾ ಪ್ರತಿದರ್ಶಿಯ ಆಯ್ಕೆಯ ವಿಧಗಳು:

1) ಸಂಭವನೀಯ ಪ್ರತಿದರ್ಶಚಯನ ತಂತ್ರಗಳು

2) ಸಂಭವರಹಿತ ಪ್ರತಿದರ್ಶನಚಯನ ತಂತ್ರಗಳು

1) ಸಂಭವನೀಯ ಪ್ರತಿದರ್ಶಚಯನ ತಂತ್ರಗಳು

ಈ ರೀತಿಯ ವಿಧಿಗಳಿಂದ ಜನಸಂಖ್ಯೆಯಿಂದ ದತ್ತಾಂಶಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇದನ್ನು ಅಂದಾಜು ಪ್ರತಿದರ್ಶ ಅಥವಾ ನಮೂನೆ ಎಂದೂ ಕರೆಯುತ್ತಾರೆ. ಸಂಭವನೀಯ ನಮೂನೆ ತಂತ್ರದಲ್ಲಿ ಪ್ರತಿದರ್ಶವನ್ನು ಆಯ್ಕೆ ಮಾಡುವಾಗ ಅಂದಾಜಿನಿಂದ ಘಟಕಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಒಂದು ಜನ ಸಮುದಾಯದ ಪ್ರತಿದರ್ಶವನ್ನು ಅಂದಾಜಿನ ಮೇಲೆ ಅಥವಾ ಸರಾಸರಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ನಮೂನೆಗಳನ್ನು ರೂಪಿಸಬೇಕಾಗುವುದು.

2) ಸಂಭವ ರಹಿತ ಪ್ರತಿದರ್ಶಚಯನ ತಂತ್ರಗಳು

ಸಂಭವ ರಹಿತ ಪ್ರತಿದರ್ಶಚಯನ ತಂತ್ರ ಎಂದರೆ ಸಂಖ್ಯಾಶಾಸ್ತ್ರಜ್ಞರು ತಮ್ಮ ಸ್ವಯಂ ಪ್ರತಿಭೆ ಮತ್ತು ವ್ಯವಹಾರಿಕ ಬುದ್ಧಿ ಮತ್ತೆಯಿಂದ ಒಂದು ಜನ ಸಮೂಹವನ್ನು ಸರಿಯಾಗಿ ಪ್ರತಿನಿಧಿಸುವಂತಹ ನಮೂನೆಯನ್ನು ಆಯ್ಕೆ ಮಾಡಿಕೊಳ್ಳುವುದಾಗಿದೆ. ಒಂದು ಸಮುದಾಯ ಅಥವಾ ಸಮುಷ್ಠಿಯಿಂದ ಅದರ ಪ್ರತಿಯೊಂದು ಪ್ರತಿದರ್ಶ ಘಟಕವನ್ನು ಸಂಭವರಹಿತವಾಗಿ ಆಯ್ಕೆ ಮಾಡುವ ಕ್ರಮವನ್ನು ಸಂಭವರಹಿತ ಪ್ರತಿದರ್ಶಚಯನ ತಂತ್ರ ಎನ್ನುತ್ತಾರೆ.

3.11 ಪ್ರಸ್ತುತ ಸಂಶೋಧನೆಯಲ್ಲಿ ನಮೂನೆಗಳ ಅಥವಾ ಪ್ರತಿದರ್ಶ ಆಯ್ಕೆಯ ವಿನ್ಯಾಸ

ಪ್ರಸ್ತುತ ಅಧ್ಯಯನದಲ್ಲಿ ಉದ್ದೇಶಿತ ಪ್ರತಿಚಯನ ಅಥವಾ ಸಂಭವನೀಯತೆ ಪ್ರತಿದರ್ಶವನ್ನು ಆಯ್ಕೆ ಮಾಡಲಾಗಿದ್ದು, ಪ್ರತಿದರ್ಶಿಯು ಬೆಂಗಳೂರು ನಗರ ಜಿಲ್ಲೆಯಲ್ಲಿ ೨ ಸರ್ಕಾರಿ, ೨ ಅನುದಾನಿತ, ೨ ಖಾಸಗಿ ಪ್ರಾಥಮಿಕ ಶಾಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ೨ ಸರ್ಕಾರಿ, ೨ ಅನುದಾನಿತ, ೨ ಖಾಸಗಿ ಪ್ರಾಥಮಿಕ ಶಾಲೆಯ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದೆ.



ಅಧ್ಯಾಯ – 4

ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥ ವಿವರಣೆ

ಅಧ್ಯಾಯ – ೪

ದತ್ತಾಂಶಗಳ ವಿಶ್ಲೇಷಣೆ ಮತ್ತು ಅರ್ಥ ವಿವರಣೆ

ಪ್ರಸ್ತುತ ಅಧ್ಯಯನದಲ್ಲಿ ಸಂಗ್ರಹಿಸಿದ ದತ್ತಾಂಶಗಳ ಮಾಹಿತಿಯನ್ನು ವಿಶ್ಲೇಷಣೆಯ ವಿವರಗಳನ್ನು ನೀಡಲಾಗಿದೆ ಹಾಗೂ ವಿಶ್ಲೇಷಣೆ ಮಾಡುವಾಗ ಅನುಸರಿಸಬಹುದಾದ ಮಾರ್ಗಸೂಚಿಯನ್ನು ವಿವರಿಸಲಾಗಿದೆ.

4.1 ದತ್ತಾಂಶಗಳ ವಿಶ್ಲೇಷಣೆಯ ಅರ್ಥ ಮತ್ತು ವ್ಯಾಖ್ಯೆಗಳು

"ವ್ಯವಸ್ಥಿತವಾಗಿ ಪಟ್ಟಿ ಮಾಡಿದ ದತ್ತಾಂಶಗಳನ್ನು ಅಧ್ಯಯನ ಮಾಡಿ ಒಳಗಿನ ಆಳದ ಅರ್ಥಗಳನ್ನು ತಿಳಿಯುವ ಕೆಲಸವನ್ನು ದತ್ತಾಂಶದ ವಿಶ್ಲೇಷಣೆ ಎನ್ನುತ್ತಾರೆ". ಈ ವಿಭಾಗದಲ್ಲಿ ದತ್ತಾಂಶಗಳನ್ನು ಹೇಗೆ ವ್ಯವಸ್ಥೆಗೊಳಿಸಬೇಕು, ವಿಶ್ಲೇಷಿಸಬೇಕು ಮತ್ತು ವ್ಯಾಖ್ಯಾನ ಮಾಡಬೇಕು ಎಂದು ಸಂಶೋಧಕನು ವಿವರಿಸುತ್ತಾನೆ. ಗುಣಾತ್ಮಕ ಮತ್ತು ಪರಿಮಾಣಾತ್ಮಕ (ಸಂಖ್ಯಾಶಾಸ್ತ್ರೀಯ) ತಂತ್ರಗಳು ಮತ್ತು ಅಂತಹ ತಂತ್ರಗಳನ್ನು ಬಳಸುವ ಯುಕ್ತ ಪೂರ್ವಕ ವಿವರಗಳನ್ನು ಸಂಶೋಧನ ಪ್ರಸ್ತಾವವು ಒಳಗೊಂಡಿರಬೇಕು.

ದತ್ತಾಂಶಗಳನ್ನು ವಿಶ್ಲೇಷಣೆ ಮಾಡಲು ಅನೇಕ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಬಳಸಲಾಗುತ್ತದೆ. ಅಳತೆಯ ವಿತರಣೆ ಸ್ವರೂಪವನ್ನು ವರ್ಣಿಸಲು, ಸರಾಸರಿ, ಮಧ್ಯಾಂಕ ಮತ್ತು ಇತ್ಯಾದಿಗಳಿಂದ ಕೆಲವು ತಂತ್ರಗಳನ್ನು ಬಳಸುತ್ತಾರೆ. ಇಂತಹ ಸಂಖ್ಯಾಶಾಸ್ತ್ರವನ್ನು ವಿವರಣಾತ್ಮಕ ಸಂಖ್ಯಾಶಾಸ್ತ್ರ ಎನ್ನುತ್ತಾರೆ.

ಅ) ವ್ಯಾಖ್ಯೆಗಳು

ಗುಡ್‌ರವರ ಪ್ರಕಾರ "ದತ್ತಾಂಶವು ಅನುಮತಿಸುವ ಮಹತ್ವ ಪೂರ್ಣವಾದ ತಖ್ತೆಗಳ ರೂಪದಲ್ಲಿ ಆಲೋಚಿಸುವುದು" ಎಂದಿದ್ದಾರೆ.

ಬಾರ್ ರವರ ಪ್ರಕಾರ "ಸಮಸ್ಯೆಯ ನಿರೂಪಣೆಯನ್ನು ಮತ್ತು ದತ್ತಾಂಶದ ಮೂಲ ದಾಖಲೆಗಳನ್ನು ಮೊದಲೇ ಎಚ್ಚರಿಕೆಯಿಂದ ಪರೀಕ್ಷಿಸುವುದು" ಎಂದಿದ್ದಾರೆ.

ಸ್ಟೇಟ್ ರವರ ಪ್ರಕಾರ "ಇತರರೊಂದಿಗೆ ಸಮಸ್ಯೆಯನ್ನು ಚರ್ಚಿಸುವುದು ಹಾಗೂ ಅನೇಕ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆಯ ಮೂಲಕ ದತ್ತಾಂಶಗಳನ್ನು ತಾಳೆ ನೋಡುವುದು" ಎಂದಿದ್ದಾರೆ.

4.2 ಪ್ರಸ್ತುತ ಅಧ್ಯಯನದಲ್ಲಿ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ ಮತ್ತು ಅರ್ಥ ವಿವರಣೆ

ಪ್ರಸ್ತುತ ಸಂಶೋಧನೆಗೆ ಸರ್ಕಾರ, ಅನುದಾನಿತ ಹಾಗೂ ಖಾಸಗಿ ಪ್ರಾಥಮಿಕ ಶಾಲೆಗಳು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ೭ನೇ ತರಗತಿ ವಿದ್ಯಾರ್ಥಿಗಳಿಗೆ ಬರವಣಿಗೆ ದೋಷದ

ಬಗ್ಗೆ ಅಧ್ಯಯನವನ್ನು ಕುರಿತು ಪರೀಕ್ಷೆಯನ್ನು ನಡೆಸಲಾಗಿದೆ. ಪರೀಕ್ಷೆಯನ್ನು ಪ್ರಶ್ನಾವಳಿಗಳ ಮೂಲಕ ನಡೆಸಲಾಯಿತು. ಈ ಪ್ರಶ್ನಾವಳಿಗಳನ್ನು ನೀಡುವ ಮೊದಲು ಮಾರ್ಗದರ್ಶಕರಾದ ಡಾ॥ ಶೀಲಾದೇವಿ ಸ ಮಳೀಮಠ್ ಇವರೊಂದಿಗೆ ಚರ್ಚಿಸಿ ಯಾವ ರೀತಿ ಪ್ರಶ್ನಾವಳಿಗಳನ್ನು ನೀಡಬೇಕೆಂದು ತೀರ್ಮಾನಿಸಲಾಯಿತು.

ಮಾರ್ಗದರ್ಶಕರ ಮಾರ್ಗದರ್ಶನದಂತೆ 'ಎ', 'ಬಿ', 'ಸಿ' ವಿಭಾಗಗಳಲ್ಲಿ ಪ್ರಶ್ನಾವಳಿಗಳನ್ನು ರಚಿಸಲಾಯಿತು. 'ಎ' ವಿಭಾಗದಲ್ಲಿ ಸಜಾತಿ ಬತ್ತಕ್ಷರಗಳು, ವಿಜಾತಿ ಬತ್ತಕ್ಷರಗಳು, ಸಂಯುಕ್ತಾಕ್ಷರಗಳಿರುವ ೨೦ ಪದಗಳನ್ನು ನೀಡಲಾಗಿದೆ. 'ಬಿ' ವಿಭಾಗದಲ್ಲಿ ಪಾಠದಲ್ಲಿ ಇರುವ ಬತ್ತಕ್ಷರಗಳಿರುವ ೧೦ ವಾಕ್ಯಗಳನ್ನು ನೀಡಲಾಗಿದೆ ಹಾಗೂ 'ಸಿ' ವಿಭಾಗದಲ್ಲಿ ಪಾಠದಲ್ಲಿ ಇರುವ ವಿಷಯವನ್ನೇ ಆಯ್ಕೆ ಮಾಡಿ ಟಿಪ್ಪಣಿ ಬರೆಯಲು ನೀಡಲಾಗಿದೆ. ಹೀಗೆ ಪರೀಕ್ಷೆಯನ್ನು ನಡೆಸಿ ವಿದ್ಯಾರ್ಥಿಗಳ ಬರವಣಿಗೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ದೋಷಗಳನ್ನು ಗುರುತಿಸಿ ಕಾರಣಗಳನ್ನು ಕಂಡು ಹಿಡಿಯಲಾಗಿದೆ.

1. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ


ಕೋಷ್ಟಕ – 4.1

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ನಗರ	72	20.87	15.70	0.38	ವ್ಯತ್ಯಾಸವಿಲ್ಲ
ಗ್ರಾಮೀಣ	72	16.85	15.97		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 0.38 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 142ಕ್ಕೆ ಕಡಿಮೆಯಿದೆ ಆದ್ದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿಲ್ಲ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಯಾವುದೇ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

4.1 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ



2. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ

ಕೋಷ್ಟಕ – 4.2
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಗಂಡು	72	19.19	15.70	0.87	ವ್ಯತ್ಯಾಸವಿಲ್ಲ
ಹೆಣ್ಣು	72	21.5	15.97		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 0.87 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 142ಕ್ಕೆ ಕಡಿಮೆಯಿದೆ ಆದ್ದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿಲ್ಲ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಯಾವುದೇ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

4.2. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲಾ ಮಕ್ಕಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ



3. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ


ಕೋಷ್ಟಕ – 4.3

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಕನ್ನಡ ಮಾಧ್ಯಮ	96	25.4	14.54	5.89	ವ್ಯತ್ಯಾಸವಿದೆ
ಆಂಗ್ಲ ಮಾಧ್ಯಮ	48	10.19	13.22		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 5.89 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 142ಕ್ಕೆ ಹೆಚ್ಚಾಗಿರುವುದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿದೆ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿದೆ.

4.3 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಕನ್ನಡ ಮತ್ತು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ




4. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ

ಕೋಷ್ಟಕ – 4.4
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಸರ್ಕಾರಿ	48	22.92	12.61	1.73	ವ್ಯತ್ಯಾಸವಿಲ್ಲ
ಅನುದಾನಿತ	48	27.98	15.98		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ ‘t’ ಮೌಲ್ಯವು 1.73 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 94 ಕ್ಕೆ ಕಡಿಮೆ ಇರುವುದರಿಂದ ಪಡೆದ ‘t’ ಮೌಲ್ಯವು ಮಹತ್ವದ್ದಾಗಿಲ್ಲ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

4.4 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ



5. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ


ಕೋಷ್ಟಕ – 4.5

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಸರ್ಕಾರಿ	48	22.92	12.61	4.84	ವ್ಯತ್ಯಾಸವಿದೆ
ಅನುದಾನರಹಿತ	48	10.19	13.22		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 4.84 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 94 ಕ್ಕೆ ಹೆಚ್ಚಾಗಿರುವುದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿದೆ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿದೆ.

4.5 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ




6. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅನುದಾನಿತ ಮತ್ತು ಅನುದಾರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ

ಕೋಷ್ಟಕ – 4.6
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಅನುದಾನಿತ	48	27.98	15.85	5.98	ವ್ಯತ್ಯಾಸವಿದೆ
ಅನುದಾನರಹಿತ	48	10.19	13.22		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 5.98 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 94 ಕ್ಕೆ ಹೆಚ್ಚಾಗಿರುವುದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿದೆ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿದೆ.

4.6 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನರಹಿತ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ



7. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ


ಕೋಷ್ಟಕ – 4.7

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು (ಗಂಡು)	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಗ್ರಾಮೀಣ	36	20.17	15.83	0.55	ವ್ಯತ್ಯಾಸವಿಲ್ಲ
ನಗರ	36	18.22	14.07		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 0.55 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 70 ಕ್ಕೆ ಕಡಿಮೆ ಇರುವುದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿಲ್ಲ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

4.7 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ




8. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ವಿವರಣೆ

ಕೋಷ್ಟಕ - 4.8
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶ

ಚಲಕಗಳು (ಹೆಣ್ಣು)	ಸಂಖ್ಯೆ (N)	ಸರಾಸರಿ (M)	ಮಾನಕ ವಿಚಲನೆ(SD)	ಮೌಲ್ಯ (t)	0.05 & 0.01 ಮಟ್ಟದಲ್ಲಿನ ವ್ಯತ್ಯಾಸ
ಗ್ರಾಮೀಣ	36	21.58	16.08	0.028	ವ್ಯತ್ಯಾಸವಿಲ್ಲ
ನಗರ	36	21.47	17.03		

ಈ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಪಡೆದ 't' ಮೌಲ್ಯವು 0.028 ಆಗಿದ್ದು, ಕೋಷ್ಟಕದ ಮೌಲ್ಯಕ್ಕೆ (1.98) df 70 ಕ್ಕೆ ಕಡಿಮೆ ಇರುವುದರಿಂದ ಪಡೆದ 't' ಮೌಲ್ಯವು ಮಹತ್ವದ್ದಾಗಿಲ್ಲ. ಆದ್ದರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಹೆಣ್ಣು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶದಲ್ಲಿ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

4.8 ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಗಂಡು ವಿದ್ಯಾರ್ಥಿಗಳು ಹೊಂದಿರುವ ಬರವಣಿಗೆ ದೋಷಗಳ ಪರೀಕ್ಷಾ ಫಲಿತಾಂಶವನ್ನು ತೋರಿಸುವ ಸ್ತಂಭಲೇಖ





ಅಧ್ಯಾಯ–5

ಅಧ್ಯಯನದ ಸಾರಾಂಶ ಮತ್ತು ತೀರ್ಮಾನಗಳು

ಅಧ್ಯಾಯ – 5

ಅಧ್ಯಯನದ ಸಾರಾಂಶ ಮತ್ತು ತೀರ್ಮಾನಗಳು

ಪ್ರಸ್ತುತ ಅಧ್ಯಯನವು 7ನೇ ತರಗತಿಯ ವಿದ್ಯಾರ್ಥಿಗಳ ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆಯ ದೋಷ, ಸಮೀಕ್ಷಾ ಅಧ್ಯಯನ ಕುರಿತು ಕೈಗೊಂಡಿದ್ದ ಸಮೀಕ್ಷಾ ಅಧ್ಯಯನದಲ್ಲಿ ಕಂಡು ಬರುವಂತಹ ಪ್ರಮುಖ ಫಲಿತಗಳನ್ನು ಮತ್ತು ತೀರ್ಮಾನಗಳನ್ನು ಒಳಗೊಂಡಿದೆ.

5.1 ಪೀಠಿಕೆ

ಸಂವಹನಕ್ಕಿರುವ ಅತ್ಯಂತ ಸರಳ ಹಾಗೂ ಆಕರ್ಷಕ ಮಾಧ್ಯಮ ಎಂದರೆ ಭಾಷೆ. ಇದು ನಿಂತ ನೀರಾಗದೆ ನಿರಂತರವಾಗಿ ಹರಿಯುವ ಪ್ರವಾಹ. ಇದರ ಕಲಿಕೆಗೆ ಅನುಕರಣೆ ಎಷ್ಟು ಅವಶ್ಯಕವೋ ಅಷ್ಟೇ ಅವಶ್ಯಕವಾದದು ಭಾಷಾ ಕೌಶಲ್ಯಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆ. ಭಾಷಾ ಕಲಿಕೆಯ ಅನುಕ್ರಮದ ಹಂತವನ್ನು ಡಾ.ಎಂ ಚಿದಾನಂದ ಮೂರ್ತಿಯವರು "ಭಾಷೆಯನ್ನು ಮೊದಲು ಅರಿಯುತ್ತೇವೆ, ನಂತರ ಒರೆಯುತ್ತೇವೆ, ಆನಂತರ ಬರೆಯುತ್ತೇವೆ" ಎಂದಿದ್ದಾರೆ. ಅಂದರೆ ಇದರಿಂದ ಭಾಷಾ ಕಲಿಕೆಗೆ ಬರವಣಿಗೆ ಎಷ್ಟು ಪ್ರಧಾನ ಪಾತ್ರವನ್ನು ವಹಿಸುತ್ತದೆ ಎಂದು ತಿಳಿಯಬಹುದು.

ಹೀಗೆ ಒಂದು ಭಾಷೆಯು ಸ್ಪಷ್ಟ ಉಚ್ಚಾರಣೆ ಮತ್ತು ಬರವಣಿಗೆಯ ಮೂಲಕ ಅದರ ಬಳಕೆ ಉತ್ತಮಗೊಳ್ಳುತ್ತದೆ. ಆದರೆ ಅಂತಹ ಬರಹಗಳಲ್ಲಿ ಅನೇಕ ಕಾಗುಣಿತ ದೋಷಗಳು ಕಂಡುಬರುತ್ತವೆ. ಅವುಗಳ ಲಿಪಿ–ಚಿಹ್ನೆಗಳನ್ನು ಸರಿಯಾಗಿ ಬಳಸಬೇಕಾಗುತ್ತದೆ. ಇವು ಅಕ್ಷರಗಳಿಂದ ಕೂಡಿರುತ್ತದೆ. ಅಕ್ಷರ ಎನ್ನುವುದು ವರ್ಣ ಲಾಲಿತ್ಯದ ಅತಿ ಕನಿಷ್ಠತಮ ಘಟಕ. ಹಾಗೆಯೇ ಇದು ಸ್ಥಾನ ಮತ್ತು ಕರಣಗಳ ಫಲಶೃತಿಯಾಗಿದೆ. ಹೀಗೆ ವರ್ಣ, ಪದ, ವಾಕ್ಯಗಳಿಂದ ಭಾಷೆಯ ಲಿಪಿ ಆರಂಭವಾಗುತ್ತದೆ. ಯಾವುದೇ ಭಾಷಾ ಲಿಪಿಯನ್ನು ಹೊಂದಿರುವ ಪ್ರಪಂಚದ ಪ್ರತಿಯೊಂದು ಭಾಷೆಯಲ್ಲಿಯೂ "ಬರವಣಿಗೆಯ ದೋಷಗಳು" ಉಂಟಾಗುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಹಾಗೆಯೇ ನಮ್ಮ ಕನ್ನಡ ಭಾಷೆಯ ಬಳಕೆಯಲ್ಲಿಯೂ ಕೂಡ ಬರವಣಿಗೆಯ ದೋಷಗಳುಂಟಾಗುವುದನ್ನು ನೋಡಬಹುದು. ಏಕೆಂದರೆ ಕನ್ನಡ ಭಾಷಾ ಬಳಕೆಯಲ್ಲಿ ಶುದ್ಧವಾಗಿ ಉಚ್ಚರಿಸುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರುವುದು ಅಪೇಕ್ಷಣೀಯ.

ಉದಾ: ಕೃಷ್ಣ ಎಂಬಲ್ಲಿ ಕ್ರಷ್ಣ ಎನ್ನವುದು, 'ಹಾಲು' ಬರೆಯುವಲ್ಲಿ 'ಆಲು' ಎಂದು ಬಳಸುವುದು. ಹಾರ್ಧಿಕ ಎಂಬಲ್ಲಿ 'ಹಾರ್ಥಿಕ' ಎಂಬುದಾಗಿ ಹಾಗೆಯೇ 'ಶುಭಾಷಯ' ವನ್ನು 'ಶುಭಾಶಯ' ಎಂಬುದಾಗಿ 'ಅಳು' ಶಬ್ದವನ್ನು 'ಹಳು' ಎಂಬುದಾಗಿ ಬಳಸುತ್ತಿದ್ದಾರೆ. ಇದರಿಂದ ಎಂಥೆಂತಹ ತಪ್ಪುಗಳು ಆಗುತ್ತವೆ ಎಂಬುದನ್ನು ನೋಡಬಹುದು.

ಜೆ.ಪಿ ರಾಜರತ್ನಂ ರವರು ಒಮ್ಮೆ ಗುರು–ಶಿಷ್ಯರ ಸಂಬಂಧವನ್ನು ಕುರಿತು "ಟ್ಯಾಂಕ್ ನಲ್ಲಿ ನೀರಿದ್ದರೆ ಮಾತ್ರ ನಲ್ಲಿಯಲ್ಲಿ ನೀರು ಬರುತ್ತದೆ. ಟ್ಯಾಂಕೇ ಖಾಲಿಯಾದರೆ?" ಇದು ಎಷ್ಟು ಸತ್ಯ. ಇಂತಹ ತಪ್ಪುಗಳಿಗೆ ಅವಕಾಶ ಕೊಡದ ರೀತಿಯಲ್ಲಿ ಮಾರ್ಗದರ್ಶನ ಕೊಡಬೇಕಾಗುತ್ತದೆ. ಏಕೆಂದರೆ ಇಂದು ಜೀವನದ ಪ್ರತಿಯೊಂದು ಸನ್ನಿವೇಶವನ್ನು ಬರವಣಿಗೆ ಆಕ್ರಮಿಸಿಕೊಂಡಿರುತ್ತದೆ.

ಹಾಗಾಗಿ ಕನ್ನಡ ಭಾಷೆಯ ಬಳಕೆಯಲ್ಲಿ ಅನೇಕ ಲಿಪಿ–ಚಿಹ್ನೆಗಳಗೆ ಸಂಬಂಧಿಸಿದ ದೋಷಗಳು ಕಂಡುಬರುತ್ತವೆ. ಅದಕ್ಕಾಗಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪ್ರಾಥಮಿಕ ಶಾಲೆಯ 7ನೇ ತರಗತಿ ಮಕ್ಕಳು ಮಾಡುವ ಬರವಣಿಗೆಯ ದೋಷಗಳನ್ನು ಈ ಸಂಪ್ರಬಂಧದಲ್ಲಿ ಸಮೀಕ್ಷೆಯನ್ನು ಕೈಗೊಂಡು ವಿಶ್ಲೇಷಿಸಲಾಗಿದೆ.

5.2. ಅಧ್ಯಯನದ ಅಗತ್ಯತೆ

1) ಬೆಂಗಳೂರು ನಗರ ಮತ್ತು ಗ್ರಾಮೀಣ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಅಥವಾ ಖಾಸಗಿ ಪ್ರಾಥಮಿಕ ಶಾಲೆಗಳ 7ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆ ದೋಷಗಳು ಹೆಚ್ಚಾಗಿ ಕಂಡುಬರುತ್ತಿರುವ ಕಾರಣದಿಂದ ಇದರ ಅಧ್ಯಯನ ಅತಿ ಮುಖ್ಯವಾಗಿದೆ.
2) ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ದೃಷ್ಟಿಯಿಂದ ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ ಮತ್ತು ಬರವಣಿಗೆ ಕಲಿಸುವುದು ಅಗತ್ಯವಾಗಿದೆ.
3) ಪ್ರಸ್ತುತ ಪ್ರಾಥಮಿಕ ಶಾಲೆಗಳ ಮೇಲೆ ಪರಭಾಷೆಗಳು ಹೆಚ್ಚು ಪ್ರಭಾವ ಬೀರುತ್ತಿರುವುದರಿಂದ ಕನ್ನಡ ಭಾಷೆಯ ಮಹತ್ವವನ್ನು ತಿಳಿಸುವುದು ಅಗತ್ಯವಾಗಿದೆ.
4) ಕಿರು ಸಂಶೋಧನೆಯನ್ನು ಕೈಗೊಂಡ ಸಂಶೋಧಕರು ಪ್ರಸ್ತುತ ಪ್ರಾಥಮಿಕ ಶಾಲೆಯ ಶಿಕ್ಷಕರಾಗಲು ತರಬೇತಿ ಹೊಂದುತ್ತಿರುವ ಶಿಕ್ಷಕ ತರಬೇತಿ ಸಂಸ್ಥೆಯಲ್ಲಿ (ಡಿ.ಇಡಿ) ಕನ್ನಡ ಭಾಷಾ ಬೋಧನೆಯ ಬಗ್ಗೆ ಬೋಧಿಸುವುದರಿಂದ ಅಧ್ಯಯನ ಅಗತ್ಯವಾಗಿದೆ.
5) ಸಂಶೋಧಕರು ತಮ್ಮ ಸಂಸ್ಥೆಯ ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ಬೋಧನೆ ಮಾಡುವಾಗ ಎದುರಾಗುವ ಸಮಸ್ಯೆಗಳನ್ನು ಗುರುತಿಸಿಕೊಳ್ಳಲು ಅಧ್ಯಯನ ಅಗತ್ಯವಾಗಿದೆ.
6) ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆಯನ್ನು ಆಸ್ವಾದಿಸುವ ಹಾಗೂ ಪ್ರಶಂಸಿಸುವ ಗುಣವನ್ನು ಬೆಳೆಸಬೇಕಾಗಿರುವದರಿಂದ ಅಧ್ಯಯನ ಅಗತ್ಯವಾಗಿದೆ.
7) ಪ್ರಸ್ತುತ ಶಾಲೆಗಳು ಉದ್ಯಾನನಗರಿಯಾದ ಬೆಂಗಳೂರು ನಗರದಲ್ಲಿ ಹಾಗೂ ಉದ್ಯಾನ ನಗರಿಯ ಪಕ್ಕದಲ್ಲಿ ಗ್ರಾಮೀಣ ಜಿಲ್ಲೆ ನೆಲಮಂಗಲ ಹಾಗೂ ದೊಡ್ಡಬಳ್ಳಾಪುರದಲ್ಲಿ ಇರುವ ಕಾರಣ ಈ ಶಾಲೆಗಳ ಮಕ್ಕಳ ಭಾಷೆಯ ಮೇಲೆ ಪರಭಾಷೆಯ ಪ್ರಭಾವ ಹೆಚ್ಚಾಗಿರುದರಿಂದ ಭಾಷಾ ಕಲಿಕೆಯಲ್ಲಿ ಆಸಕ್ತಿ ಕಡಿಮೆಯಾಗಿರುವುದು ಕಂಡು ಬಂದಿದೆ.

6) ಕನ್ನಡ ಭಾಷಾ ಬೋಧಕರು ತಮ್ಮ ಕನ್ನಡ ಭಾಷಾ ಬೋಧನೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಂಡು ಕಲಿಕೆಯನ್ನು ಯಶಸ್ವಿಗೊಳಿಸುವುದು.
7) ವಿದ್ಯಾರ್ಥಿಗಳಿಗೆ ಭಾಷಾ ಕೌಶಲಗಳಾದ ಆಲಿಸುವ ಕೌಶಲ, ಮಾತಿನ ಕೌಶಲ, ಓದಿನ ಕೌಶಲ ಮತ್ತು ಬರವಣಿಗೆ ಕೌಶಲ ಗಳನ್ನು ಅಭಿವೃದ್ಧಿ ಪಡಿಸುವುದು.
8) ಕನ್ನಡ ಭಾಷಾ ಬೋಧನೆಯಲ್ಲಿ ಬರವಣಿಗೆಗೆ ಬೇಕಾದ ಸೂಕ್ತ ಬೋಧನೋಪಕರಣಗಳನ್ನು ವ್ಯವಸ್ಥಿತವಾಗಿ ಬಳಕೆ ಮಾಡಿಕೊಂಡು ಕಲಿಕೆ ಯಶಸ್ವಿಯಾಗುವಂತೆ ಮಾಡುವುದು.
9) ವಿದ್ಯಾರ್ಥಿಗಳ ಭಾಷಾ ಪ್ರೌಢಿಮೆಯನ್ನು ವೃದ್ದಿಸುವುದು
10) ಪ್ರಬಂಧ, ಕಥೆ, ಲೇಖನಗಳನ್ನು ಬರೆಯುವ ಪ್ರೌಢಿಮೆಯನ್ನು ಬೆಳೆಸುವುದು.
11) ಕನ್ನಡ ಭಾಷಾ ಬೋಧನೆಯ ಮೂಲಕ ಸೃಜನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಬೆಳೆಸುವುದು
12) ಕನ್ನಡ ಭಾಷೆಯನ್ನು ಉತ್ತಮ ರೀತಿಯಲ್ಲಿ ಬಳಕೆ ಮಾಡುವ ಸಾಮರ್ಥ್ಯ ಬೆಳೆಸುವುದು
13) ಕರ್ನಾಟಕದಲ್ಲಿ ಕನ್ನಡಿಗರಿಗೆ ಅನ್ನದ ಸಮಸ್ಯೆಯನ್ನು ಹೋಗಲಾಡಿಸುವುದು
14) ಬೆಂಗಳೂರು ನಗರ ಮತ್ತು ಗ್ರಾಮೀಣ ಮಕ್ಕಳನ್ನು ಆಯ್ಕೆ ಮಾಡಿಕೊಂಡ ಸರ್ಕಾರಿ, ಅನುದಾನಿತ, ಮತ್ತು ಖಾಸಗಿ ಶಾಲೆಗಳನ್ನು ವಿಭಾಗಿಸಿಕೊಂಡು ಅಲ್ಲಿನ 7ನೇ ತರಗತಿ ವಿದ್ಯಾರ್ಥಿಗಳಲ್ಲಿ ಅವರ ಕಾಗುಣಿತ ದೋಷದ ಪ್ರಮಾಣವನ್ನು ಸೂಚಿಸುವುದು.

5.4 ಸಮಸ್ಯೆಯ ನಿರೂಪಣೆ

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಸಮಸ್ಯೆಯು ಈ ಕೆಳಕಂಡಂತಿದೆ
"ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿನ ಬರವಣಿಗೆ ದೋಷಗಳು– ಸಮೀಕ್ಷಾ ಅಧ್ಯಯನ"

5.5 ಪ್ರಸ್ತುತ ಸಂಶೋಧನೆಗೆ ಪ್ರಶ್ನಾವಳಿ ಸಿದ್ಧಪಡಿಸಿದ ವಿನ್ಯಾಸ

ಪ್ರಸ್ತುತ ಸಂಶೋಧನೆಯು ಬೆಂಗಳೂರು ನಗರ ಮತ್ತು ಗ್ರಾಮಾಂತರ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರಾಥಮಿಕ ಶಾಲೆಗಳ 7ನೇ ತರಗತಿ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ಬರವಣಿಗೆಯ ದೋಷಗಳು ಕುರಿತು ಸಮೀಕ್ಷಾ ಅಧ್ಯಯನ ಎಂಬ ಸಮಸ್ಯೆಯನ್ನು ಗುರುತಿಸಿಕೊಂಡಿದ್ದಾರೆ. ಈ ಸಂಶೋಧನೆಯು ಬರವಣೆಗೆಯ ದೋಷಗಳನ್ನು ಪತ್ತೆ ಹಚ್ಚಿ ಅದಕ್ಕೆ ಕಾರಣಗಳನ್ನು ಹುಡುಕುವುದಾಗಿದೆ. ಈ ನಿಟ್ಟಿನಲ್ಲಿ ಪ್ರಶ್ನೆಗಳನ್ನು ರಚಿಸಿರುತ್ತದೆ. ಪ್ರಶ್ನಾವಳಿಯು ಮೂರು ರೀತಿಯಿಂದ ಕೂಡಿದ್ದು;

- 'ಎ' ವಿಭಾಗವು 20 ಉಕ್ತಲೇಖನ ಪದಗಳನ್ನು ಒಳಗೊಂಡಿದೆ.
- 'ಬಿ' ವಿಭಾಗವು ಪಾಠದಲ್ಲಿ ಆಯ್ಕೆ ಮಾಡಿಕೊಂಡ 10 ವಾಕ್ಯಗಳನ್ನು ಒಳಗೊಂಡಿದೆ.
- 'ಸಿ' ವಿಭಾಗವು ಪಾಠಗಳಲ್ಲಿ ಆಯ್ಕೆ ಮಾಡಿಕೊಂಟ ಟಿಪ್ಪಣಿ ರೂಪವನ್ನು ಒಳಗೊಂಡಿದೆ.

ಇವೆಲ್ಲವನ್ನು ಒಂದೇ ಪ್ರಶ್ನೆ ಪತ್ರಿಕೆಯಲ್ಲಿ ಕೊಡಲಾಗಿರುತ್ತದೆ. ಈ ಪ್ರಶ್ನೆಗಳನ್ನು "ದರ್ಜಾ ನಿರ್ಧಾರದ ಪ್ರಶ್ನೆಗಳು" ಗುಂಪಿಗೆ ಸೇರಿಸಬಹುದಾಗಿದೆ.

5.6 ನಮೂನೆಯ ವಿವರಣೆಯನ್ನು ಕೋಷ್ಠಕ-ಸ್ತಂಭಲೇಖದ ಫಲಿತಾಂಶಗಳಿಂದ ವಿವರಿಸಲಾಯಿತು.

ಸಂಶೋಧನೆಯಲ್ಲಿ ನಮೂನೆ ಅಥವಾ ಪ್ರತಿದರ್ಶಚಯನವನ್ನು ಆಯ್ಕೆ ಮಾಡುವ ಉದ್ದೇಶದಿಂದ ಕೂಡಾ ಸಂಶೋಧನಾ ಕ್ಷೇತ್ರವನ್ನು ಕುರಿತ ತೀರ್ಮಾನಗಳನ್ನು ಕೈಗೊಳ್ಳಲು ಪ್ರತಿದರ್ಶಚಯನ ಒಂದು ಆಧಾರವನ್ನು ಒದಗಿಸುತ್ತದೆ ಎಂಬ ಕಾರಣದಿಂದ ಒಂದು ಸಂಶೋಧನಾ ಕ್ಷೇತ್ರದಲ್ಲಿನ ಎಲ್ಲಾ ವ್ಯಕ್ತಿಗಳನ್ನು ಅಧ್ಯಯನ ವ್ಯಾಪ್ತಿಯಲ್ಲಿ ತರಬೇಕಾದರೆ ಅಪರಿಮಿತ ಕಾಲ, ಹಣ ವ್ಯಯವಾಗುವುದರಿಂದ ಅತಿ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಫಲಿತಾಂಶಗಳನ್ನು ಪಡೆಯಲು ಪ್ರತಿದರ್ಶಚಯನ ಆಯ್ಕೆ ಸಂಶೋಧಕನಿಗೆ ಅನುವು ಮಾಡಿಕೊಡುತ್ತದೆ. ಸಂಶೋಧನಾ ಕ್ಷೇತ್ರದ ಲಕ್ಷಣಗಳನ್ನು ಮೈಗೂಡಿಸಿಕೊಂಡಿರುವ, ಆ ಕ್ಷೇತ್ರವನ್ನು ಸರ್ವ ವಿಧದಲ್ಲೂ ಪ್ರತಿನಿಧಿಸುವ ಒಂದು ಸಣ್ಣ ಪ್ರತಿರೂಪವೇ ಪ್ರತಿದರ್ಶವೆಂದು ಹೇಳಬಹುದು. ಅಂದರೆ ಕಠಿಣವಾದ ಕೆಲಸವನ್ನು ಸರಳವಾಗಿ ಸಾಧಿಸುವ ಪ್ರಯತ್ನ ಎಂದು ನಮೂನೆಯನ್ನು ಅರ್ಥೈಸಬಹುದಾಗಿದೆ.

ಸಂಶೋಧನೆಯ ಅಥವಾ ಮಾಪನದ ಉದ್ದೇಶಕ್ಕಾಗಿ ವಿವರಸಲ್ಪಟ್ಟು ಸಮಷ್ಟಿಯ ಬಗೆಗೆ ಅವಶ್ಯಕವಾದ ಮಾಹಿತಿ ಸಂಗ್ರಹಿಸುವುದಕ್ಕಾಗಿ ಆ ಸಮಷ್ಟಿಯಿಂದಲೇ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳನ್ನೊಳಗೊಂಡ ಪ್ರತಿನಿಧಿಕ ಗುಂಪನ್ನು ಪ್ರತಿದರ್ಶ ಅಥವಾ ನಮೂನೆ ಎಂದು ಕರೆಯಲಾಗಿದೆ.

5.7 ಪ್ರಸ್ತುತ ಸಂಶೋಧನೆಯಲ್ಲಿ ನಮೂನೆಗಳ ಅಥವಾ ಪ್ರತಿದರ್ಶ ಆಯ್ಕೆಯ ವಿನ್ಯಾಸಗಳನ್ನು ಸಂಖ್ಯಾಶಾಸ್ತ್ರದ ಸಮೀಕ್ಷೆಯಿಂದ ರಚಿಸಲಾಯಿತು

ಪ್ರಸ್ತುತ ಅಧ್ಯಯನದಲ್ಲಿ ಉದ್ದೇಶಿತ ಪ್ರತಿಚಯನ ಅಥವಾ ಸಂಭವನೀಯತೆ ಪ್ರತಿದರ್ಶವನ್ನು ಆಯ್ಕೆ ಮಾಡಲಾಗಿದ್ದು, ಪ್ರತಿದರ್ಶಿಯು ಬೆಂಗಳೂರು ನಗರ ಜಿಲ್ಲೆಯಲ್ಲಿ 2 ಸರ್ಕಾರಿ, 2 ಅನುದಾನಿತ, 2 ಖಾಸಗಿ ಪ್ರಾಥಮಿಕ ಶಾಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ 2 ಸರ್ಕಾರಿ, 2 ಅನುದಾನಿತ, 2 ಖಾಸಗಿ ಪ್ರಾಥಮಿಕ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದೆ.

5.8 ದತ್ತಾಂಶ ಸಂಗ್ರಹಣಾ ವಿಧಾನ

ಸಂಶೋಧಕರು ಮಾರ್ಗದರ್ಶಕರ ಅನುಮತಿಯನ್ನು ಪಡೆದು ವೈಯಕ್ತಿಕವಾಗಿ ಆಯ್ಕೆ ಮಾಡಿಕೊಂಡ ಶಾಲೆಗಳಿಗೆ ಬೇಟಿ ಕೊಟ್ಟಿದ್ದರು. ಭೇಟಿ ಕೊಟ್ಟ ಶಾಲೆಗಳಲ್ಲಿನ ಮುಖ್ಯೋಪಾಧ್ಯಾಯರುಗಳ ಅನುಮತಿಯ ಮೇರೆಗೆ ಅದ್ಯಯನದ ವಿವರಣೆ ಹೇಳಿ ಅವರ ಸಹಕಾರವನ್ನು ಪಡೆದು ಕೊಂಡಿದ್ದರು.

ನಂತರ ಸಂಶೋಧಕರು ಪ್ರಶ್ನಾಪತ್ರಿಕೆಯ ಸಾಕಷ್ಟು ಪ್ರತಿಗಳನ್ನು ತೆಗೆದುಕೊಂಡು ಆಯ್ದ ಶಾಲೆಗಳಲ್ಲಿ ವಿದ್ಯಾರ್ಥಿಗಳಲ್ಲಿಗೆ ಹೋಗಿ ತಮ್ಮನ್ನು ಪರಿಚಯಿಸಿ ಅದ್ಯಯನದ ರೂಪುರೇಷಗಳನ್ನು & ಉದ್ದೇಶಗಳನ್ನು ತಿಳಿಸಿದರು. ನಂತರ ಇದು ಅದ್ಯಯನದ ದೃಷ್ಟಿಯಿಂದ ನಡೆಸುತ್ತಿರುವ ಪರೀಕ್ಷೆಯೆಂದು ತಿಳಿಸಿ ನಿಮ್ಮ ಉತ್ತರಗಳು ಪ್ರಾಮಾಣಿಕವಾಗಿರಲಿ ಎಂದು ಹೇಳಿದರು. ಆ ನಂತರ ಸಂಶೋಧಕರು ಪ್ರಶ್ನಾಪತ್ರಿಕೆಯನ್ನು ಹೇಗೆ ಉತ್ತರಿಸಬೇಕು ಮತ್ತು ವೈಯಕ್ತಿಕ ವಿವರಗಳನ್ನು ಎಲ್ಲಿ ತುಂಬಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಪ್ರತಿಕ್ರಿಯಿಸಲು ಸಕಷ್ಟು ಸಮಯಾವಕಾಶ ನೀಡಲಾಯಿತು. ಅದಾದ ನಂತರ ಪ್ರತಿಕ್ರಿಯಿಸಿದ ಉತ್ತರ ಪ್ರತಿಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಅವುಗಳನ್ನು ಮೌಲ್ಯಮಾಪನ ಮಾಡಿ ದತ್ತಾಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಯಿತು.

5.9 ಅಧ್ಯಯನದಿಂದ ಕಂಡುಬಂದ ತೀರ್ಮಾನಗಳು

ಸಂಶೋಧಕರು ವೀಕ್ಷಿಸಿದಂತೆ ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಯ ಪ್ರಾಥಮಿಕ ಶಾಲೆಯ ಮಕ್ಕಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳ ಫಲಿತಾಂಶಗಳು ಈ ಕೆಳಕಂಡಂತಿವೆ

ವಿಶ್ಲೇಷಿಸಿದ ದತ್ತಾಂಶಗಳಿಂದ ಪಡೆದಂತಹ ಫಲಿತಾಂಶಗಳು

- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.
- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಕನ್ನಡ ಮತ್ತು ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಗುರುತಿಸಬಹುದಾದ ವ್ಯತ್ಯಾಸವಿದೆ.
- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.
- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಮತ್ತು ಅನುದಾನರಹಿತ ಶಾಲಾ ವಿದ್ಯಾರ್ಥಿಗಳು ಹೊಂದಿರುವ ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಗುರುತಿಸಬಹುದಾದ ವ್ಯತ್ಯಾಸವಿದೆ.
- ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಅನುದಾನಿತ ಮತ್ತು ಅನುದಾನರಹಿತ ಶಾಲಾ ವಿದ್ಯಾರ್ಥಿಗಳ ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.
- ಬೆಂಗಳೂರು ಜಿಲ್ಲೆಯ ಗ್ರಾಮೀಣ ಮತ್ತು ನಗರದ ಗಂಡು ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.
- ಬೆಂಗಳೂರು ಜಿಲ್ಲೆಯ ಗ್ರಾಮೀಣ ಮತ್ತು ನಗರದ ಹೆಣ್ಣು ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಹೊಂದಿರುವ ಬರವಣಿಗೆ ದೋಷಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದಂತಹ ಗುರುತಿಸಬಹುದಾದ ವ್ಯತ್ಯಾಸವಿಲ್ಲ.

5.10 ಪ್ರಸ್ತುತ ಸಂಶೋಧನೆಯ ಇತಿಮಿತಿಗಳು

- ಈ ಅಧ್ಯಯನ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿದೆ.
- ಈ ಪ್ರಸ್ತುತ ಅಧ್ಯಯನ ಬೆಂಗಳೂರು ಜಿಲ್ಲೆಯ ನಗರ ಮತ್ತು ಗ್ರಾಮೀಣ ಸೇರಿದಂತೆ ಹನ್ನೆರಡು ಶಾಲೆಗಳ 144 ವಿದ್ಯಾರ್ಥಿಗಳಿಗೆ ಸೀಮಿತವಾಗಿದೆ.

- ಈ ಅಧ್ಯಯನ ತರಗತಿ, ವಯಸ್ಸು, ಮತ್ತು ಕನ್ನಡ ಭಾಷೆ ಒಳಗೊಂಡಂತೆ ಈ ಚರಾಂಶಗಳಿಗೆ ಮಾತ್ರ ಸೀಮಿತವಾಗಿದೆ.

5.11.ಮುಂದಿನ ಸಂಶೋಧನೆಗೆ ಸಲಹೆಗಳು

ಈ ಪ್ರಸ್ತುತ ಸಂಶೋಧನೆಯಿಂದ ಸಂಶೋಧಕರು ಗಳಿಸಿರುವ ಅನುಭವಗಳ ಮೇಲೆ ಮುಂದಿನ ಸಂಶೋಧನೆಗಳಿಗೆ ಈ ಕೆಳಕಂಡ ಸಲಹೆಗಳನ್ನು ನೀಡಿರುತ್ತಾರೆ.

- ಈ ಪ್ರಸ್ತುತ ಅಧ್ಯಯನವು ಬೆಂಗಳೂರು ಜಿಲ್ಲೆಯ ಹನ್ನರಡು ಶಾಲೆಗಳಲ್ಲಿ ಮಾತ್ರ ಕೈಗೊಳ್ಳಲಾಗಿದೆ ಮುಂದಿನ ಸಂಶೋಧಕರು ಇನ್ನು ಹೆಚ್ಚು ಸಂಖ್ಯೆಯ ಶಾಲೆಗಳಲ್ಲಿ ಕೈಗೊಳ್ಳಬಹುದು.
- ಈ ಅಧ್ಯಯನವು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಕನ್ನಡ ಭಾಷಾ ಬರವಣಿಗೆ ದೋಷಗಳಿಗೆ ಸಂಬಂಧಿಸಿದುದಾಗಿದೆ ಮುಂದಿನ ಸಂಶೋಧಕರು ಬೇರೆ ಭಾಷೆಯಲ್ಲಿ ಅದ್ಯಯನ ಕೈಗೊಳ್ಳಬಹುದು.
- ಇದು ಪ್ರಾಥಮಿಕ ಶಾಲಾ ತರಗತಿಗೆ ಸೀಮಿತವಾದುದರಿಂದ ಇನ್ನಿತರ ತರಗತಿಗಳಲ್ಲಿ ಸಂಶೋಧನೆ ಕೈಗೊಳ್ಳಬಹುದು.
- ಈ ಅಧ್ಯಯನ ಬರವಣಿಗೆ ದೋಷದ ಕೆಲವು ಅಂಶಗಳಿಗೆ ಮಾತ್ರ ಸೀಮಿತವಾಗಿದೆ ಮುಂದಿನ ಸಂಶೋಧಕರು ಇನ್ನು ಹೆಚ್ಚಿನ ದೋಷಗಳನ್ನು ತೆಗೆದು ಕೊಳ್ಳಬಹುದು.

<u>ಅಡಿ ಟಿಪ್ಪಣಿ</u>

1. *ಕೋಷ್ಟಕ* : ವಸ್ತುಗಳ ಅಳತೆ, ಪ್ರಮಾಣಗಳು ಹಾಗೂ ಅವುಗಳ ಅಂಕಿ ಅಂಶಗಳು ಮುಂತಾದವುಗಳ ವಿವರ ತಃಖ್ತೆ.
2. *ಸ್ಥಂಭಲೇಖ*: ಅಂಕಿಅಂಶಗಳನ್ನು ಚಿತ್ರಗಳ ಮೂಲಕ ತೋರಿಸುವ ಚಿತ್ರ
3. *ಚರಾಂಶ*: ಯಾವುದೇ ಸನ್ನಿವೇಷದ ವೀಕ್ಷಣೆ ಮತ್ತು ನಿರ್ವಹಣೆಗಳ ಮೇಲೆ ಪ್ರಭಾವ ಬೀರುವ ಅಂಶ
4. *ಬರವಣಿಗೆ ದೋಷಗಳು:* ವಿದ್ಯಾರ್ಥಿಗಳು ಬರವಣಿಗೆಯಲ್ಲಿ ಹೊಂದಿರುವ ನ್ಯೂನತೆಗಳು



ಆಧಾರ ಗ್ರಂಥಗಳು

ಆಧಾರ ಗ್ರಂಥಗಳು

- ಅನುಸೂಯ ವಿ ಪರಗಿ. (2004). ಮಾತೃಭಾಷೆ–ಕನ್ನಡ ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ.
- ಅನಂತರಾಯ. (2004). ಕನ್ನಡ ಭಾಷಾ ಬೋಧನೆ. ವಿವೇಕ ಪ್ರಕಾಶನ. ಮೈಸೂರು.
- ಅನ್ವರ್ ಪಾಣಿ (1989). ಗೀತಾ ಸಿ. ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- ಅಹಮದ್ ನಗರದ ಎ.ಇ ಶೈಕ್ಷಣಿಕ ಸಂಸ್ಥೆ. (1978). ಗೀತಾ ಸಿ. ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- ಬಸಪ್ಪ ಎ. (2007). ಶೈಕ್ಷಣಿಕ ಸಂಶೋಧನಾ ವಿಧಾನ. ಮದಕರಿ ಪ್ರಕಾಶನ. ಗದಗ
- ಬಿಡ್. (1980) ಗೀತಾ ಸಿ. ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- ಚಾರ್ಲ್ಸ್ ಡಾರ್ವಿನ್. (2004). ಅನಂತರಾಯ. (2204). ಕನ್ನಡ ಭಾಷಾ ಬೋಧನೆ. ವಿವೇಕ ಪ್ರಕಾಶನ. ಮೈಸೂರು.
- ಚಿನ್ನಸ್ವಾಮಿ ಡಿ. (1997). In- Hemamalini H.C Effectiveness of an integrated approach on the ability to use verbs forms among the students of standard IX. Unpublished Ph.D Thiesis. Mysore University
- ಡಿ.ಎನ್.ಎ. ಕ್ಲಾರಿಸ್. ಮೇರಿ ಮತ್ತು ಜಾಯ್ಸ್ (1999). In- Hemamalini H.C Effectiveness of an integrated approach on the ability to use verbs forms among the students of standard IX. Unpublished Ph.D Thiesis. Mysore University
- ಡಿ.ಎಸ್.ಇ.ಆರ್.ಟಿ (1970) ಗೀತಾ ಸಿ. ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.

- ಗುಂಡಪ್ಪ.ಡಿ.ವಿ (2002). ಕನ್ನಡ ಸಾಹಿತ್ಯ ಮತ್ತು ನುಡಿ. ಚೇತನ ಪ್ರಕಾಶನ. ಮೈಸೂರು.
- ಗೀತಾ ಸಿ. (2002) ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- Goash B.N (1982). Scientific methods and social Research studying publishing private Ltd. New Delhi.
- ಗೋಕಾಕ್. (2004) In- ಅನುಸೂಯ ವಿ ಪರಗಿ. ಮಾತೃಭಾಷೆ-ಕನ್ನಡ ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ.
- ಜಂತಲಿ. (1988). ಸುಭೋಧ ಕನ್ನಡ ಭಾಷಾ ಬೋಧನೆ. ಭಾರತ ಪ್ರಕಾಶನ. ಗದಗ
- ಜಕಾರಿಯಾ ಮತ್ತು ರೋಷನ್. (1999). In- Hemamalini H.C Effectiveness of an integrated approach on the ability to use verbs forms among the students of standard IX. Unpublished Ph.D Thiesis. Mysore University
- ಜೋಸ್ ದೀಪ್ (1998). In- Hemamalini H.C Effectiveness of an integrated approach on the ability to use verbs forms among the students of standard IX. Unpublished Ph.D Thiesis. Mysore University
- ಕನ್ನಡ-ಸಂಪಾದನೆ. (1990). ಕನ್ನಡಿಗ ಜನಪ್ರಿಯ ಪುಸ್ತಕ ಮಾಲೆ. (1990). ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು.
- ಕರಜಗಿ.ಬಿ.ಡಿ (1999) ಸುಭೋಧ ಕನ್ನಡ ಭಾಷಾ ಬೋಧನೆ. ಭಾರತ ಪ್ರಕಾಶನ. ಗದಗ
- ಕೃಷ್ಣಪ್ಪ. ಸಿ (1990). ಶಾಲೆಗಳಲ್ಲಿ ಕನ್ನಡ ಬೋಧನೆ. ಗೀತಾ ಪ್ರಕಾಶನ. ಮೈಸೂರು.
- ಕೃಷ್ಣಪ್ಪ. ಎಸ್ (1983). ಕನ್ನಡ ಬೋಧನೆ. ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾಲಯ
- ಕೃಷ್ಣಶಾಸ್ತ್ರಿ.ಎ.ಆರ್. (1988) ಕನ್ನಡ ಭಾಷಾ ಬೋಧನೆ. ವಿದ್ಯಾನಿಧಿ ಪ್ರಕಾಶನ. ಗದಗ
- ಕುವೆಂಪು. (2004) In- ಅನುಸೂಯ ವಿ ಪರಗಿ. ಮಾತೃಭಾಷೆ-ಕನ್ನಡ ತತ್ವ ಮತ್ತು ಬೋಧನಾ ಮಾರ್ಗ. ವಿವೇಕ ಪ್ರಕಾಶನ. ಚಿಕ್ಕಬಳ್ಳಾಪುರ.
- ಕೊಂಗವಾಡ.ಎನ್.ಬಿ. 2002. ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು

- Kothari C.R. Research Methodology, methods and techniques, wiley Eastern Limited, New Delhi
- Koul Lokesh. (1988). Methodology of Educational Reseach. Vikas Publishing House Private Ltd. New Delhi.
- ಲಕ್ಷ್ಮೀ ಎನ್. (2005). ಶೈಕ್ಷಣಿಕ ಸಂಶೋಧನ ವಿಧಾನ. ವಿದ್ಯಾನಿಧಿ ಪ್ರಕಾಶನ. ಗದಗ.
- Monly.G.J. 1964 The Science of Educational Research ND Eurasia Publishing House
- ನಂಜೇಗೌಡ. ಎಚ್. (2000). ಕಡ್ಡಾಯ ಕನ್ನಡ. ಚೇತನ ಪ್ರಕಾಶನ. ಮೈಸೂರು.
- ಓಬಳೇಶ ಘಟ್ಟಿ. ಆರ್. (2001) ಭಾಷೆ ಮತ್ತು ಕನ್ನಡ ಭಾಷಾ ಬೋಧನೆ. ವಿದ್ಯಾನಿಧಿ ಪ್ರಕಾಶನ. ಗದಗ
- ರಾಮಚಂದ್ರ (1998) ಸುಭೋಧ ಕನ್ನಡ ಭಾಷಾ ಬೋಧನೆ. ಭಾರತ ಪ್ರಕಾಶನ. ಧಾರವಾಡ.
- ರಾಮಚಂದ್ರ ರಾಯ. (1998). ಕನ್ನಡ ಭಾಷಾ ಬೋಧನೆ. ವಿದ್ಯಾನಿಧಿ ಪ್ರಕಾಶನ. ಗದಗ
- ರುದ್ರಾರಾಧ್ಯ. ಆರ್. (2007) ಉದಯೋನ್ಮುಖ ಭಾರತದಲ್ಲಿ ಶಿಕ್ಷಣದ ಮೂಲತತ್ವಗಳು
- ಸುಬ್ರಮಣ್ಯಂ. ಎಂ. (1974) ಗೀತಾ ಸಿ. ಪ್ರೌಢಶಾಲಾ ಕನ್ನಡ ಭಾಷಾ ಬೋಧನಾ ವಿಧಾನ ತರಬೇತಿ ಶಿಕ್ಷಕರಲ್ಲಿರುವ ಕನ್ನಡ ವ್ಯಾಕರಣ ಕೊರತೆಗಳು ಮತ್ತು ಪರಿಹಾರ ಕ್ರಮ. ಅಪ್ರಕಟಿತ ಪ್ರೌಢ ಪ್ರಬಂಧ. ಮೈಸೂರು ವಿಶ್ವವಿದ್ಯಾಲಯ.
- ಡಾ.ಶೀಲಾದೇವಿ.ಸ. ಮಳೀಮಠ್. ವಚನ ಮತ್ತು ಸಮೂಹ ಸಂವಹನ ಅಂತರ್ ಶಿಸ್ತೀಯ ಅಧ್ಯಯನ. ಪಿ.ಹೆಚ್.ಡಿ ಪ್ರಬಂಧ. ಬಿ.ಹೆಚ್.ಯು. ವಾರಣಾಸಿ
- Varma M. 1965 An Introduction to Educations and psychological Research. Asia Publishing Bombay
- ಯಾದವಾಡ.ಎಸ್.ಬಿ (2005). ವಿಷಯಾಧಾರಿತ ಕನ್ನಡ ಭಾಷಾ ಬೋಧನೆ. ಶಿವಪ್ರಕಾಶನ. ಮೈಸೂರು.
- ಯಶೋಧರ.ಕೆ (2006) ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ. ಶಿಬಾ ಪ್ರಕಾಶನ. ಮೈಸೂರು.



ಅನುಬಂಧಗಳು



ಅನುಬಂಧ 1

ವಿದ್ಯಾರ್ಥಿಯ ವೈಯಕ್ತಿಕ ವಿವರ

1. ಹೆಸರು : ಲಿಂಗ: (ಗಂಡು/ಹೆಣ್ಣು)

2. ತರಗತಿ :

3. ಶಾಲೆ :

4. ಶಾಲಾ ಮಾಧ್ಯಮ: (ಕನ್ನಡ/ಆಂಗ್ಲ/ಉರ್ದು):

5. ತಂದೆ/ತಾಯಿಯ ಹೆಸರು: . ವೃತ್ತಿ :

6. ಮಾತೃ ಭಾಷೆ:

7. ಧರ್ಮ: ಜಾತಿ:

1. ಶಿಕ್ಷಕರು ಹೇಳುವ ಶಬ್ದಗಳನ್ನು ಕ್ರಮವಾಗಿ ಕೆಳಗಿರುವ ಚೌಕಗಳಲ್ಲಿ ಬರೆಯಿರಿ

1	ಮಹಾಬಾಹು	11	ನಿಶ್ಯಕ್ತ
2	ಸೌರಭ	12	ಪಾಶ್ಚಾತ್ಯ
3	ಆರಾಧಿಸು	13	ಕಲ್ಪನಾಶಕ್ತಿ
4	ಭಾವಪರವಶ	14	ಭಾವೈಕ್ಯತೆ
5	ಮುಂದಾಲೋಚನೆ	15	ವಿಶ್ವ ಬ್ರಾತೃತ್ವ
6	ಪಾತರಗಿತ್ತಿ	16	ಸ್ವಾತಂತ್ರ್ಯ
7	ಕೆಂಡಗಣ್ಣು	17	ಶಸ್ತ್ರಾಸ್ತ್ರ
8	ಹುಲ್ಲುಗಾವಲು	18	ಸಂಸ್ಕೃತಿ
9	ಜಡ್ಡುಗಟ್ಟು	19	ರಾಷ್ಟ್ರ
10	ದಿಕ್ಕುತಪ್ಪು	20	ವೈಶಿಷ್ಟ್ಯ

2. ಶಿಕ್ಷಕರು ಹೇಳುವ ವಾಕ್ಯಗಳನ್ನು ಈ ಕೆಳಗೆ ಒದಗಿಸಲಾಗಿರುವ ಜಾಗದಲ್ಲಿ ಬರೆಯಿರಿ

	ವಾಕ್ಯಗಳು
೧	ಮಕ್ಕಳು ತಾಲೀಮು ನಡೆಸುತ್ತಿದ್ದಾರೆ.
೨	ಜೀವಜಗತ್ತು ವಿವಿಧ ಪ್ರಾಣಿಗಳ ಆಗರ.
೩	ಭಾರತ ದೇಶಕ್ಕೆ ತ್ರಿವರ್ಣ ಧ್ವಜವಿದೆ
೪	ಸಹಾನುಭೂತಿ, ಸಹೃದಯತೆ, ಸಮಾಧಾನ, ಸೌಜನ್ಯಶೀಲರ ಲಕ್ಷಣ.
೫	ಆ ನಾದ ಮಾಧುರ್ಯಕ್ಕೆ ಪಂಡಿತ ಜವಾಹರಲಾಲ ನೆಹರೂ ತಲೆದೂಗಿದರು.
೬	ಬೌದ್ಧ, ಜೈನ ಧರ್ಮಗಳು ಅಹಿಂಸೆಯನ್ನೇ ಪ್ರಧಾನವಾಗಿ ಪ್ರತಿಪಾದಿಸಿವೆ.
೭	ಈ ಸುಂದರ ನಾಡನ್ನು ನೋಡಲು ಗೆಳೆಯ-ಗೆಳತಿಯರ ಗುಂಪಿನೊಂದಿಗೆ ಹೊರಟೆವು.
೮	ಹಸಿವಿನಿಂದ ಮಾಂಸವನ್ನು ಹುಡುಕುತ್ತಿದ್ದ ಹಿಡಿಂಬ ರಾಕ್ಷಸನಿಗೆ ಪಾಂಡವರು ಕಂಡರು.
೯	ಮೂಡಣ ರವಿ ಬೆಟ್ಟಗಳನ್ನು ಸೀಳಿಕೊಂಡು ಕೆಂಗಿರಣದಿಂದ ಸಾಗರವನ್ನು ಇಣುಕಿದ್ದಾನೆ.
೧೦	ವಿಶಿಷ್ಟ ಹಾಸು ಮತ್ತು ಕಾಯಿಗಳನ್ನು ಉಪಯೋಗಿಸಿಕೊಂಡು ಆಡುವ ಆಟ ಚದುರಂಗ.

3. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ

1) **ದೂರದರ್ಶನ** 2) **ಮೊಬೈಲ್** 3) **ಸಿನಿಮಾ** 4) **ನಾಟಕ**

ಅನುಬಂಧ 2

ಸಂಶೋಧಕರು ವಿವಿಧ ಶಾಲೆಗಳಲ್ಲಿ ದತ್ತಾಂಶ ಸಂಗ್ರಹಣೆ ಮಾಡಿದ ಚಿತ್ರಗಳು







